Mr. SPEAKER.—I will see that all the questions which are passed over and held over are included in the list of business to be taken up on Monday.

BUDGET FOR 1962-63—VOTING OF DEMANDS FOR GRANTS.

DEMAND No. 38.-FOREST
70. Forest.

Sri B. RACHAIAH (Minister for Forests and Fisheries).—Sir, on the recommendation of the Governor of Mysore, I beg to move :

"That a sum not exceeding Rs. 3,97,70,000 be granted to the Government to defray the charges which will come in course of payment during the financial year for the period ending 31st day of March 1963, in respect of 'Forest'."

Mr. SPEAKER.—Motion moved :

"That a sum not exceeding Rs. 3,97,70,000 be granted to the Government to defray the charges which will come in course of payment during the financial year for the period ending 31st day of March 1963, in respect of 'Forest'."

Similarly, other Demands *ie*, Demand No. 5—12 Sales Tax, Demand No. 1—4. Taxes on Income other than Corporation Tax, and Demand No. 51—119 Capital outlay on Forests are also before the House. All the cut motions have been circulated. Hon'ble members can speak, covering all these Demands.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಮೊದಲನೆಯದಾಗಿ ಅರಣ್ಯ ಇಲಾಖೆಯ ಮೇಲೆ ಮಾತನಾಡುತ್ತಾ ಈ ಇಲಾಖೆಯ ಕಾರ್ಯಕಲಾಪಗಳು, ಇದರಲ್ಲಿರುವ ಕೆಲವು ಹೆಚ್ಚು ಕಡಮೆ ಮತ್ತು ಇನ್ನೂ ಕೆಲವು ವಿವರಗಳನ್ನು ಆರ್ಥಿಕ ಮಂತ್ರಿಗಳು ವಿವರಿಸಿದ್ದರೆ ಚೆನ್ನಾಗಿತ್ತು. ನಮ್ಮ ಹಿಂದಿನ ಆರ್ಥಿಕ ಸಚಿವರಾದ ಕಂಠಿಯವರೂ ಸಹ ತಮ್ಮ ಭಾಷಣದಲ್ಲಿ ಈ ವಿಚಾರದಲ್ಲಿ ಒಂದು ಮಾತನ್ನು ಕೂಡ ಹೇಳಿಲ್ಲ, ಅಲ್ಲದೆ ಈಗಲೂ ಕೂಡ ಈಗಿನ ಆರ್ಥಿಕ ಸಚಿವರು ಸಹ ಈ ವಿಚಾರದಲ್ಲೇನೂ ಹೇಳಲಿಲ್ಲ ಎಂದು ತಿಳಿಸಬೇಕಾಗಿದೆ.

ಅರಣ್ಯ ಇಲಾಖೆಗೆ ಸಂಭಂಧಿಸಿದ ಅನೇಕ ಕೈಗಾರಿಕೆಗಳಿವೆ. ಅವು ಯಾವ ರೀತಿ ಕೆಲಸ ಮಾಡುತ್ತಿವೆ, ಅವುಗಳಲ್ಲಿ ಹಿಂದೆ ಆಗುತ್ತಿದ್ದ ಲುಕ್ಸಾನನ್ನು ತಪ್ಪಿಸುವುದಕ್ಕೇನು ಕಾರ್ಯಕ್ರಮ ತೆಗೆದುಕೊಂಡಿದೆ, ಅವುಗಳಲ್ಲಿದ್ದ ಲೀಕೇಜ್ ಸರಿಪಡಿಸಲು ಯಾವ ಕ್ರಮ ಕೈಕೊಳ್ಳಲಾಗಿದೆ ಎಂದು ಹೇಳಿದ್ದರೆ ಚೆನ್ನಾಗಿತ್ತು. ಉದಾಹರಣೆಗೆ ತುಮಕೂರಿನಲ್ಲಿ ಫರ್ನಿಚರ್ ವರ್ಕ್‌ಷಾಪ್ ಇದೆ, ಅಲ್ಲಿ ಹಿಂದಿನ ವರ್ಷ ೪೭,೯೯೭ ರೂಪಾಯಿಗಳ ಉತ್ಪತ್ತಿ ಬಂದು ೨೩,೦೦೦ ರೂಪಾಯಿಗಳು ಖರ್ಚಾಗಿವೆ. ಅದೇ ರೀತಿ ಕಳೆದ ವರ್ಷ ೧೯೬೧-೬೨ಕ್ಕೆ ಮೂವತ್ತೊಂದು ಸಾವಿರ ರೂಪಾಯಿಗಳ ಅಂದಾಜು ಮಾಡಿದೆ ಅದರ ಜೊತೆಗೆ ಸಿಬ್ಬಂದಿ ವೆಚ್ಚ ಸೇರಿದರೆ ಉತ್ಪತ್ತಿ ಪೂರ್ಣವಾಗಿ ಹೋಗುತ್ತದೆ, ಅಂದರೆ ಸರ್ಕಾರದಿಂದ ಇದಕ್ಕೆ ಹಾಕಿರುವ ಬಂಡವಾಳ ಮತ್ತು ಒದಗಿಸಿರುವ ರಾಮೆಟೀರಿಯಲ್ಸ್‌ಗೆ ಯಾವ ಬೆಲೆಯೂ ಸರ್ಕಾರಕ್ಕೆ ಬಂದಹಾಗಿಲ್ಲ. ಮೂಕರ್ಗಲ್ ಸಾಮಿಲ್ಸ್‌ನ ಉತ್ಪತ್ತಿ ೧೯೬೦-೬೧ಕ್ಕೆ, ೩,೩೧,೨೬೬ ರೂಪಾಯಿಗಳು, ೧೯೬೧-೬೨ಕ್ಕೆ ನಾಲ್ಕು ಲಕ್ಷ ರೂಪಾಯಿಗಳು ಇರುವಾಗ ರಾಮೆಟೀರಿಯಲ್ಸ್‌ಗೆ ೨,೨೨,೦೦೦ ರೂಪಾಯಿಗಳ ಖರ್ಚು ಮತ್ತು ಸಿಬ್ಬಂದಿಗೆ ೩೦ ಸಾವಿರ ರೂಪಾಯಿಗಳ ಖರ್ಚು ಇದೆ. ಬಂಡವಾಳಕ್ಕೆ ಬಡ್ಡಿಯಿಲ್ಲ. ಈ ರೀತಿಯಿದೆ. ಶಿವಮೊಗ್ಗ ಸಾಮಿಲ್ಸ್‌ನಲ್ಲಿ ಖರ್ಚು ಕಳೆದು ಸ್ವಲ್ಪ ಬರುತ್ತಿದೆ. ಜೋಯ್ಡ ಸಾಮಿಲ್ಸ್‌ನಲ್ಲಿ ಉತ್ಪತ್ತಿ ಸಾಲದು, ಬಂಡವಾಳದ ಲೆಕ್ಕಾಚಾರವೇ ಇಲ್ಲ. ದಾಂಡೇಲಿ ಮಿಲ್‌ನಲ್ಲಿ ೧೯೬೧-೬೨ಕ್ಕೆ ಹದಿನೇಳು ಲಕ್ಷ ಬಂದು ೧೩ ೧/೨ ಲಕ್ಷ ಖರ್ಚಾಗಿದೆ; ಸಿಬ್ಬಂದಿಗೇ ಒಂದು ಲಕ್ಷಬೇಕು. ಈ ವರ್ಷ ೨೦,೯೦,೦೦೦ ಆದಾಯದ ಅಂದಾಜಿದೆ, ೧೯,೫೬,೯೦೦ ರೂಪಾಯಿಗಳ ಖರ್ಚಿದೆ. ಇದರ ಜೊತೆಗೆ ಸಿಬ್ಬಂದಿಗೆ ಒಂದು ಲಕ್ಷ ಹೋದರೆ ೫೦ ಸಾವಿರ ಕೈಯಿಂದ ಕೊಡಬೇಕು. ಇಲ್ಲಿ ರಾಮೆಟೀರಿಯಲ್ಸ್‌ಗೆ ಒಂದು ಕಾಸೂ ಬರುವುದಿಲ್ಲ.

ಈ ರೀತಿ ಅವರು ಖರ್ಚು ಮಾಡಿಕೊಂಡು ಹೋಗುತ್ತಾರೆ. ಆದರಂತೆಯೇ, ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ೧೯೬೦-೬೧ರಲ್ಲಿ ಇಪ್ಪತ್ತೊಂದು ಲಕ್ಷದ ಹನ್ನೆರಡು ಸಾವಿರದ ೯೧೧ ರೂಪಾಯಿಗಳಷ್ಟು ಮರವನ್ನು ಒದಗಿಸಿದ್ದಾರೆ. ಇದನ್ನು ಸಪ್ಲೈ ಮಾಡುವ ಖರ್ಚೇ ಹದಿನೆಂಟು ಲಕ್ಷ ೭೩,೦೦೦ ರೂಪಾಯಿಗಳಾಯಿತು. ಈ ವರ್ಷದ ಲೆಕ್ಕ ತೆಗೆದುಕೊಂಡರೆ, ೫೦ ಲಕ್ಷರೂಪಾಯಿಗಳು ಬರುತ್ತವೆಂದು ನೀವು ನಿರೀಕ್ಷಿಸಿದ್ದೀರಿ ; ಇದಕ್ಕಾಗಿ ಖರ್ಚು ೪೬ ಲಕ್ಷದ ೩೨,೦೦೦ ರೂಪಾಯಿಗಳಾಗುತ್ತವೆಂದು ಹೇಳಿದ್ದೀರಿ. ಇದರ ಜೊತೆಗೆ ಸಪ್ಲೈ ಮಾಡುವ ಸಿಬ್ಬಂದಿಯ ಖರ್ಚನ್ನು ಕೂಡ ಲೆಕ್ಕ ಹಾಕಬೇಕು. ಪೇಪರ್ ಮಿಲ್ ನೋಡಿದರೆ, ಅದರಿಂದ ನಾಲ್ಕು ಲಕ್ಷದ ೪೦,೦೦೦ ರೂಪಾಯಿಗಳು ಬಂದರೆ, ಅಧಕ್ಕೆ ಬೊಂಬು ಮುಂತಾದವುಗಳನ್ನು ಸರಬರಾಜು ಮಾಡುವುದಕ್ಕೆ ನಾಲ್ಕು ಲಕ್ಷದ ೧೦,೦೦೦ ರೂಪಾಯಿಗಳಾಗುತ್ತವೆ.

ಈ ರೀತಿಯಾಗಿ ನಮ್ಮ ದೇಶದ ಕಾಡಿನ ಸಂಪತ್ತು ಹೋಗುತ್ತಿದೆಯೇ ಹೊರತು, ನಮಗೇನೂ ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ಭದ್ರಾವತಿಗೆ ಈ ರೀತಿ ಸರಬರಾಯಿ ಮಾಡುವುದು ಸರಿಯಲ್ಲ. ಬೇಕಾದರೆ ಅವರಿಗೆ ಸಬ್ಸಿಡಿಕೊಡಿ. ಅವರಿಗೆ ಬೇಕಾದಷ್ಟು ಜಮೀನು ಕೊಟ್ಟು ಬೇಕಾದ ಮರವನ್ನು ಬೆಳೆದುಕೊಳ್ಳುವಂತೆ ಹೇಳಿ, ಹೆಚ್ಚಿಗೆ ಮರ ಬೇಕೆಂದರೆ ಇತರರಿಗೆ ಕೊಡುವ ದರಕ್ಕೇ ಕೊಂಡುಕೊಳ್ಳಲಿ. ಇದನ್ನು ಬಿಟ್ಟು ಸರ್ಕಾರದ ಖರ್ಚಿನಿಂದ ಸರ್ಕಾರದ ಸಿಬ್ಬಂದಿಯಿಂದ ಮರಗಳನ್ನು ಈ ರೀತಿ ಕಾರ್ಖಾನೆಗೆ ಒದಗಿಸುವುದರಿಂದ ಸರ್ಕಾರಕ್ಕೆ ಬಹಳ ಲುಕ್ಸಾನಾಗುತ್ತದೆ. ಸಾಮಾನ್ಯವಾಗಿ ಒಬ್ಬ ಬಡ ರೈತನು ತನ್ನ ಮನೆಗೆ ಬಿದಿರು ತರಬೇಕೆಂದರೆ ಗಾಡಿ ಒಂದಕ್ಕೆ ಎರಡು ರೂಪಾಯಿ ಕೇಳುತ್ತೀರಿ. ಎರಡು ಅಣೆ ಕೂಡ ಬಿಡುವುದಿಲ್ಲ. ಇವರಿಗಾದರೆ ಎರಡಾಣೆ ಕೇಳದೆ ಕಾರ್ಖಾನೆಯ ಬಾಗಿಲಿಗೆ ತಲುಪಿಸುತ್ತೀರಿ. ಆಮೇಲೆ ಸೀನಿಯೋರೇಜ್‌ಗೆಂದು ಹೇಳಿ ಕೆಲವು ಅರಣ್ಯಗಳಲ್ಲಿ ಕೆಲಸಕ್ಕೆ ಬಾರದ ಮರಗಳನ್ನು ಅಡಿಗೆ ಮೂರಾಣೆ,

ನಾಲ್ಕಾಣೆಯಂತೆ ಕೊಡುತ್ತಿದ್ದೀರಿ. ಅನೇಕ ವರ್ಷಗಳಿಂದ ಇದಕ್ಕೆ ತಕರಾರು ಮಾಡುತ್ತಲೇ ಇದ್ದೇವೆ. ಇಲ್ಲಿ ಯಶವಂತಪುರದಲ್ಲಿ ಒಂದು ಮರದ ಫ್ಯಾಕ್ಟರಿಯಿದೆ. ಅವರು ಒಬ್ಬರು ರಿಟೈರ್ಡ್ ಫಾರೆಸ್ಟ್ ಕನ್ಸರ್ವೇಟರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ಇಂಥವರು ನಮ್ಮ ಫ್ಯಾಕ್ಟರಿಯಲ್ಲಿದ್ದರೆ, ಅವರು ತಮ್ಮ ಕೈಕೆಳಗಿದ್ದ ಜನರಿಂದ ಎಷ್ಟೋ ವಿಧದಲ್ಲಿ ಉಪಕಾರ ಹೊಂದಬಹುದೆಂದು ಈ ರೀತಿ ಮಾಡಿಕೊಳ್ಳುತ್ತಿದ್ದಾರೆ. ಕೇಂದ್ರ ಸರ್ಕಾರದವರೂ ಕೂಡ ಇತ್ತೀಚೆಗೆ ಖಾಸಗಿ ಕಂಪನಿಗಳವರು ಈ ರೀತಿ ಸರ್ಕಾರಿ ರಿಟೈರ್ಡ್ ನೌಕರರನ್ನು ನೇಮಿಸಿಕೊಂಡು ಸರ್ಕಾರದಿಂದ concessionಗಳನ್ನು ಪಡೆಯುತ್ತಿದ್ದುದನ್ನು ಗಮನಿಸಿ, ಅಂಥವರಿಗೆ ಅವಕಾಶ ಕೊಡುವುದು ತಪ್ಪೆಂದು ಹೇಳಿದ್ದಾರೆ. ತಮ್ಮ ಹಿಂದಿನ ಆಫೀಸರೆಂದು ಹೇಳಿ ಈ ಜನರಿಗೆ ಸರ್ಕಾರದಲ್ಲಿರುವವರು ನಾನಾ ಸೌಲಭ್ಯಗಳನ್ನು ಸುಲಭವಾಗಿ ಕೊಡುತ್ತಿದ್ದಾರೆ. ಈ ರೀತಿಯ ನಡವಳಿಕೆಗಳಿಂದ ಲಕ್ಷಾಂತರ ರೂಪಾಯಿಗಳು ಸರ್ಕಾರಕ್ಕೆ ಲುಕ್ಸಾನಾಗುತ್ತಿದೆ. ಶರಾವತಿ ವ್ಯಾಲಿಯಲ್ಲೂ ಕೂಡ ಇದೇ ರೀತಿ concessionಗಳನ್ನು ಕೊಟ್ಟಿದ್ದಾರೆ. ಅದೂ ಕೂಡ ಎಲ್ಲಾ ತಮ್ಮ ಹಿಂಬಾಲಕರಿಗೇ ಕೊಟ್ಟಿದ್ದಾರೆ !

ಶ್ರೀ ಬಿ. ರಾಚಯ್ಯ.—ರಿಟೈರ್ಡ್ ಆಫೀಸರುಗಳನ್ನು ಪ್ರೈವೇಟ್ ಕಂಪೆನಿಗಳವರು ನೇಮಿಸಿಕೊಳ್ಳುವುದನ್ನು ಹೇಗೆ ತಪ್ಪಿಸುತ್ತೀರಾ.

ಶ್ರೀ ಬಿ. ಹುಚ್ಚೇಗೌಡ.—ತಾವು ಡಿಪಾರ್ಟ್‌ಮೆಂಟಲ್ ಆಗಿತಕ್ಕ ಬಂದೋಬಸ್ತು ಮಾಡಿ ಸರ್ಕಾರಿ ಆಫೀಸರುಗಳು ಕೇವಲ ೮-೧೦ ಲಕ್ಷ ರೂಪಾಯಿಗಳನ್ನು ಕೊಟ್ಟು ಮರತಂದು ಸುಮಾರು ನಾಲ್ಕು ಕೋಟಿ ರೂಪಾಯಿಗಳನ್ನು ಮಾಡಿಕೊಳ್ಳುವಾಗ, ಅದನ್ನು ತಪ್ಪಿಸುವುದಕ್ಕೆ ನಿಮಗೆ ಆಗುವುದಿಲ್ಲವೇ ? ನಿಮಗೆ ಸಾಧ್ಯವಿಲ್ಲದಿದ್ದರೆ ನಾನು ಬೇರೆ ವಿಧಾನವನ್ನು ಹೇಳುತ್ತೇನೆ. ತಾವೀಗ ಚದುರ ಮೈಲಿಗಟ್ಟಲೆ ಒಬ್ಬರಿಗೆ ಕೊಟ್ಟು ಬಿಟ್ಟರೆ, ಅವರು ಎಲ್ಲಿಂದ ಬೇಕಾದರೂ smuggle ಮಾಡಿ ತೆಗೆದುಕೊಂಡು ಹೋಗಬಹುದು, ಅದನ್ನು ತಪ್ಪಿಸುವುದು ಕಷ್ಟ. ಬೇಕಾದರೆ ಸಣ್ಣ ಸಣ್ಣ ಕಂಟ್ರಾಕ್ಟುಗಳನ್ನು ಕೊಟ್ಟು ಸಾಗಿಸಬಹುದು. ಇಲಾಖಾಮುಖಾಂತರವೇ ಇದನ್ನು ಮಾಡುವುದಕ್ಕಾಗುವುದಿಲ್ಲವೆಂದರೆ ನಾನು ಬೇರೆ ಉಪಾಯ ಹೇಳುತ್ತೇನೆ.

ಆಮೇಲೆ afforestation ಈಗ ಮಾಡುತ್ತಿರುವುದು ಚೆನ್ನಾಗಿದೆ ಆದರೆ, ಇದನ್ನು ಇನ್ನೂ ಜಾಸ್ತಿ ಮಾಡಬೇಕು. ಈಗ ಮಾಡುತ್ತಿರುವುದು ಫಲ ಕೊಡಬೇಕಾದರೆ ಇನ್ನು ೫೦ ವರ್ಷಬೇಕು. ತೇಗದ ಮರವನ್ನು ೫೦ ವರ್ಷಗಳಿಂದ ೨೦೦ ವರ್ಷಗಳವರೆಗೂ ಬೆಳೆಸಿದರೆ ಒಳ್ಳೆಯದು. ಇದೇ ರೀತಿ ಗಂಧದ ಮರಗಳ ವ್ಯವಸ್ಥೆಯನ್ನೂ ಮಾಡಬೇಕು. ಈಗ ತಾವು ಖಾಸಗಿ ಹಿಡುವಳಿಯಲ್ಲಿರುವ ಗಂಧದ ಮರಗಳನ್ನು ಪುಕ್ಕಟೆ ತೆಗೆದುಕೊಂಡು ಹೋಗುತ್ತಿದ್ದೀರಿ ಇದರಿಂದಾಗಿ ಖಾಸಗಿಯವರು ಯಾರೂ ಈ ಮರವನ್ನು ನೆಡುವುದೂ ಇಲ್ಲ, ಕಾಪಾಡುವುದೂ ಇಲ್ಲ, ಏನಾದರೂ ಅಲ್ಲಿ ಇಲ್ಲಿ ಹುಟ್ಟಿದ್ದರೆ ಅದನ್ನೂ ಕಡಿದು ಹಾಕುತ್ತಾರೆ. ಬೆಳೆಸಿದ ಮೇಲೆ ಯಾರಾದರೂ ಬೇರೆಯವರು ಅಸೂಯೆಗೆ ಕಡಿದು ಹಾಕಿ ತಮ್ಮ ಮೇಲೆ ಕೇಸ್ ಹಾಕಿಸಬಹುದು ಎಂದು ಬುಡಸಮೇತ ಮೊದಲೇ ತೆಗೆದುಬಿಡುತ್ತಾರೆ. ಹಿಂದೆ ಸರ್ಕಾರದವರು ಈ ಮರಗಳಿಗೆ ೨ ಪರ್‌ಸೆಂಟ್‌ನಷ್ಟು ಬೆಲೆಯನ್ನು ಕೊಡುತ್ತಿದ್ದರು. ಅದರಿಂದಾಗಿ ಸ್ವಲ್ಪ ಮಟ್ಟಿಗೆ ಹಳ್ಳಿಯವರು ಈ ಮರಗಳನ್ನು ಉಳಿಸುತ್ತಿದ್ದರು. ಈಗ ತಾವು ೫೦ ಪರ್‌ಸೆಂಟ್ ನಷ್ಟಾದರೂ ಬೆಲೆಯನ್ನು ರೈತರಿಗೆ ಕೊಡುವುದಾದರೆ ಬಹಳ ಉತ್ತೇಜಕವಾಗಿರುತ್ತದೆ. ಬೇಕಾದರೆ ಅವರೇ ಈ ಮರಗಳನ್ನು ಬೆಳೆಸಿಕೊಡುತ್ತಾರೆ. ಇದೊಂದೂ ಇಲ್ಲದಿದ್ದರೆ ದಾರಿಯಲ್ಲಿ ಹೋಗುವ ಮಾರಿ ನಮಗೇಕೆ ಎಂದು ಇರುವ ಮರಗಳನ್ನೂ ಕಿತ್ತುಹಾಕುತ್ತಾರೆ. ಆದ್ದರಿಂದ ತಾವು ಗಂಧದ ಮರವನ್ನು ರಿಸರ್ವ್ ಮಾಡಿಕೊಂಡಿದ್ದರಿಂದ ಏನೂ ಹೆಚ್ಚಿಗೆ ಆಗುವುದಿಲ್ಲ. ಅದನ್ನು ಉಳಿಸಿಕೊಳ್ಳುವ ಮತ್ತು ಬೆಳೆಸಿಕೊಳ್ಳುವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಈಗಿನ ಕಾಲದಲ್ಲಿ ಗಂಧದ ಮರ ಚಿನ್ನಕಿಂತ ಹೆಚ್ಚು ಬೆಲೆಯುಳ್ಳದ್ದಾಗಿದೆ.

ಆಮೇಲೆ ನಮ್ಮ ಅರಣ್ಯ ಪ್ರದೇಶದಲ್ಲೂ ಅನೇಕ ಬಂಜರು ಭೂಮಿಗಳಿವೆ. ಅವುಗಳನ್ನು ಸುಮ್ಮನೆ ಬಿಡುವುದು ಸರಿಯಲ್ಲ. ಆ ಪ್ರದೇಶವನ್ನು ಸಾಗುವಳಿಗೆ ಕೊಡುವ ಏರ್ಪಾಡು ಮಾಡಬೇಕು.

ಇಷ್ಟು ಹೇಳಿ ಈ ಅರಣ್ಯ ಇಲಾಖೆಯಲ್ಲಿರತಕ್ಕ wastageನ್ನು ಸಾಧ್ಯವಾದಷ್ಟು ಮಟ್ಟಿಗೆ ನಿಲ್ಲಿಸಬೇಕೆಂದು ಹೇಳುತ್ತೇನೆ, ಏಕೆಂದರೆ ಅನೇಕ ವೇಳೆ ಆಫೀಸರುಗಳೇ ಬಿದ್ದಿದ್ದ ಮರಗಳನ್ನು ತೆಗೆದುಕೊಂಡು ಹೋಗುವುದನ್ನು ನಾನು ನೋಡಿದ್ದೇನೆ. ಒಬ್ಬ ಆಫೀಸರು ಇನ್ನೊಬ್ಬ ಆಫೀಸರೊಡನೆ ಷರೀಖ್ ಆಗದೆ ಇದ್ದರೆ ಇಂಥ pilferage ಗಳು ಹೇಗೆ ತಾನೇ ಆಗುತ್ತವೆ.

ಒಂದು ಕಡೆ ಒಳಗೇ ಇರುವವರು ಕೊಂಡುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಆಫೀಸರುಗಳು ತಾವಾಗಿಯೇ ಯಾರೂ ಅಂತಹ ಸ್ಥಳಗಳಿಗೆ ಹೋಗುವುದಿಲ್ಲವೆಂಬುದಾಗಿ ನನಗೆ ಅನುಭವವಾಗಿದೆ. ಆದ್ದರಿಂದ ಆದಷ್ಟು ಮಟ್ಟಿಗೆ ಆ ಆಫೀಸರುಗಳ ಮೇಲೆ ಸ್ವಲ್ಪ ನಿಗಾ ಇರಬೇಕೆಂದು ನಾನು ಹೇಳುತ್ತೇನೆ. ಅಂತಹ ಕಡೆಗಳಲ್ಲಿ ಬರೀ ಸಿಬ್ಬಂದಿ ಇಟ್ಟರೆ ಆಗುವುದಿಲ್ಲ. ಇತ್ತೀಚೆಗೆ ಕಬ್ಬು ಸಾಗಿಸುವುದಕ್ಕೆ ಕೆಲವು ಸಿಬ್ಬಂದಿಗಳನ್ನು ಇಟ್ಟಿದ್ದಾರೆ. ಅದಕ್ಕೆ ಬದಲಾಗಿ ಕ್ರಮವಾಗಿ ಕೆಲಸ ಮಾಡತಕ್ಕ ದಕ್ಷತೆಯುಳ್ಳ ಆಫೀಸರುಗಳ ಜೊತೆಯಲ್ಲಿ ನೀವೇ ನಿಮ್ಮ ಸಿಬ್ಬಂದಿಯನ್ನು ಕೊಟ್ಟರೆ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಈಗಿರುವ ರೀತಿಯಲ್ಲಿಯೇ ಮುಂದುವರಿದರೆ ಇದರಿಂದ ರೈತರಿಗೆ ಏನೂ ಅನುಕೂಲವಿಲ್ಲ. ರೈತರಿಗೆ ಬಹಳ ಮಟ್ಟಿಗೆ ಕಿರುಕುಳವನ್ನು ಆ ಇಲಾಖೆಯವರು ಕೊಡುತ್ತಿದ್ದಾರೆ. ಶೇಕಡ ೫-೧೩ ಮಾತ್ರ ನಮಗೆ ವರಮಾನ ಬರುತ್ತಿದೆ. ಅದರಲ್ಲಿ ಕೇಂದ್ರ ಸರ್ಕಾರದ ಭಾಗ ಬರಬೇಕಾದುದು ಬಹಳ ಕಡಿಮೆ ಇದೆ. ಜಾಸ್ತಿ ತೆಗೆದುಕೊಳ್ಳುವುದಕ್ಕೆ ನಮ್ಮ ಸರ್ಕಾರದವರು ಪ್ರಯತ್ನ ಮಾಡಬಹುದಾಗಿತ್ತು. ನಾನು ಈ ವಿಷಯದಲ್ಲಿ ಎಷ್ಟೋ ಸಾರಿ ಈ ಸಭೆಯಲ್ಲಿ ಹೇಳಿದ್ದೇನೆ. ಆ ಬಗ್ಗೆ ಏತಕ್ಕೋಸ್ಕರ ಈ ಸರ್ಕಾರ ವಿಳಂಬ ಮಾಡುತ್ತಾರೋ ನನಗೆ ಗೊತ್ತಾಗಲಿಲ್ಲ. ಈಗಲಾದರೂ ಜಾಗ್ರತೆ ಅದಕ್ಕಾಗಿ ಪ್ರಯತ್ನ ಮಾಡಬೇಕು.

ಇನ್ನು ಕ್ಯಾಪಿಟಲ್ ಔಟ್ಲೆ ಈ ಅರಣ್ಯ ಇಲಾಖೆಯಲ್ಲಿ ಒಂದು ಐಟಂ. ಆ ಬಗ್ಗೆ ನಮಗೆ ಸರ್ಕಾರದವರು ಸರಿಯಾದ ವಿವರಗಳನ್ನು ತಿಳಿಸಿದ್ದರೆ ಬಹಳ ಚೆನ್ನಾಗಿತ್ತು. ನಮಗೆ ಆ ವಿಚಾರ ಈಗ ಏನೂ ತಿಳಿಯದೆ ನಾವು ಬ್ಲೈಂಡಾಗಿ ಮಾತನಾಡಬೇಕಾಗಿದೆ. ಕೆಲವು ಕಾರ್ಖಾನೆಗಳ ಲೆಕ್ಕಗಳನ್ನೂ ಸಹ ಸರಿಯಾಗಿ ಸರ್ಕಾರದವರು ವಿವರವಾದ ಅಂಕಿಅಂಶಗಳೊಡನೆ ಉತ್ತರ ಕೊಡುವಾಗ ತಿಳಿಸುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯಗೌಡ (ರಾಮನಗರಂ).—ಸ್ವಾಮಿ, ನಮ್ಮ ದೇಶಕ್ಕೆ ಈ ಅರಣ್ಯಸಂಪತ್ತು ಒಂದು ದೊಡ್ಡ ಸಂಪತ್ತು. ಈ ಸಂಪತ್ತನ್ನು ನಾವು ಭದ್ರಪಡಿಸಿಕೊಂಡು, ರೂಢಿಸಿಕೊಂಡು ನಮ್ಮ ದೇಶವನ್ನು ಒಂದು ಪ್ರಗತಿ ಸ್ಥಿತಿಯಲ್ಲಿ ತರುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಇಂಥಾದ್ದಕ್ಕೆ ನಾವೆಲ್ಲರೂ ಹೆಚ್ಚಿಗೆ ನಿಗಾ ಕೊಡಬೇಕಾದುದು ಅಗತ್ಯವಿದೆ. ಅದಕ್ಕಾಗಿ ತಕ್ಕ ಹಣವನ್ನು ಒದಗಿಸಬೇಕು ಮತ್ತು ಅದಕ್ಕನುಗುಣವಾಗಿ ಹೆಚ್ಚು ಪ್ರಯತ್ನಗಳನ್ನು ಹೊಂದಿಸಿಕೊಂಡು ಹೋಗುವುದಕ್ಕೆ ತಕ್ಕ ಅವಕಾಶವನ್ನು ಸರ್ಕಾರದವರು ಮಾಡಬೇಕು. ಇದು ಬಹಳ ಮುಖ್ಯವಾದಂಥ ವಿಷಯ. ಇನ್ನು ಶಾಸ್ತ್ರೀಯವಾಗಿ ನೋಡುವುದಾದರೆ ದೇಶದಲ್ಲಿ 1/2 ಭಾಗ ಅರಣ್ಯವಿರಬೇಕು. ಹಾಗಿದ್ದರೆ ಈ ದೇಶ ಒಂದು ಉತ್ತಮಸ್ಥಿತಿಗೆ ಬರುತ್ತದೆ. ಮಳೆ ಚೆನ್ನಾಗಿ ಆಗುತ್ತದೆ ಮತ್ತು ಅಚ್ಚುಕಟ್ಟಾಗಿ ಬೆಳೆಯೂ ಆಗುತ್ತದೆ. ರೈತರು ಸುಭಿಕ್ಷವಾಗಿರುತ್ತಾರೆ. ಮರಮುಟ್ಟುಗಳೂ ಸಹ ಚೆನ್ನಾಗಿ ದೊರೆಯುತ್ತವೆ. ಇತ್ತೀಚೆಗೆ ನಮ್ಮ ದೇಶದಲ್ಲಿ ಅಷ್ಟು ವಿಸ್ತೀರ್ಣ ಅರಣ್ಯವಿಲ್ಲ. ನಮಗೆ ಈಗ ಕೇವಲ ಶೇಕಡ 18.5ರಷ್ಟು ಮಾತ್ರ ಅರಣ್ಯ ಇದೆ. ಈ ರೀತಿ ಅರಣ್ಯವಿದ್ದರೂ ಕೂಡ ಅನೇಕ ಕಾರಣಗಳಿಂದ ಅವು ಯಾವ ರೀತಿ ಇರಬೇಕಾಗಿತ್ತೋ ಆ ರೀತಿಯಲ್ಲಿಲ್ಲ. ಕೆಲವು ಕಡೆ ಉತ್ತಮ ಅರಣ್ಯವಿದೆ, ಬಹಳ ಸೊಗಸಾದ ಅರಣ್ಯವಿದೆ. ಮತ್ತೆ ಕೆಲವು ಕಡೆಗಳಲ್ಲಿ ಅನೇಕ ಕಾರಣಗಳಿಂದ ಅರಣ್ಯ ವಿಸ್ತೀರ್ಣ ಬಹುಮಟ್ಟಿಗೆ ಕಡಮೆಯಾಗಿದೆ. ಕೆಲವು ಪ್ರಾಜೆಕ್ಟುಗಳನ್ನು ಇವರು ಕೈಗೆ ತೆಗೆದುಕೊಂಡು ಬಹಳ ದೊಡ್ಡದಾದ ಲಕ್ಕವಳ್ಳಿ ಕಾಡನ್ನು ತೆಗೆದುಹಾಕಿದ್ದಾರೆ. ನಮಗೆ ಇರತಕ್ಕ ಅರಣ್ಯ ಸಂಖ್ಯೆಯಲ್ಲಿ ಕೆಲವು ಮೈನರ್ ಫಾರೆಸ್ಟ್‌ಗಳನ್ನೂ ಸಹ ಏನೂ ಇಲ್ಲದಂತೆ ಮಾಡಿದ್ದಾರೆ. ಆದ್ದರಿಂದ ಈಗ ಕೆಲವು ಗುಡ್ಡಗಾಡುಗಳು, ಬೆಟ್ಟಗಳು ಲೆಕ್ಕಕ್ಕೆ ಸೇರಿವೆ. ಇನ್ನು ಕೆಲವು ಗ್ರಾಮಾಂತರ ಅರಣ್ಯಪ್ರದೇಶಗಳು ಇತ್ಯಾದಿ ನಾನಾ ತರಹ ಇಲಾಖೆಗಳಿಂದ ಸೇರಿವೆ. ಆದರೂ ಇವನ್ನೆಲ್ಲಾ ಲೆಕ್ಕಹಾಕಿದರೂ ಸರ್ಕಾರದವರು ಶೇಕಡ 18.5ರಷ್ಟಾದರೂ ಅರಣ್ಯವಿದೆಯೆಂದು ಹೇಳುತ್ತಾರೆ. ನಾನು ಅಷ್ಟುಕೂಡಾ ಇಲ್ಲವೆಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಈಗ ಇರತಕ್ಕ ಅರಣ್ಯವನ್ನು ಉತ್ತಮಪಡಿಸಿಕೊಂಡು ಅದರಿಂದ ಏನುಲಾಭ ಪಡೆಯಬಹುದೋ ಅದನ್ನು ಪಡೆಯಬೇಕಾಗಿದೆ. ನಾನು ಸ್ಪೆಸಿಫಿಕ್ಕಾಗಿ ಹೇಳುತ್ತಿದ್ದೇನೆ. ಮಲೆನಾಡು ಪ್ರದೇಶದಲ್ಲಿಯೇ ಶೇಕಡ 60ರಷ್ಟು ಭಾಗ ಅರಣ್ಯವಿರಬೇಕು ಎಂಬುದಾಗಿ ಹೇಳಿದರೆ ನಮ್ಮ ದೇಶದಲ್ಲಿ ಶೇ. 40ರಷ್ಟು ಸಹ ಇಲ್ಲ. ಮೈನರ್ ಪ್ರದೇಶಗಳಲ್ಲಿ ಶೇ. 28 ಭಾಗದಷ್ಟಾದರೂ ಅರಣ್ಯವಿರಬೇಕೆಂದು ಹೇಳಿದರೆ ಅಲ್ಲಿ ಶೇ. 2ರಷ್ಟು ಇಲ್ಲವೆಂದು ಹೇಳಿದರೆ ಇದು ನಿಜವಾಗಿ ಬಹಳ ವಿಷಾದಕರವಾದ ಸಂಗತಿಯಾಗಿದೆ. ಈಚೀಚೆಗೆ ಮೈದಾನ ಪ್ರದೇಶಗಳಲ್ಲಿ ಅನೇಕ ಕಡೆ ಇದ್ದಂಥ ಕಾಡುಗಳನ್ನು ನಾವು ಮತ್ತು ಇತರ ವ್ಯವಸಾಯಗಾರರು ಮತ್ತೊಂದು ಕಾರ್ಯಗಳಿಗೆ ಉಪಯೋಗಿಸಿಕೊಂಡು ಆ ಸಂಪತ್ತನ್ನು ಬಹಳ ಕಡಮೆ ಮಾಡಿಕೊಂಡು ಬಂದಿದ್ದೇವೆ. ಇರತಕ್ಕ ಅಲ್ಪ ಸ್ವಲ್ಪ ಕಾಡನ್ನಾದರೂ ನಾವು ಉತ್ತಮಸ್ಥಿತಿಗೆ ತರುವ ವ್ಯವಸ್ಥೆ ಮಾಡಿದರೆ ರೈತರಿಗೆ ಇದರಿಂದ ತುಂಬಾ ಅನುಕೂಲವಾಗುತ್ತದೆ.

ಕೊನೆಗೆ ನೇಗಿಲು ಮುಂತಾದ ವ್ಯವಸಾಯದ ಮರಮುಟ್ಟುಗಳನ್ನು, ಇತರ ವ್ಯವಸಾಯಕ್ಕೆ ಬೇಕಾದ ಉಪಕರಣಗಳನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಅನೇಕ ಕಡೆಗಳಲ್ಲಿರತಕ್ಕ ಕಾಡು ಅಷ್ಟು ಉತ್ತಮಸ್ಥಿತಿಯಲ್ಲಿಲ್ಲ. ಅಂತಹ ಕಡೆಗಳಲ್ಲಿ ನೇಗಿಲಗೆ ಬೇಕಾದ ಸಾಮಾನುಗಳು ಸಾಕಷ್ಟು ದೊರೆಯುತ್ತಿಲ್ಲ. ಒಂದು ನೇಗಿಲಿಗಾಗಿ ಬಹಳ ದೂರ ಹೋಗಬೇಕು. ಆಗ ಕೆಲಸಕ್ಕೆ ಬಾರದೇ ಇರುವ ಮರವನ್ನು ಕಡಿಯಬೇಕು. ಇಂತಹ ಸ್ಥಿತಿಯನ್ನು ಹೋಗಲಾಡಿಸಿ ಇರತಕ್ಕ ಕಾಡನ್ನೇ ಉತ್ತಮಪಡಿಸುವುದಕ್ಕೆ ಸರ್ಕಾರ ಸಕಲಪ್ರಯತ್ನಗಳನ್ನು ಮಾಡಬೇಕು ಎಂಬುದಾಗಿ ನಾನು ಈ ಸಭೆಯಲ್ಲಿ ಹೇಳಲಿಚ್ಛಿಸುತ್ತೇನೆ. ಮೈನರ್ ಫಾರೆಸ್ಟ್ ಇರುವ ಕಡೆ ಏನು ನಮ್ಮಲ್ಲಿ ದೊಡ್ಡ ವಿಸ್ತೀರ್ಣವಿದೆ. ಅದನ್ನು ಚೆನ್ನಾಗಿ ಕಾಪಾಡಿಕೊಂಡು ಬರಬೇಕು. 100-200-300 ಎಕರೆಗಳಷ್ಟು ಮೈನರ್ ಫಾರೆಸ್ಟ್‌ನಿಂದ ನಮಗೇನು ವರಮಾನ ಬರುತ್ತದೆಂಬುದು ನನಗೆ ಗೊತ್ತಿಲ್ಲ. ನನ್ನ ಅನುಭವದಲ್ಲಿ ಅದರಿಂದ ಅಷ್ಟು ಉತ್ತಮ ವರಮಾನವಿಲ್ಲವೆಂದು ಕಾಣುತ್ತದೆ. ಅಲ್ಲಿ ಗ್ರೀನ್ ವೆಜಿಟೇಷನ್ ಇಲ್ಲ. ಬಂಜರುಭೂಮಿ, ಹುಲ್ಲು ಬೆಳೆಯುತ್ತಾ ಇಲ್ಲ. ದನಗಳಿಗೆ ಮೇವು ಸಾಕಷ್ಟಿಲ್ಲ, ಇದರಿಂದ ಮೈನರ್ ಫಾರೆಸ್ಟಿನ ಸಂಪತ್ತೇ ನಾಶವಾಗುವ ಪರಿಸ್ಥಿತಿ ಇತ್ತೀಚೆಗೆ ಬಹಳವಾಗಿ ಕಾಣುತ್ತದೆ. ಆದ್ದರಿಂದ ನಾವು ಮೊಟ್ಟಮೊದಲನೆಯದಾಗಿ ಈ ಮೈನರ್ ಫಾರೆಸ್ಟ್ ಎಷ್ಟು ಇದೆ, ಎಲ್ಲೆಲ್ಲಿದೆ ಎಂಬುದನ್ನು ನಿರ್ಧಾರ ಮಾಡಬೇಕು. ಮೊದಲು ಈ ಮೈನರ್ ಫಾರೆಸ್ಟ್‌ಗಳು ಫಾರೆಸ್ಟ್ ಇಲಾಖೆಯ ಅಧೀನದಲ್ಲಿವೆಯೋ ಅಥವಾ ರೆವಿನ್ಯೂ ಇಲಾಖೆಯ ಅಧೀನದಲ್ಲಿದೆಯೋ ಎಂಬುದನ್ನು ತಿಳಿಯುವುದು ಅತ್ಯಾವಶ್ಯಕವಾಗಿದೆ.

ಮೈನರ್ ಫಾರೆಸ್ಟುಗಳನ್ನು ಅಕ್ರಮವಾಗಿ ತೆಗೆದುಕೊಳ್ಳುತ್ತಿರುವವರನ್ನು ಬಿಡಿಸಲಿಕ್ಕೆ ಸರ್ಕಾರದವರು ಹೆಚ್ಚಿಗೆ ನಿಗಾ ಕೊಟ್ಟಿಲ್ಲ. ಈ ಫಾರೆಸ್ಟು ಸರ್ಕಾರದವರಿಗೆ ಬೇಡದಿದ್ದರೆ ರೈತರಿಗೇ ಕೊಡಲಿ. ಅಥವಾ ಬಡವರಾಗಿ, ನಿರ್ಗತಿಕರಾಂದಥ ಜಮೀನು ಇಲ್ಲದವರಿಗೆ ಕೊಡಬೇಕು. ಈಗ ಅದನ್ನು ಮಾಡದೆ ಇರುವುದರಿಂದ ಅನೇಕ ಮೈನರ್ ಫಾರೆಸ್ಟುಗಳನ್ನು ಪ್ರಬಲಸ್ಥರು ಮತ್ತು ಅನುಕೂಲಸ್ಥರು ಹೆಚ್ಚು ಸ್ವಾಧೀನ ಮಾಡಿಕೊಂಡು ಅನುಭವಿಸುತ್ತಿದ್ದಾರೆ. ಇಂಥಾದನ್ನು ಸರ್ಕಾರದವರು ವಿಲೇವಾರಿ ಮಾಡಿದರೆ ವರ್ಷಂಪ್ರತಿ ನಮ್ಮ ಕಂದಾಯದ ಆದಾಯ ಹೆಚ್ಚುತ್ತದೆ. ಇಲ್ಲದಿದ್ದರೆ ನೀರಾವರಿ ಸಾಕಷ್ಟು ಆಗದೇ ಸಾವಿರಾರು ಎಕರೆ ಜಮೀನು ನಾಶವಾಗಿ ಅದರಿಂದ ಬರತಕ್ಕ ವರಮಾನವೂ ಹೋಗುತ್ತದೆ. ಹೀಗಾಗಿ ಮೈನರ್ ಫಾರೆಸ್ಟುಗಳಿಂದ ಸರ್ಕಾರಕ್ಕೆ ಏನೂ ಪ್ರಯೋಜನವಿಲ್ಲದಂತಾಗುತ್ತದೆ. ಒಟ್ಟಿನಲ್ಲಿ ಮೈನರ್ ಫಾರೆಸ್ಟುಗಳಿಂದ ಸರ್ಕಾರಕ್ಕೆ ತುಂಬಾ ನಷ್ಟವಾಗುತ್ತಿದೆ ಮತ್ತು ರೈತರಿಗೆ ತುಂಬಾ ಅನ್ಯಾಯಗಳೂ ಸಹ ಆಗುತ್ತಿವೆ. ಆದ್ದರಿಂದ ಸರ್ಕಾರದವರು ಕೂಡಲೇ ತಕ್ಕ ಕ್ರಮವನ್ನು ತೆಗೆದುಕೊಂಡು ಇಂತಹ ನ್ಯೂನತೆಗಳನ್ನು ಅತಿ ಜಾಗ್ರತೆಯಾಗಿ ಸರಿಪಡಿಸಬೇಕು. ಎಂಬುದಾಗಿ ನಾನು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ತಿಳಿಸಲು ಅಪೇಕ್ಷಿಸುತ್ತೇನೆ, ನಾನು ಹೇಳಿದ ಹಾಗೆ ಸರ್ಕಾರದವರು ಅರಣ್ಯವನ್ನು ಬೆಳೆಸುವುದರಲ್ಲಿ ಹೆಚ್ಚಿಗೆ ನಿಗಾ ಕೊಡಬೇಕು. ಇದರಲ್ಲಿ ಕೆಲವು ತೊಡಕುಗಳಿವೆ. ಮೈದಾನ ಪ್ರದೇಶಗಳಲ್ಲಿರತಕ್ಕ ಅಲ್ಪ ಸ್ವಲ್ಪ ಕಾಡುಗಳ ಕಡೆಗೆ ಸರ್ಕಾರದವರು ಹೆಚ್ಚಿಗೆ ನಿಗಾಕೊಡದೇ ಹೋದರೆ ಅನೇಕ ಬೆಲೆಯಾದಂಥ ಕಾಡುಮರಗಳನ್ನು ಕಡಿದು ಗೂಂಡಾ ವೃತ್ತಿಯನ್ನು ಅವಲಂಬಿಸುತ್ತಾರೆಂಬುದರಲ್ಲಿ ಏನೂ ಸಂದೇಹವಿಲ್ಲ. ಇತ್ತೀಚೆಗೆ ಆ ರೀತಿ ಮಾಡುವವರು

ನಾವು ರೂಲ್ಸ್ ಪ್ರಕಾರವೇ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅಂಥಾದ್ದನ್ನೆಲ್ಲಾ ಸರ್ಕಾರದವರು ಕೂಡಲೇ ನಿಲ್ಲಿಸಬೇಕು. ಎಲ್ಲೆಲ್ಲಿ ಅರಣ್ಯವನ್ನು ಬೆಳೆಸುವುದಕ್ಕೆ ಸಾಧ್ಯವೋ ಅಂತಹ ಕಡೆಗಳಲ್ಲಿ ಹೆಚ್ಚಿಗೆ ನಿಗಾ ಕೊಟ್ಟು ಚೆನ್ನಾಗಿ ಬೆಳೆಸಬೇಕು. ಈಗ ಒಂದು ತೊಂದರೆ ಇದೆ. ಈ ಫಾರೆಸ್ಟ್ ಆಫೀಸರು ಏನಾದರೂ ಒಂದು ತಪ್ಪು ಮಾಡಿದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅವರನ್ನು ಬದಲಾಯಿಸುತ್ತಿದ್ದಾರೆ. ಆದರೆ ಫಾರೆಸ್ಟ್ ಅಧಿಕಾರಿಗೆ ತಪ್ಪು ಮಾಡುವುದಕ್ಕೇನೋ ಅವಕಾಶವಿದೆ. ಆದರೂ ಪೋಲೀಸರಿಗೆ ಇವರ ಮೇಲೆ ದೂರು ಕೊಡುವುದಕ್ಕೂ ಅವಕಾಶವಿದೆ. ಇವರು ಹೇಗೆ ತಪ್ಪು ಮಾಡುತ್ತಾರೆಂಬುದಕ್ಕೆ ಒಂದು ಕಾರಣವನ್ನು ಹೇಳುತ್ತೇನೆ. ಈ ಫಾರೆಸ್ಟ್ ಅಧಿಕಾರಿಗಳನ್ನು 2-3-4 ವರ್ಷ ಗಳಲ್ಲಿಯೇ ಬೇರೆ ಬೇರೆ ಕಡೆಗೆ ಬದಲಾಯಿಸಿಬಿಡುತ್ತಾರೆ. ಅವರುಗಳು ಒಂದು ವರ್ಷವೋ ಅಥವ ಎರಡು ವರ್ಷಗಳೋ ಇದ್ದವರು ಏನು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಕೇವಲ ಒಂದೆರಡು ವರ್ಷಗಳಲ್ಲಿ ಎಷ್ಟೆಷ್ಟು ಎಕರೆ ಜಮೀನುಗಳಲ್ಲಿ ಎಷ್ಟೆಷ್ಟು ಮರಗಳನ್ನು ಬೆಳೆಸಿದ್ದಾರೆ, ಅವರು ಖರ್ಚು ಮಾಡುವ ಹಣ ನಿಜವಾಗಿ ಸದುಪಯೋಗವಾಗಿದೆಯೋ ಇಲ್ಲವೋ ಎಂಬುದನ್ನು ನೋಡಿಕೊಳ್ಳುವುದಕ್ಕೂ ಅವಕಾಶವಿರುವುದಿಲ್ಲವೆಂಬುದಾಗಿ ನಾನು ಈ ಸಂದರ್ಭದಲ್ಲಿ ಸೂಚನೆ ಕೊಡುತ್ತೇನೆ. ರೇಂಜ್ ಫಾರೆಸ್ಟ್‌ನಲ್ಲಿರತಕ್ಕ ಯಾರೇ ಅಧಿಕಾರಿಗಳಾಗಲೀ ಏನಾದರೂ ತಪ್ಪು ಮಾಡಿದರೆ ಒಂದೇ ರೀತಿಯಾದಂಥ ಶಿಕ್ಷೆ ಎಂದು ಭಾವಿಸಿರುವುದು ಬಹಳ ಶೋಚನೀಯವಾಗಿದೆ. ಆ ರೀತಿ ಮಾಡದೆ ಅಂತಹ ಅಧಿಕಾರಿಗಳನ್ನು ಅಲ್ಲಿಯೇ ಇರಿಸಿ ಅವರಿಗೆ ಸಂಪೂರ್ಣವಾಗಿ ಐದು ವರ್ಷಗಳಾಗಲೀ ಅಥವಾ ಹತ್ತು ವರ್ಷಗಳಾಗಲೀ ಜವಾಬ್ದಾರಿಯನ್ನು ವಹಿಸಿ ಅವರು ತಮ್ಮ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ಸರ್ಕಾರದವರು ನೋಡಿಕೊಳ್ಳಬೇಕು, ಯಾವಾಗಲೂ ಅರಣ್ಯವನ್ನು ಕೇವಲ ಆರು ಹತ್ತು ತಿಂಗಳು ಅಥವಾ ಒಂದು ವರ್ಷದಲ್ಲಿ ಬೆಳೆಸುವುದಕ್ಕಾಗುವುದಿಲ್ಲ, ಸಾಮಾನ್ಯವಾಗಿ ಯಾವುದಾದರೂ ಭಾಗದಲ್ಲಿ ಸುಮಾರು ಒಂದು ಅಥವಾ ಹತ್ತು ಎಕರೆ ಜಮೀನಿನಲ್ಲಿ ಗಿಡಗಳನ್ನು ನೆಟ್ಟದ್ದೇ ಆದರೆ ಅದು ಫಲ ಬಿಡುವುದು ಕೇವಲ ನಾಲ್ಕೈದು ವರ್ಷಗಳಾದರೂ ಆಗುತ್ತದೆ. ಕಾಡುಗಳನ್ನು ನಿರ್ಮಾಣ ಮಾಡುವಾಗ ಹೆಚ್ಚಿಗೆ ನಮಗೆ ಉಪಯೋಗಕರವಾದಂಥ ಮರಗಳನ್ನು ಬೆಳೆಸಬೇಕೆಂಬ ದೃಷ್ಟಿಯನ್ನು ಇಟ್ಟುಕೊಳ್ಳಬೇಕು. ವ್ಯವಸಾಯಕ್ಕೆ ಯೋಗ್ಯವಾದಂಥ ಮರ ಮುಟ್ಟುಗಳನ್ನು ಮತ್ತು ಮನೆಗಳಿಗೆ ಬೇಕಾದ ಮರಗಳನ್ನು ಹೆಚ್ಚಿಗೆ ಬೆಳೆಸುವುದು ಈಗಿನ ಸಂದರ್ಭದಲ್ಲಿ ಅಗತ್ಯವಾಗಿದೆ ಎಂದು ನಾನು ಹೇಳುತ್ತೇನೆ. ಆದರೆ ಅರಣ್ಯ ಬೆಳೆಸಲಿಕ್ಕೆ ಖರ್ಚಾಗತಕ್ಕ ಹಣ ಯಾವ ರೀತಿಯೂ ಪೋಲಾಗದಂತೆ ವ್ಯವಸ್ಥೆ ಮಾಡಬೇಕು. ಈ ಫಾರೆಸ್ಟ್ ಅಧಿಕಾರಿಗಳು ಯಾವ್ಯಾವ ಕಡೆಗಳಲ್ಲಿರುತ್ತಾರೋ ಆಯಾ ಕಡೆಗಳಲ್ಲಿಯೇ ಇರತಕ್ಕ ಅರಣ್ಯವನ್ನು ಬೆಳೆಸುವುದಕೋಸ್ಕರ ಅವರಿಗೆ ಜವಾಬ್ದಾರಿಯನ್ನು ಕೊಡಬೇಕು. ಆದರೆ ಅವರು ತಪ್ಪು ಮಾಡಿದರೆ ಬೇರೆ ಕಡೆಗೆ ಅವರನ್ನು ವರ್ಗ ಮಾಡುವುದು ಖಂಡಿತ ಸರಿಯಲ್ಲ. ಆ ರೀತಿ ಮಾಡದೆ ಯಾವುದಾದರೂ ಒಂದು ರೀತಿಯಲ್ಲಿ ಅವರನ್ನು ಅಲ್ಲಿಯೇ ಇರಿಸುವುದಕ್ಕೆ ಸಾಧನೆ ಮಾಡಿ ಅವರಿಗೆ ಕೊಟ್ಟ ಹಣ ಸರಿಯಾಗಿ ಸದ್ವಿನಿಯೋಗವಾಗಿದೆಯೇ ಇಲ್ಲವೇ ಎಂಬ ಬಗ್ಗೆ ಮೇಲುಸ್ತುವಾರಿಯನ್ನು ಸರ್ಕಾರದವರು ನೋಡಿಕೊಳ್ಳಬೇಕು ಎಂಬುದಾಗಿ ನಾನು ಸೂಚನೆ ಕೊಡುತ್ತೇನೆ. ಇನ್ನು ಕೆಲವು ಕಡೆಗಳಲ್ಲಿ ಆಯಾ ಪ್ರಾಂತಕ್ಕೆ ಯಾವಯಾವ ಮರಗಳನ್ನು ಬೆಳೆದರೆ ಅನುಕೂಲವೆಂಬುದನ್ನು ನೋಡಿಕೊಂಡು ಮರಗಳನ್ನು ಬೆಳೆಯಬೇಕು. ಸೀಮೆ ತಂಗಡಿ ಮರವನ್ನು ಬಹು ಸುಲಭವಾಗಿ ಬೆಳೆಯ ಬಹುದು. ಅದು ಬಹಳ ಬೆಲೆಯಾದುದಾಗಿದೆ. ಉದಾಹರಣೆಗೆ ಹೇಳುವುದಾದರೆ ಚನ್ನಪಟ್ಟಣದಲ್ಲಿ ಬಾಚಣಿಗೆ ಮತ್ತು ಇತರ ಆಟದ ಸಾಮಾನುಗಳು ಪ್ರಸಿದ್ಧಿ. ಅಂತಹ ಸಾಮಾನುಗಳಿಗೆ ಬೇಕಾದ ಆಲೆ ಮರಗಳನ್ನು ಅಲ್ಲಿ ಹೆಚ್ಚು ಬೆಳೆಯಬೇಕು. ಯಾವ ಪ್ರಾಂತ್ಯದಲ್ಲಿ ಕಾಗದದ ಕಾರ್ಖಾನೆಗಳಿವೆಯೋ ಅಲ್ಲಿ ಕಾಗದದ ಕಾರ್ಖಾನೆಗೆ ಬೇಕಾದಂಥ ಮರಗಳನ್ನೇ ಬೆಳೆಸಬೇಕು ಎಂಬುದಾಗಿ ನಾನು ಹೇಳುತ್ತೇನೆ. ಇನ್ನು ಎಲ್ಲಿ ಕಚ್ಚಾ ಮಾಲುಗಳು ಇವೆಯೋ ಅಂಥ ಕಡೆಗಳಲ್ಲಿ ಅದಕ್ಕೆ ಬೇಕಾದಂಥ ಮರಗಳನ್ನೇ ಬೆಳೆಸಿದರೆ ಅದರಿಂದ ಹೆಚ್ಚಿಗೆ ಪ್ರಯೋಜನವಾಗುತ್ತದೆ. ಹೆಚ್ಚು ಆದಾಯವೂ ಬರುತ್ತದೆ. ಇದನ್ನು ಸರ್ಕಾರದವರು ಯೋಚಿಸಬೇಕು. ಇನ್ನು ಮುಂದೆ ಸರ್ಕಾರದವರು ಮರಗಳನ್ನು ಬೆಳೆಸುವುದರಲ್ಲಿ ಔಷಧಿಗೆ ಬೇಕಾದಂಥ ಗಿಡಮೂಲಿಕೆಗಳನ್ನು ಬೆಳೆಸುವುದಕ್ಕೆ ಹೆಚ್ಚಿಗೆ ನಿಗಾ ಕೊಡಬೇಕು. ಏಕೆಂದರೆ ನಮ್ಮ ದೇಶದಲ್ಲಿ ಬಹಳ ಅಮೂಲ್ಯವಾದಂಥ ಗಿಡಮೂಲಿಕೆಗಳು ಬೆಳೆಯುತ್ತಾ ಇವೆ. ಹೆಚ್ಚು ಬೆಳೆಯುವುದಕ್ಕೂ ಈಗ ಅವಕಾಶವಿದೆ. ಈಚೆಗೆ ನಾನು ತಿಳಿಯುವುದರಲ್ಲಿ ವಿಶೇಷವಾಗಿ ಟರ್ಪನ್‌ಟೈನ್ ಔಷಧಿಗೆ ಬೇಕಾದ ಗಿಡಮೂಲಿಕೆಗಳನ್ನು ಬೆಳೆಯುತ್ತಿದ್ದಾರೆ. ಆದರಿಂದ ನಮ್ಮ ಸರ್ಕಾರದವರು ಹೆಚ್ಚಿಗೆ ಫಾಯಿದೆ ಮಾಡುವುದಕ್ಕೆ ಅವಕಾಶವಿದೆ. ಹಾಗೆಯೇ ಸಿಂಕೋನವನ್ನು ಬಾಬಾಬುಡನ್ ಫಾರೆಸ್ಟ್‌ನಲ್ಲಿ ಇನ್ನೂ ಹೆಚ್ಚಿಗೆ ಬೆಳೆಯಬಹುದು. ಮಲಯ ಮುಂತಾದ ಪ್ರದೇಶಗಳಲ್ಲಿ ಹಿಂದೆ ಸಿಂಕೋನ ಬೆಳೆಯುವುದಕ್ಕೆ ಅವಕಾಶವಿತ್ತು. ಅಂಥಾದ್ದನ್ನೆಲ್ಲಾ ನಮ್ಮ ದೇಶದಲ್ಲಿ ಬೆಳೆಯಬೇಕು. ಮುಖ್ಯವಾಗಿ ನಮ್ಮ ದೇಶದಲ್ಲಿ ಔಷಧಿಗಳಿಗೆ ಬೇಕಾದಂಥ ಗಿಡಮರಗಳನ್ನು ಹೆಚ್ಚಿಗೆ ಬೆಳೆಯಬೇಕು. ಹೊನ್ನೆ ಮತ್ತು ತೇಗದ ಮರಗಳನ್ನು ಸಹ ಹೆಚ್ಚಿಗೆ ಬೆಳೆಯಬೇಕು. ಇತ್ತೀಚೆಗೆ ನಾವು ಪರದೇಶಗಳಿಂದ ಅನೇಕ ಜಾತಿಯ ಮರಗಳನ್ನು ತರಿಸುತ್ತಿದ್ದೇವೆ. ಇಂತಹ ವಿಶೇಷವಾಗಿ ಅರಣ್ಯವಿರುವ ಈ ದೇಶದಲ್ಲಿ ಯಾವತ್ತು ಉತ್ತಮವಾದಂಥ ಮರಗಳನ್ನು ಬೆಳೆಸುವುದಕ್ಕೆ ತಕ್ಕ ಅವಕಾಶ ಸಿಕ್ಕಿರುವಂತಹ ದೇಶದಲ್ಲಿ ಪರದೇಶಗಳಿಂದ ಲಕ್ಷಾಂತರ ಮತ್ತು ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆಯಾದಂಥ ಮರ ಮುಟ್ಟುಗಳನ್ನು ತರಿಸುವುದು ನಮಗೆ ಕೀರ್ತಿ ತರುವಂತಹ ವಿಷಯವಲ್ಲ. ಆದ್ದರಿಂದ ನಮ್ಮ ದೇಶದಲ್ಲಿಯೂ ಉಪಯುಕ್ತವಾದ ಮರಗಳನ್ನು, ಹೆಚ್ಚಿಗೆ ಫಲದಾಯಕವಾದಂಥ ಮರಗಳನ್ನು ಅದರಲ್ಲೂ ನಮಗೆ ಅವಶ್ಯಕವಾಗಿ ಬೇಕಾದಂಥ ಮರಗಳನ್ನು ವಿಶೇಷವಾಗಿ ಬೆಳೆಯುವುದಕ್ಕೆ ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಅದರಲ್ಲಿಯೂ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸಾಧ್ಯವಾದರೆ ಒಳ್ಳೊಳ್ಳೆಯ ಮರಗಳನ್ನು ಹಾಕಿಸುವುದಕ್ಕೆ ಸರ್ಕಾರ ಈ ಕೂಡಲೆ ಪ್ರಯತ್ನ ಮಾಡಬೇಕೆಂದು ನಾನು ಪ್ರಾರ್ಥಿಸುತ್ತೇನೆ. ಇನ್ನು ಕೆಲವು ಕಡೆಗಳಲ್ಲಿ ಅರಣ್ಯದಲ್ಲಿ ಬೆಳೆಯುತ್ತಿರುವ ಮರಗಳಿಗೆ ಒಳ್ಳೊಳ್ಳೆಯ ನರ್ಸರೀಸ್

(ಶ್ರೀ ಟಿ. ಮಾದಯ್ಯಗೌಡ)

ಸೀಡ್ಲಿಂಗ್ಸ್ ಹಾಕಿ ಬೆಳೆಯಬೇಕೆಂಬ ವ್ಯವಸ್ಥೆ ಮಾಡಿದ್ದಾರೆ. ಆದರೆ ಆ ನರ್ಸರೀಸನ್ನು ಎಷ್ಟರ ಮಟ್ಟಿಗೆ ಚೆನ್ನಾಗಿ ಬೆಳೆದಿದ್ದಾರೆ, ಆದರಿಂದ ಅರಣ್ಯದಲ್ಲಿ ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆಯೆಂಬುದು ನನ್ನ ಗಮನಕ್ಕೆ ಬಂದಿಲ್ಲ. ನಾನು ಅನೇಕ ಸ್ಥಳಗಳನ್ನು ನೋಡಿದ್ದೇನೆ. ನನ್ನ ಮಾನ್ಯ ಮಿತ್ರರು ಅನೇಕರು ಬಹಳ ಒಳ್ಳೊಳ್ಳೆಯ ಗಿಡಗಳನ್ನು ಬೆಳೆಸಿದ್ದಾರೆ. ಆದರೆ ಈ ಬಾಬಿಗೆ ಸರ್ಕಾರದವರು ಒದಗಿಸಿರುವ ಹಣ ಬಹಳ ಕಡಮೆ. ಇಂಥಾದ್ದು ಅರಣ್ಯದಲ್ಲಿ ಬೆಳೆಯುವುದಕ್ಕೆ ಅರ್ಹವಾದುದಲ್ಲ. ಅಲ್ಲಿ ನರ್ಸರಿ ಬೆಳೆಯುವುದಕ್ಕೋಸ್ಕರ ಮಾಡಿದಂತಹ ಖರ್ಚು ಎಲ್ಲಾ ವ್ಯರ್ಥ. ಆ ತರಹ ಆಗಬಾರದು. ನರ್ಸರಿಗಳನ್ನು ಎಲ್ಲಾ ಕಡೆಯೂ ಬೆಳೆಸಬೇಕು. ಒಂದು ವೇಳೆ ಆ ಬಾಬಿಗೆ ಕೆಲವು ಪ್ರದೇಶಗಳಲ್ಲಿ ಹಣ ಸಾಲದೇ ಇದ್ದರೆ ಅಂತಹ ಸಂದರ್ಭದಲ್ಲಿ ಸರ್ಕಾರದವರೇ ಅದಕ್ಕೆ ಬೇಕಾಗುವಷ್ಟು ಹಣವನ್ನು ಒದಗಿಸಿ ಅವನ್ನು ಚೆನ್ನಾಗಿ ಕಾಪಾಡಿಕೊಂಡು ಬರಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ. ಅಲ್ಲದೆ ಅರಣ್ಯ ಇಲಾಖೆಯವರು ಹಿಂದೆ ಈ ನರ್ಸರಿಯಲ್ಲಿ ಒಳ್ಳೊಳ್ಳೆಯ ಗಿಡಗಳನ್ನು ರೈತರಿಗೆ ಮುಫತ್ತಾಗಿ ಒದಗಿಸುತ್ತಿದ್ದರು. ಹತ್ತಾರು ವರ್ಷಗಳ ಹಿಂದೆ ಕೆಲವು ನರ್ಸರೀಸುಗಳನ್ನು ನಾನೇ ಬೆಳೆಯುತ್ತಿದ್ದೆ. ಈಗ ಆಲೆ, ಹೊನ್ನೆ, ತೇಗ ಮುಂತಾದ ಗಿಡಗಳನ್ನು ತೆಗೆದುಕೊಂಡು ಹೋಗಿ ನಮ್ಮ ತೋಟದಲ್ಲಿ ಸಾಕಿ ಬೆಳೆಯುತ್ತಿರುವುದರಿಂದ ಈಗ ಒಳ್ಳೆಯ ಫಲ ಕೊಡುತ್ತಿವೆ. ಆದ್ದರಿಂದ ಸಾಮಾನ್ಯವಾಗಿ ರಸ್ತೆಗಳಲ್ಲಿ ಬೆಳೆದಿರತಕ್ಕ ಸಣ್ಣ ಸಣ್ಣ ಗಿಡಗಳನ್ನು ಕಿತ್ತುಕೊಂಡು ಹೋಗಿ ರೈತರು ತಮ್ಮ ತೋಟಗಳಲ್ಲಿ ಹಾಕಿಕೊಂಡರೆ ಸಾಕು. ಎಷ್ಟೋ ಗಿಡ ಮರಗಳನ್ನು ಬೆಳೆಸಬಹುದು. ರೈತರಿಗೆ ಆಗಾಗ್ಗೆ ವನಮಹೋತ್ಸವವನ್ನು ಮಾಡುತ್ತಿರಬೇಕೆಂದು ಪ್ರೋತ್ಸಾಹ ಕೊಡುತ್ತಾ ಹೆಚ್ಚಿಗೆ ಅವರು ಗಿಡಗಳನ್ನು ಬೆಳೆಯಬೇಕೆಂದು ಒತ್ತಾಯ ಮಾಡಬೇಕು. ಅಲ್ಲದೆ ಮುಫತ್ತಾಗಿ ಒಳ್ಳೊಳ್ಳೆಯ ಗಿಡಗಳನ್ನು ಅರಣ್ಯ ಇಲಾಖೆಯವರು ದೇಶದ ಜನಗಳಿಗೆ ಒದಗಿಸಿ ಕೊಡಬೇಕೆಂದು ನಾನು ಸೂಚಿಸಬಯಸುತ್ತೇನೆ.

2-30 P. M.

ಮರಗಳನ್ನು ಅರಣ್ಯದಲ್ಲೇ ಬೆಳೆಸಬೇಕೆಂಬ ಒಂದು ನಿಯಮ ನಮ್ಮ ಇಲಾಖೆಯವರಲ್ಲಿ ಇರಬಾರದು. ರಸ್ತೆಗಳಲ್ಲಿ ಲಕ್ಷಾಂತರ, ಕೋಟ್ಯಾಂತರ ಸಾಲು ಮರಗಳನ್ನು ಬೆಳೆಸಿದ್ದಾರೆ. ಆ ಮರಗಳನ್ನು ನೋಡಿಕೊಳ್ಳುವುದು, ಹೊಸದಾಗಿ ಸಾಲು ಮರಗಳನ್ನು ಹಾಕುವುದು. ಅವುಗಳನ್ನು ಪೋಷಿಸುವುದು ಕೂಡ ಅರಣ್ಯ ಇಲಾಖೆಯವರಲ್ಲವಾದರೂ ಲೋಕೋಪಯೋಗಿ ಇಲಾಖೆಯವರು ಗಮನಿಸಬೇಕಾದ್ದು ಅಗತ್ಯ. ಅವರು ಹೆಚ್ಚು ಮರಗಳನ್ನು ಬೆಳೆಸಲು ಅವಕಾಶ ಮಾಡಿ ಕೊಡಬೇಕು. ನಾಲೆಗಳ ಪಕ್ಕದಲ್ಲಿ ಮತ್ತು ಇನ್ನೆಲ್ಲಿ ಮರಗಳನ್ನು ಬೆಳೆಸುವುದಕ್ಕೆ ಅವಕಾಶ ವಿದೇಯೋ ಅಲ್ಲೆಲ್ಲಾ ಹೆಚ್ಚು ಗಿಡಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಸೂಚಿಸಲು ಅಪೇಕ್ಷಿಸುತ್ತೇನೆ.

ಅನೇಕ ಅರಣ್ಯಗಳಲ್ಲಿ ಅರಣ್ಯ ಸಂಪತ್ತು ನಾನಾ ರೀತಿಯಲ್ಲಿ ದುರ್ವ್ಯಯವಾಗುತ್ತಾ ಇದೆ, ಜನರು ಅಲ್ಲಿ ಸಿಕ್ಕತಕ್ಕ ಸಾಮಗ್ರಿಗಳನ್ನು ಕದ್ದು ತೆಗೆದುಕೊಂಡು ಹೋಗುತ್ತಾರೆ ಎಂಬ ಇತ್ಯಾದಿ ಅನೇಕ ಆರೋಪಣೆಗಳನ್ನು ಕೇಳುತ್ತೇವೆ. ಅದಕ್ಕೆ ಒಂದೇ ಒಂದು ಉಪಾಯವೇನೆಂದರೆ ಮಾನ್ಯಮಂತ್ರಿಗಳು ಮಾತ್ರವೇ ಅಲ್ಲದೆ ಅಧಿಕಾರಿಗಳೂ ಕೂಡ ಅನಿರೀಕ್ಷಿತ ಭೇಟಿಕೊಟ್ಟು ಅರಣ್ಯ ಸಂಪತ್ತು ಹೇಗೆ ಬೆಳೆಸುತ್ತಾ ಇದ್ದಾರೆ ಮತ್ತು ಜನರು ಅದನ್ನು ಹೇಗೆ ದುರುಪಯೋಗಪಡಿಸುತ್ತಾರೆ ಎಂಬುದನ್ನು ನೋಡಿಕೊಂಡು ತಕ್ಕ ಬಂದೋಬಸ್ತು ಮಾಡಿದರೆ ಒಳ್ಳೆಯದು ಎಂದು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಿಸುತ್ತೇನೆ.

ಅರಣ್ಯ ಸಂಪತ್ತು ಬಹಳ ಮುಖ್ಯವಾದದ್ದು, ಎಷ್ಟು ಹೆಚ್ಚಿನ ಗಮನ ಅದಕ್ಕೆ ಕೊಟ್ಟರೆ ಅಷ್ಟು ನಮ್ಮ ದೇಶದ ಸಂಪತ್ತನ್ನು ಕೂಡಿಸುವುದಕ್ಕೆ ಅನುಕೂಲವಾಗುತ್ತದೆ, ಸುಖ ಸಂಪತ್ತು ಜನರಿಗೆ ದೊರೆಯುತ್ತದೆ. ಶ್ರೀ ಮಾರ್ ರಾಚಯ್ಯನವರು ಬಳಿಗಿರಿರಂಗನ ಬೆಟ್ಟದ ಸಮೀಪದಲ್ಲಿರುವ ಅರಣ್ಯ ಪ್ರದೇಶದಿಂದ ಬಂದಿರತಕ್ಕವರು. ಅಲ್ಲಿ ದೊಡ್ಡ ಕಾಡು ಇದೆ. ಅಲ್ಲಿರತಕ್ಕ ಒಂದು ಸಂಪಿಗೆ ಮರ ಇಲ್ಲಿ ನಾವು ಎಷ್ಟು ಜನ ಕುಳಿತಿದ್ದೇವೆಯೋ ಅಷ್ಟು ಜನರಿಗೂ ನೆರಳನ್ನು ಉಂಟು ಮಾಡುವಂತಹ ಮರ ಆಗಿದೆ. ಆನೆಗಳ ಹಿಂಡು ಇವೊತ್ತಿಗೂ ಯಥೇಚ್ಛವಾಗಿದೆ. ಇಂಥ ಅರಣ್ಯ ಪ್ರದೇಶದಿಂದ ಬಂದಿರುವ ಅವರಿಗೆ ತುಂಬಾ ಅನುಭವ ಇದೆ. ಅವರು ಹೆಚ್ಚು ನಿಗಾ ಕೊಟ್ಟು ಅರಣ್ಯವನ್ನು ಬೆಳೆಸುವುದಕ್ಕೆ ಸಾಹಸ ಮಾಡುತ್ತಾರೆ ಎಂದು ನಂಬಿದ್ದೇನೆ.

ಇನ್ನು ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಒಂದೇ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಸೇಲ್ಸ್‌ಟ್ಯಾಕ್ಸ್ ವಸೂಲು ಮಾಡುವುದರಲ್ಲಿ ಬಹಳ ಲೀಕೇಜ್ ಇದೆ. ಆದರಿಂದ ಎಲ್ಲ ಹೊರಟು ಹೋಗುತ್ತದೆ ಎಂದು ಎಲ್ಲರೂ ಕೂಗುತ್ತಾ ಇರತಕ್ಕ ಮಾತಾಗಿದೆ. ಈ ಲೀಕೇಜನ್ನು ಅದಷ್ಟು ಜಾಗ್ರತೆ ಮುಚ್ಚಿದಿದ್ದರೆ ಎಷ್ಟು ವರಮಾನ ಬರಬೇಕೋ ಅಷ್ಟು ಬರುವುದಿಲ್ಲ, ಇದಕ್ಕೆ ಹೆಚ್ಚು ನಿಗಾ ಇಲಾಖೆಯವರು ಕೊಡಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಈ ಸೇಲ್ಸ್‌ಟ್ಯಾಕ್ಸ್ ಆಫೀಸರುಗಳು ಸೇಲ್ಸ್‌ಟ್ಯಾಕ್ಸ್ ವಸೂಲು ಮಾಡ ತಕ್ಕ ವಿಧಾನ ಏನಿದೆ ಅದು ಸ್ವಲ್ಪ ಯೋಚನೆ ಮಾಡುವಂತಹ ವಿಚಾರವಾಗಿದೆ. ಅವರು ಹೆಚ್ಚು ನಿಗಾ ಕೊಟ್ಟು ಲೆಕ್ಕಗಳನ್ನು ನೋಡುತ್ತಾರೆಯೇ; ಏನು ವರಮಾನ ಬಂದಿದೆಯೋ ಅದನ್ನು ನೋಡುತ್ತಾರೆಯೇ; ಆದಾಯ ವೆಚ್ಚ ಏನು ನಡೆದಿದೆ, ವ್ಯವಹಾರ ಏನು ನಡೆದಿದೆ ಎಂಬುದನ್ನು ನೋಡುತ್ತಾರೆಯೇ ಎಂದು ನಮಗೆ ಅನೇಕ ಸಲ ಸಂಶಯ ಬಂದಿದೆ. ನಾನು ತಿಳಿದಿದ್ದೇನೆ, ಸಾಧಾರಣವಾಗಿ ಯಾವ ಮನುಷ್ಯನಿಗೆ ಎಷ್ಟು ಹಾಕಬೇಕೋ ಅಷ್ಟು ಹಾಕದೇ ಕಡಮೆ ವಿಧಿಸಿರತಕ್ಕ ಸಂದರ್ಭಗಳು ಇವೆ. ಎರಡರಷ್ಟು ಮೂರರಷ್ಟು ವಿಧಿಸಿ ಅವನು ಏನು ಸ್ವಾಮಿ ಹೀಗೆ ಮಾಡಿದಿರಿ ಎಂದರೆ ಅಪೀಲು ಇದೆ, ಅಪೀಲು ಹೋಗಿ ಎಂದು ಹೇಳತಕ್ಕ ಸಂದರ್ಭವೂ ಇದೆ. ಅತನು ಅಪೀಲು ಹೋಗಿ ಕಷ್ಟಪಟ್ಟು ದುಡ್ಡು ವ್ಯಯ ಮಾಡುವುದಕ್ಕೆ ಬದಲಾಗಿ ಏನಾದರೂ ಮಾಡಿ ಅಲ್ಲೇ ಕಡಮೆ ಹಾಕಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾನೆ. ಹೀಗೆ ನಾನಾ ತರಹ ವ್ಯವಹಾರ ನಡೆಯುತ್ತಾ ಇದೆ ಎಂದು ತಿಳಿದು ಬಂದಿದೆ. ಇದಕ್ಕೆ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಸೇಲ್ಸ್ ಟ್ಯಾಕ್ಸ್ ಆಫೀಸರ್ಸ್ ಕಟ್ಟುನಿಟ್ಟಾಗಿ ಸರಿಯಾಗಿ ಲೆಕ್ಕಾಚಾರ ನೋಡಿ ಸರಿಯಾಗಿ ವಿಧಿಸಿ ವ್ಯಾಪಾರಸ್ಥರಿಗೂ ತೊಂದರೆ ಆಗಕೂಡದು; ಸರ್ಕಾರಕ್ಕೆ ಎಷ್ಟು ವರಮಾನ ಬರಬೇಕೋ ಅಷ್ಟು ಬರುವ ಹಾಗೂ ಮಾಡತಕ್ಕದ್ದು ಬಹಳ ಅಗತ್ಯ. ಅದಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಎಕ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಈಗಾಗಲೇ ಮಾತನಾಡಿದಂಥ ಶ್ರೀಮಾಕ್ ಮಾದಯ್ಯ ಗೌಡರು ಹೇಳಿರುವ ಕೆಲವು ವಿಚಾರಗಳನ್ನು ಒಪ್ಪಿ ಕೊಳ್ಳಬೇಕಾದ್ದು ಬಹಳ ಅಗತ್ಯವಾಗಿದೆ. ಅರಣ್ಯ ಪ್ರದೇಶ ಎನ್ನುವಕಡೆ ಕೆಲವು ಪ್ರದೇಶದಲ್ಲಿ ಒಂದು ಕುರುಚಲುಗಿಡವೂ ಕೂಡ ಇಲ್ಲ. ಈ ಫಾರೆಸ್ಟ್ ಅಧಿಕಾರಿಗಳು ಅರಣ್ಯದ ಸುತ್ತು ಮುತ್ತಲೂ ಇರತಕ್ಕ ರೈತರಿಗೆ ವಿಶೇಷ ಕಿರುಕುಳಕೊಡುತ್ತಾ ಇದ್ದಾರೆ. ಅದಕ್ಕೆ ನಿತ್ಯ ನಿದರ್ಶನ ನಮ್ಮ ಊರಿಗೆ ಬಂದರೆ ನಾನು ತೋರಿಸಬಲ್ಲೆ. ಕೆಲಸವಿಲ್ಲದ ಕಾಲದಲ್ಲಿ ರೈತ ಅವನ ಹೊಟ್ಟೆಪಾಡಿಗೆ ಒಂದೆರಡು ಗಾಡಿ ಸೌದೆ ತಂದು ಮಾರುವುದಕ್ಕೆ ಬಂದರೆ ಫಾರೆಸ್ಟ್ ಇಲಾಖೆಯವರು ಅದು ಅರಣ್ಯದಿಂದ ತಂದದ್ದು ಎಂದು ಹೇಳಿ 40-50 100 ರೂಪಾಯಿ ಹೀಗೆಲ್ಲಾ ಜುಲ್ಮಾನೆ ಹಾಕಿಕೊಂಡರೆ ಯಾಗುತ್ತಾ ಇರುವುದನ್ನು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತಂದು, ಈ ಅರಣ್ಯ ಹತ್ತಿರ ಇರುವುದರಿಂದ ನಿಜವಾಗಿಯೂ ರೈತರಿಗೆ ತೊಂದರೆ ಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಅರಣ್ಯ ಹತ್ತಿರ ಇರುವ ಹಳ್ಳಿಗಳಲ್ಲಿ ದನಕರುಗಳು ಮೇಯುವುದಕ್ಕೆ ಅವಕಾಶವಿಲ್ಲ. ಅನೇಕ ಗ್ರಾಮಗಳಲ್ಲಿ ಗೋಮಾಳಗಳು ಇಲ್ಲದಂಥ ಒಂದು ಪರಿಸ್ಥಿತಿ ಉದ್ಭವವಾಗಿದೆ. ಸಾಕಾದಷ್ಟು ಗೋಮಾಳ ಇಲ್ಲದೆ ಹೋದರೆ ವಿಲೇಜ್ ಫಾರೆಸ್ಟ್ ಕಾಡು ಏನು ಮಾಡಿದ್ದೀರಿ ಆ ಪ್ರದೇಶದಲ್ಲಿ ಮಟ್ಟಿಗೆ ಗೋಮಾಳಕ್ಕೆ ಜಾಗಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರದವರನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ.

ಇನ್ನು ಶ್ರೀಮಾಕ್ ಮಾದಯ್ಯ ಗೌಡರು ಹೇಳಿದ ಹಾಗೆ ನರ್ಸರಿಗಳಲ್ಲಿ ಒಳ್ಳೊಳ್ಳೆಯ ಸಸಿಗಳು ಬಂದಿರುತ್ತವೆ. ಸಕಾಲದಲ್ಲಿ ಅವನ್ನು ಹಂಚಬೇಕು, ರೈತರಿಗೆ ಆ ಸಸಿಗಳನ್ನು ಕೊಟ್ಟು ಅದರ ಬೆಳವಣಿಗೆಗೆ ಅನುಕೂಲ ಮಾಡಿ ಕೂಡಬೇಕೆನ್ನುವ ಸಲಹೆಯನ್ನು ಮತ್ತೊಮ್ಮೆ ನಾನು ಈ ಸಂದರ್ಭದಲ್ಲಿ ಪುಷ್ಟೀಕರಿಸಬೇಕಾಗಿದೆ.

ಈ ಅರಣ್ಯ ಇಲಾಖೆಯ ವಿಚಾರದಲ್ಲಿ ಇನ್ನೂ ಹೆಚ್ಚು ಮಾತನಾಡದೆ ಅಗ್ರಿಕಲ್ಚರಲ್ ಟ್ಯಾಕ್ಸ್ ಬಗ್ಗೆ ಯಾವ ಒಂದು ಡಿಮ್ಯಾಂಡ್ ಇದೆ ಅದರ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಸ್ವಾಮಿ, ಈ ದೇಶದಲ್ಲಿ ಇರತಕ್ಕ ಪ್ರತಿಯೊಂದು ಭಾಗದ ಜನಗಳಿಗೂ ಸರ್ಕಾರ ರಕ್ಷಣೆ ಕೊಟ್ಟಿದೆ, ಅವರಿಗೆ ಅನುಕೂಲ ಮಾಡಿಕೊಟ್ಟಿದೆ. ಅದೇನು ದುರದೃಷ್ಟವೋ ಈ ರೈತರನ್ನು ಕೇಳತಕ್ಕವರೇ ಇಲ್ಲದ ಹಾಗಾಗಿದೆ. ಕಾರಣವಾದರೂ ಇಷ್ಟೆ. ಈ ನಮ್ಮ ಸಭೆಯಲ್ಲಿ ಅನೇಕ ಜನ ವ್ಯವಸಾಯ ಮುಖ್ಯಕಸುಬಾಗಿ ಉಳ್ಳಂಥ ಸದಸ್ಯರು ಇದ್ದಾರೆ. ಈ ವ್ಯವಸಾಯ ಎಳ್ಳಷ್ಟೂ ಲಾಭದಾಯಕವಾದ ಕಸಬಲ್ಲ. 500, ಸಾವಿರ ರೂಪಾಯಿ ಕಂದಾಯಕೊಡತಕ್ಕ ಒಬ್ಬ ರೈತನೂ ಕೂಡ ಅವನ ಸಂಸಾರಕ್ಕೆ ಬೇಕಾದಂಥ ಅನ್ನ ಬಟ್ಟೆ ಒದಗಿಸಿಕೊಳ್ಳುವುದಕ್ಕೆ ಬಹಳ ಕಷ್ಟವಾದ ಪರಿಸ್ಥಿತಿ ಬಂದಿದೆ. ಇದೇ ರೀತಿ ರೈತನಿಗೆ ನಿಗ ಕೊಡದಿದ್ದರೆ, ಈಗ ಉತ್ಪನ್ನವಾಗುತ್ತಾ ಇರತಕ್ಕ ಈ ಜನಸಂಖ್ಯೆಗೆ ಇನ್ನು ಕೆಲವುದಿನದಲ್ಲಿ ಅನ್ನ ಹೇಗೆ ಒದಗಿಸುವುದು ಎನ್ನತಕ್ಕ ಒಂದು ಪ್ರಶ್ನೆಯೂ ಕೂಡ ಬಹಳ ಬೃಹದಾಕಾರವಾಗಿ ಈ ದೇಶದಲ್ಲಿ ಹಬ್ಬುತ್ತಿದೆ ಎನ್ನುವುದನ್ನು ಈ ಸರ್ಕಾರ ಎಷ್ಟು ಬೇಗ ಮನಗಾಣುತ್ತದೆ ಅಷ್ಟು ಒಳ್ಳೆಯದು ಎಂದು ನನಗೆ ಅನಿಸುತ್ತದೆ.

ನಮ್ಮ ದೇಶದಲ್ಲಿ ಐದು ಎಕರೆ, ಹತ್ತು ಎಕರೆ, ಇಪ್ಪತ್ತು ಎಕರೆ ಹಿಡುವಳಿ ಇರತಕ್ಕ ರೈತರೇ ಬಹಳ ಹೆಚ್ಚು. ನೂರಾರು ಎಕರೆ ಇರುವವರು ಕೈ ಬೆರಳಿನಲ್ಲಿ ಎಣಿಸುವಷ್ಟು ಮಾತ್ರ ಇದ್ದಾರೆ. ನೂರಾರು ಎಕರೆ ಇರತಕ್ಕವರು ಕೂಡ ಈಗಿನಕಾಲದಲ್ಲಿ ಕೂಲಿಗಾರರ ಅಭಾವದಿಂದ ತೊಂದರೆ ಪಡುತ್ತಿದ್ದಾರೆ. ಬೆಂಗಳೂರಿನಂತಹ ಪಟ್ಟಣಗಳನ್ನು ವಿಶೇಷವಾಗಿ ಬೆಳೆಸುತ್ತಿರುವುದರಿಂದ ಹಳ್ಳಿಗಾಡಿನಲ್ಲಿ ನೆಲಸಿ ದುಡಿಮೆ ಮಾಡಿ ವ್ಯವಸಾಯ ಕೆಲಸ ಮಾಡುವ ಜನರಿಲ್ಲ. ಅಕ್ಕಪಕ್ಕದ ಪ್ರದೇಶದಲ್ಲಿರುವ ಕಾರ್ಖಾನೆಗಳಲ್ಲಿ ಅಥವಾ ಲೋಕೋಪಯೋಗಿ ಇಲಾಖೆ ಕೆಲಸ ಮಾಡತಕ್ಕ ಸ್ಥಳಗಳಲ್ಲಿ ಹೋಗಿ ಕೆಲಸ ಮಾಡಿದರೆ ದಿನಕ್ಕೆ ಎರಡು ಅಥವಾ ಎರಡೂವರೆ ರೂಪಾಯಿ ಕೂಲಿ ಕೊಡುತ್ತಾರೆ. ಇದೇ ಕೂಲಿಯನ್ನು ವ್ಯವಸಾಯದ ಕೆಲಸ ಮಾಡುವವರಿಗೆ ಕೊಟ್ಟು, ಕಂದಾಯ ಕೌಳಿಗೆ ಕೊಟ್ಟು ನೆಮ್ಮದಿಯಿಂದ ಸಂಸಾರ ಮಾಡಿಕೊಂಡು ಹೋದರೆ ಸಾಕೆಂದಿರುವ ವ್ಯವಸಾಯಗಾರನಿಗೆ ಈ ವಿಶೇಷ ತೆರಿಗೆಯನ್ನು ವಿಧಿಸಬೇಕೆಂದು ಹೇಳುತ್ತಿದ್ದೀರಿ. ಇದನ್ನು ಕೊಡಲು ಅವನಿಗೆ ಸಾಧ್ಯವೆ ಎನ್ನುವುದನ್ನು ಸರ್ಕಾರ ಆಳವಾಗಿ ಯೋಚನೆ ಮಾಡಬೇಕು. ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ಹೇಳುವುದಾದರೆ, ಅಲ್ಲಿ ಸಕಾಲಕ್ಕೆ ಮಳೆಯಿಲ್ಲ ಬೆಳೆಯಿಲ್ಲ. ಅಲ್ಲಿನ ಪರಿಸ್ಥಿತಿಯಲ್ಲಿ ಬಹಳ ಉತ್ತಮ ರೀತಿಯಲ್ಲಿ ವ್ಯವಸಾಯ ಮಾಡಿ ಬಹಳ ಮೆಹನತ್ತು ಮಾಡಿದರೆ ಎಕರೆ ಯೊಂದರಲ್ಲಿ ನಾಲ್ಕು ಅಥವಾ ಐದು ಫಲ್ಲ ರಾಗಿ ಆದರೆ ಅದು ಬಹಳ ಜಾಸ್ತಿ. ಬೇರೆ ತಾಲ್ಲೂಕುಗಳಲ್ಲಿ ಹೆಚ್ಚುಕಡಮೆಯಾಗಬಹುದು, ಆದರೆ ನಮ್ಮ ತಾಲ್ಲೂಕಿನಲ್ಲಿ ಇಷ್ಟೇ. ಈ ರೀತಿಯ ಪರಿಸ್ಥಿತಿಯಿರುವಾಗ ಐದು ಎಕರೆ ಜಮೀನಿರುವ ರೈತ ಹೆಚ್ಚು ಬೆಳೆದರೆ 20-22 ಫಲ್ಲ ಬೆಳೆಯುತ್ತಾನೆಂದು ಇಟ್ಟುಕೊಂಡರೂ ಅವನು 365 ದಿವಸ ತನ್ನ ಹೆಂಡತಿ ಮಕ್ಕಳ ಜೊತೆಯಲ್ಲಿ ಬಿಸಿಲು ಮಳೆಯಲ್ಲಿ ವ್ಯವಸಾಯ ಮಾಡಬೇಕು. ಅದೇ ಇಲ್ಲಿ ಸೆಕ್ರೆಟೇರಿಯಟ್‌ನಲ್ಲಿರುವ ಜವಾನರಿಗೆ ತಿಂಗಳಿಗೆ 60-65 ರೂಪಾಯಿ ಸಂಬಳ ಕೊಡುತ್ತಾರೆ. ಹೀಗಿದ್ದರೂ ನಮ್ಮ ಪುಣ್ಯವೋ ಏನೋ ಎಂದು ಕಾಣುತ್ತದೆ, ಇನ್ನೂ ನಮ್ಮ ರೈತ ಆಶಾವಾದಿ ಯಾಗಿ ನಾಳೆ ಸುಖವಾಗಿರಬಹುದೋ ಏನೋ, ನಾಳೆ ಜಾಸ್ತಿ ಬೆಳೆಯ ಬಹುದೋ ಏನೋ ಎಂಬ ಆಸೆಯನ್ನಿಟ್ಟುಕೊಂಡು ಈ ಕಸುಬನ್ನಿಟ್ಟುಕೊಂಡಿದ್ದಾನೆ. ಈಗೇನಾದರೂ ಒಂದು ಪಕ್ಷ ಅವನಿಗೆ ಜಿಗುಪ್ಸೆ ಬಂದರೆ ಏನು ಪರಿಣಾಮವಾಗುತ್ತದೆಂಬುದನ್ನು ಯೋಚನೆಮಾಡಬೇಕು. ಆದುದರಿಂದ ದೇಶದ ಬೆನ್ನು ಮೂಳೆಯೆಂದು ಹೇಳುವ ರೈತನ ವಿಚಾರದಲ್ಲಿ ದಯವಿಟ್ಟು ಕನಿಕರವನ್ನಿಡಬೇಕಾದುದು ಸಾಧುವಾಗಿದೆ. ಅವನಿಗೆ ನೋವಾದರೆ ದೇಶ ಉಳಿಯಲು ಸಾಧ್ಯವಿಲ್ಲವೆನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಹೊತ್ತು ಒಂದು ಸಂಸಾರವನ್ನು ಅಚ್ಚುಕಟ್ಟಾಗಿ ಮಾಡಬೇಕಾದರೆ ಏನು ಬೇಕೋ ಅದನ್ನು ಪಡೆಯಲು ಅವನಿಗೆಷ್ಟು ಖರ್ಚಾಗುತ್ತದೆಂಬುದನ್ನು ಲೆಕ್ಕ ಹಾಕಬೇಕು. ಅಲ್ಲದೆ ಹಳ್ಳಿಗಳಲ್ಲಿ ರೈತನಾಗಿರುವವನಿಗೆ ಅನುಕೂಲಗಳಾದರೂ ಏನು? ಒಳ್ಳೆಯ ರಸ್ತೆಗಳಿಲ್ಲ, ಕುಡಿಯುವ ನೀರಿನ ಬಾವಿಗಳು ಕೂಡ ಇಲ್ಲ. ಹೆಸರಿಗೆ ವ್ಯವಸಾಯ ಇಲಾಖೆಎಂದಿಟ್ಟಿದ್ದಾರೆ. ಎಷ್ಟು ಜನ ಆ ಇಲಾಖೆಯ ಅಧಿಕಾರಿಗಳು ಹೋಗಿ ಅವನ ಕಷ್ಟ ಸುಖಗಳನ್ನು ವಿಚಾರಿಸಿ ಸೂಕ್ತ ಸಲಹೆಗಳನ್ನು ಕೊಡುತ್ತಾರೆ! ಈ ಅಧಿಕಾರಿಗಳು ಸಾಹೇಬರಾಗಿರುತ್ತಾರೆ, ಸೂಟು ಬೂಟುಗಳನ್ನು ಹಾಕಿಕೊಂಡು ಓಡಾಡುವ ಇವರು ದಟ್ಟಿ ಕಟ್ಟಿ ಕಸ ಬಿದ್ದಿರುವ ಸಣ್ಣ ಮನೆಗಳ ಮಧ್ಯೆ ಹೋಗಿ ರೈತನೊಡನೆ ಮಾತನಾಡದೆ ಇರುವ ಅಧಿಕಾರಿಗಳಿಂದ ರೈತನಿಗೇ ಅನುಕೂಲವಾಗುತ್ತದೆಂಬುದನ್ನು ಯೋಚನೆ ಮಾಡ

(ಶ್ರೀ ಟಿ. ಎನ್. ಮಾದಪ್ಪಗೌಡ)

ಬೇಕು. ಕಾರ್ಖಾನೆಯಲ್ಲಿ ಕೆಲಸ ಮಾಡುವವರು ತಮಗೆ ಸ್ವಲ್ಪ ಹೆಚ್ಚು ಕಡಮೆಯಾದರೆ ಮುಷ್ಕರ ಹೂಡುತ್ತಾರೆ. ತಮ್ಮ ಕೂಲಿ ಹೆಚ್ಚಿಸಬೇಕೆಂದು ಗಲಾಟೆ ಮಾಡುತ್ತಾರೆ, ಆಗ ಒಂದು ರೂಪಾಯಿ ಇರುವುದನ್ನು ಎರಡು ರೂಪಾಯಿಗೆ ಹೆಚ್ಚು ಮಾಡುತ್ತಾರೆ. ಬೋನಸ್ ಬೇರೆ ಕೊಡುತ್ತಾರೆ. ಹೀಗೆ ಅವರ ಹಿತ ರಕ್ಷಣೆಯಾಗಲು ಕಾನೂನು ಹಾಗೂ ಬೇರೆ ಮಾರ್ಗಗಳಿವೆ. ರೈತ ಮೂಕ ಪ್ರಾಣಿ, ಮಾತನಾಡಲಾರ, ಇಂಥವನಿಗೇನು ಮಾಡಿದ್ದಾರೆ? ಈಗಾಗಲೇ ಅವನು ಕಲ್ಲು ಬಂಡೆಯಾಗಿದ್ದಾನೆ, ಇನ್ನೂ ಹೆಚ್ಚು ಜಿಗುಪ್ಸೆಯಾದರೆ, ಕ್ರಾಂತಿಯಾಗುವ ಪರಿಸ್ಥಿತಿ ಬರುತ್ತದೆ. ಆದುದರಿಂದ ಅವನ ಮೇಲೆ ಬೀಳುವ ತೆರಿಗೆಯನ್ನು ಹಾಕುವ ಯೋಚನೆ ಮಾಡಬಾರದು, ತೆರಿಗೆ ಹಾಕಲು ಬೇರೆ ಬೇರೆ ಮಾರ್ಗಗಳನ್ನು ಹುಡುಕಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ; ಎರಡು ಸಾವಿರ ರೂಪಾಯಿ ವಾರ್ಷಿಕ ವರಮಾನವಿರತಕ್ಕ ಮನುಷ್ಯ ಒಂದು ಕಾಸು ಕೂಡ ಕಂದಾಯ ಅಥವಾ ತೆರಿಗೆಯನ್ನು ಸರ್ಕಾರಕ್ಕೆ ಕೊಡಬೇಕಾಗಿಲ್ಲ; ಆದರೆ ಐದು ಅಥವಾ ಹತ್ತು ಎಕರೆ ಭೂಮಿಯನ್ನಿಟ್ಟುಕೊಂಡು ವ್ಯವಸಾಯ ಮಾಡಿಕೊಂಡಿರುವವನು ತನ್ನ ಸಂಸಾರ ನಿರ್ವಹಣೆ ಮಾಡುವುದರ ಜೊತೆಗೆ ಖುಷ್ಕಿ ಕಂದಾಯವಾದರೂ ಎಂಟು ಹತ್ತು ರೂಪಾಯಿ ಕೊಡುತ್ತಾನೆ. ಅವನು ಮಳೆಯನ್ನು ನಂಬಿಕೊಂಡಿರಬೇಕು, ದುಡಿಮೆಯನ್ನು ನಂಬಿಕೊಂಡಿರಬೇಕು. ದೇವರ ಕೃಪೆಯಿಂದ ಮಳೆ ಆದರೆ ಸರಿ, ಇಲ್ಲದಿದ್ದರೆ ಏನೂ ಇಲ್ಲದೆ ಕೈಎತ್ತಬೇಕಾಗುತ್ತದೆ. ನಮ್ಮ ತಾಲ್ಲೂಕಿನ ಪರಿಸ್ಥಿತಿಯನ್ನು ನೋಡಿದರೆ, ರೈತ ಅಲ್ಪಾವಧಿ ಸಾಲ ತೆಗೆದುಕೊಂಡು ಅದನ್ನು ವಾಪಸ್ಸು ಕೊಡಲಾರದ ಸ್ಥಿತಿಯಲ್ಲಿದ್ದಾನೆ. ತಳಕು, ಮೋಸ ಇರುವುದು ಬೇರೆ ಕಸಬಿನ ಜನರಲ್ಲೇ ವಿನಾ ರೈತನಲ್ಲಿಲ್ಲ. ರೈತ ತಾನು ತೆಗೆದುಕೊಂಡ ಸಾಲವನ್ನು ತೀರಿಸಬೇಕು, ಋಣ ಮುಕ್ತನಾದರೆ ತನಗೆ ಮುಕ್ತಿ ಎಂದು ತಿಳಿದುಕೊಂಡಿರುವವನು ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಹೀಗಿರುವಾಗ ಅವನಿಗೆ ಏನೇನು ಅನುಕೂಲ ಮಾಡಬೇಕೋ ಅದನ್ನು ಮಾಡಬೇಕು, ಭೂಕಂದಾಯವನ್ನು ಕೂಡ ಅವನ ಮೇಲೆ ಹಾಕಬಾರದು. ರೈತರಲ್ಲಿ ಎರಡು ಸಾವಿರ ರೂಪಾಯಿ ಮೇಲೆ ಎಷ್ಟು ಸಂಸಾರಗಳಿಗೆ ವರಮಾನವಿದೆ ಎನ್ನುವ ಬಗ್ಗೆ statistics, ಎಂದರೆ, ಅಂಕಿ ಅಂಶಗಳನ್ನು ಸಂಗ್ರಹಿಸಲಿ.........

ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ, ವಸತಿ ಮತ್ತು ಸಾರಿಗೆ ಶಾಖೆಯ ಮಂತ್ರಿಗಳು).—ಕಂದಾಯ ವಜಾ ಮಾಡಿ ವ್ಯವಸಾಯ ತೆರಿಗೆ ಹಾಕೋಣವೆ?

ಶ್ರೀ ಟಿ. ಎನ್. ಮಾದಪ್ಪಗೌಡ.—ಹಾಗಾದರೂ ಮಾಡಿ. ರೈತ ಮೂಕಪ್ರಾಣಿ, ಜಾಸ್ತಿ ತಿಳಿವಳಿಕೆಯಿಲ್ಲದವನೆಂದು ಅವನನ್ನು ಕೆಣಕಬೇಡಿ. ಕೆಣಕಿದರೆ ಕ್ರಾಂತಿಯಾಗುವುದು ಶತಸಿದ್ಧ. ನಾಳೆ ಅದರಿಂದ ಬರತಕ್ಕ ಹೆಚ್ಚು ಕಡಮೆಗೆ ಅವಕಾಶ ಕೊಡಬಾರದು. ವ್ಯವಸಾಯ ತೆರಿಗೆಯೆಂದು ಏನು ಹೇಳುತ್ತೀರೋ ಅದನ್ನೂ ದಯವಿಟ್ಟು ಹಾಕಬೇಡಿ, ರೈತ ಹೆಚ್ಚು ಬೆಳೆಯಲು ಅನುಕೂಲ ಮಾಡಿ; ಸಣ್ಣ ಪುಟ್ಟ ಹಿಡುವಳಿದಾರರು ಯಾರಿದ್ದಾರೋ ಅವರಿಗೆ ಹೆಚ್ಚು ಒದವಿ ಮಾಡಿ ಹೆಚ್ಚು ಆಹಾರ ಬೆಳೆಯಲು ಅನುಕೂಲ ಮಾಡಿಕೊಡಬೇಕೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

MR. SPEAKER.—The House will now rise to meet again after half an hour.

The House adjourned for recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair].

ಶ್ರೀ ಜಿ. ವೆಂಕಟೇಗೌಡ (ಪಾಳ್ಯ).—ಮಾನ್ಯ ಸಭಾಧ್ಯಕ್ಷರೆ, ಮಾರಾಟ ತೆರಿಗೆ, ಅರಣ್ಯ ಮತ್ತು ಕಾರ್ಪೊರೇಷನ್ ತೆರಿಗೆ ಹೊರತು ಉಳಿದ ಆದಾಯಗಳ ಮೇಲಿನ ತೆರಿಗೆ ಇವುಗಳ ಬಗ್ಗೆ ಬೇಡಿಕೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಈ ಮಾನ್ಯ ಸಭೆಯ ಒಪ್ಪಿಗೆ ಪಡೆಯುವುದಕ್ಕೆ ಮುನ್ನ ಸರ್ಕಾರದವರು ಈ ಬಾಬುಗಳಲ್ಲಿ ಎಷ್ಟರಮಟ್ಟಿಗೆ ತೃಪ್ತಿಕರವಾಗಿ ಸುಧಾರಣೆ ಮಾಡಿದ್ದಾರೆ, ಆದಾಯ ಬರುವ ರೀತಿ ಮಾಡಿದ್ದಾರೆ ಎಂಬುದನ್ನು ಈ ಸಭೆ ಪರಿಶೀಲಿಸಬೇಕಾದ್ದು ಅಗತ್ಯ ಎಂದು ನಾನು ಅಂದುಕೊಂಡಿದ್ದೇನೆ.

ಮಾರಾಟ ತೆರಿಗೆ ೧೯೬೦-೬೧ರಿಂದ ೧೯೬೨-೬೩ರವರೆಗೆ ಸುಮಾರು ಸೇಕಡ ೧೫ರಷ್ಟು ಮಾತ್ರ ಹೆಚ್ಚಿಸಿದ್ದಾರೆ. ಸುಮಾರು ಹತ್ತು ಕೋಟಿ ಹತ್ತು ಲಕ್ಷ ರೂಪಾಯಿಗಳ ವರಮಾನ ಮಾರಾಟ ತೆರಿಗೆ ಬಾಬಿನಲ್ಲಿ ಬರಬಹುದೆಂದು ಹೇಳಿದ್ದಾರೆ. ಎಂಟು ಕೋಟಿ ಹನ್ನೆರಡು ಲಕ್ಷವಿದ್ದುದು ಹತ್ತು ಕೋಟಿ ಹತ್ತು ಲಕ್ಷ ೧೯೬೨-೬೩ಕ್ಕೆ ಹೆಚ್ಚಿದ ಹಾಗಾಯಿತು. ಖರ್ಚು ಸೇಕಡ ೨೬½ಯಷ್ಟಾಗಿದೆ. ಇದನ್ನು ಪರಿಶೀಲಿಸುವಾಗ ಆದಾಯವನ್ನು ಜಾಸ್ತಿ ಮಾಡುತ್ತಾ ಹೋಗುವಾಗ ಅದಕ್ಕಿಂತ ಹೆಚ್ಚು ಖರ್ಚಾಗುತ್ತಿದೆ ಎಂಬುದನ್ನು ಮಾನ್ಯ ಸಚಿವರಿಗೆ ತಿಳಿಸಬೇಕಾಗಿದೆ. ಅಲ್ಲದೆ ೧೯೬೧-೬೨ರಿಂದೀಚೆಗೆ ಷುಗರ್ ಕೇನ್ ಸೆಸ್ ಏನಿತ್ತು ಅದನ್ನು ಮಾರಾಟ ತೆರಿಗೆ ಮಟ್ಟದಲ್ಲಿ ಮರ್ಜ್ ಮಾಡುತ್ತಿದ್ದೇವೆ; ೧೯೬೧ನೆಯ ವರ್ಷದ ತಿದ್ದುಪಡಿ ಕಾನೂನಿನ ಪ್ರಕಾರ ಮರ್ಜ್ ಮಾಡುತ್ತಿದ್ದೇವೆ. ಷುಗರ್ ಕೇನ್ ಸೆಸ್ ವರ್ಷಕ್ಕೆ ಸುಮಾರು ೫೦-೬೦ ಲಕ್ಷದಷ್ಟು ಉತ್ಪತ್ತಿಯಾಗುತ್ತಿತ್ತು. ೧೯೬೦-೬೧ರ ಎಂಟು ಕೋಟಿಯಲ್ಲಿ ಸುಮಾರು ೫೦ ಲಕ್ಷದಷ್ಟು ಷುಗರ್ ಕೇನ್ ಸೆಸ್ ಸೇರಿಲ್ಲ ೧೯೬೧-೬೨ನಲ್ಲಿ ಅಷ್ಟೇ ಸೇರಿದೆ. ಎಷ್ಟು ಉತ್ಪತ್ತಿ ಬಂತೆಂಬುದನ್ನು ತಿಳಿಯಬಹುದು. ಹಾಗೆ ಮಾಡಿ ವಿವರಣೆ ಕೊಟ್ಟಿದ್ದರೆ ಚೆನ್ನಾಗಿತ್ತು. ಷುಗರ್ ಕೇನ್ ಸೆಸ್ ಸೇರಿ ಈ ದಿವಸ ಹತ್ತು ಕೋಟಿ ಹತ್ತು ಲಕ್ಷ ವರಮಾನ ಬರಬಹುದೆಂಬ ಸೂಚನೆಯಿದೆ. ಅಂದರೆ ಮಾರಾಟ ತೆರಿಗೆ ಆದಾಯ ಹೆಚ್ಚಿಸಲು ಸಾಧ್ಯವಾಗಿಲ್ಲ ಎಂದು ಸ್ಪಷ್ಟವಾಗುತ್ತದೆ. ಆದುದರಿಂದ ನಾನಾದರೂ ಸರ್ಕಾರವನ್ನು ಕೇಳುವುದು ಇಷ್ಟೆ. ಮಾರಾಟ ತೆರಿಗೆ ಆಡಳಿತ ಯಂತ್ರವೇನಿದೆ ಅದನ್ನು ಆದಷ್ಟು ಬಿಗಿ ಮಾಡಿ ಕಾನೂನು ಪ್ರಕಾರ ಬರಬೇಕಾದ್ದನ್ನು ಸರಿಯಾಗಿ ವಸೂಲು ಮಾಡುವುದಕ್ಕೆ ಸರ್ಕಾರ ಜಾಗ್ರತೆಯಾಗಿ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಏಕೆಂದರೆ, ಸಣ್ಣಪುಟ್ಟ ವ್ಯಾಪಾರಗಾರರು ತಾವೇ ಮುಂದೆ ಬಂದು ಕಾನೂನು ಪ್ರಕಾರ ಕಡ್ಡಾಯವಾಗಿ ತಾವು ಕೊಡಬೇಕಾದ್ದನ್ನು

ಕೊಡಲೇಬೇಕು. ಅವರು ಕೈಯಿಂದ ಕೊಡುತ್ತಿಲ್ಲ. ಜನರಿಂದ, ಕನ್ಸ್ಯೂಮರ್ಸ್‌ನಿಂದ ಮಾರಾಟ ತೆರಿಗೆಯನ್ನು ವಸೂಲು ಮಾಡಿ ಸರ್ಕಾರಕ್ಕೆ ಕೊಡುವ ಹಣವನ್ನು ಅವರು ಕಟ್ಟಲೇಬೇಕು. ಈ ದೃಷ್ಟಿಯಿಂದ ಈ ತೆರಿಗೆಯನ್ನು ವಸೂಲು ಮಾಡುವ ವ್ಯವಸ್ಥೆಯನ್ನು ಸರ್ಕಾರ ಸರಿಯಾಗಿ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ. ಮಾರಾಟ ತೆರಿಗೆಯುದೇಶಕ್ಕೆ ಆದಾಯ ಕೊಡುವಂಥ ಒಂದು ಬಾಬು. ಈ ಬಾಬಿನಲ್ಲಿ ಬಾಕಿ ಇಲ್ಲದಂತೆ ವಸೂಲು ಮಾಡದಿದ್ದರೆ ಕರ್ತವ್ಯಲೋಪವಾಗುವುದರ ಜೊತೆಗೆ ಯೋಜನೆಗಳಿಗೂ ಧಕ್ಕೆ ಬರುತ್ತದೆ ಎಂಬ ವಿಚಾರವನ್ನು ಈ ದಿವಸ ಸರ್ಕಾರಕ್ಕೆ ತಿಳಿಸಬೇಕಾಗಿದೆ. ಈ ಸಂಬಂಧದಲ್ಲಿ ಪ್ರೊಫೆಷನಲ್ ಟ್ಯಾಕ್ಸ್ ಹಾಕಿ ನಾಲ್ಕು ವರ್ಷಗಳಾದರೂ ಫೈನಲ್ ಅಸೆಸ್‌ಮೆಂಟ್ ನಿಗದಿ ಮಾಡುವುದಿಲ್ಲ. ಇದರಿಂದ ಪರಿಣಾಮ ನೆಟ್ಟಗಾಗುವುದಿಲ್ಲ. ಸಾಧಾರಣವಾಗಿ ದೊಡ್ಡ ವ್ಯಾಪಾರಗಾರರಿಗೆ ಪ್ರೊಫೆಷನಲ್ ಟ್ಯಾಕ್ಸ್ ಹಾಕುತ್ತಾರೆ. ಆದಷ್ಟು ಬೇಗ ಆಧಾರ ಸಹಿತ ಫೈನಲ್ ಟ್ಯಾಕ್ಸ್ ಡಿಟರ್‌ಮಿನ್ ಮಾಡುವ ವ್ಯವಸ್ಥೆ ಮಾಡದಿದ್ದರೆ ಇದರಿಂದ ವ್ಯಾಪಾರಗಾರರಿಗೂ ತೊಂದರೆಯಾಗುತ್ತದೆ ಮತ್ತು ಸರ್ಕಾರಕ್ಕೂ ಲೋಪವಾಗುತ್ತದೆ ಎಂದು ತಿಳಿದು ಆದಷ್ಟು ಮಟ್ಟಿಗೆ ಪ್ರೊಫೆಷನಲ್ ಟ್ಯಾಕ್ಸ್ ಹಾಕಿದ ಆರು ತಿಂಗಳಲ್ಲಿ ಫೈನಲ್ ಟ್ಯಾಕ್ಸ್ ಹಾಕುವ ಹಾಗೆ ವ್ಯವಸ್ಥೆ ಮಾಡಬೇಕು. ಅಲ್ಲದೆ ಈಗ ಅಸಿಸ್ಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್, ಕಮರ್ಷಿಯಲ್ ಟ್ಯಾಕ್ಸ್ ಆಫೀಸರು, ಇನ್ಸ್‌ಪೆಕ್ಟಿಂಗ್ ಆಫೀಸರು ಮುಂತ ದವರೆಲ್ಲಾ ನೇಮಕ ಮಾಡಲ್ಪಟ್ಟಿದ್ದಾರೆ. ಆದರೆ ಇವರ ನೇಮಕವಾದ ಮೇಲೆ ಆಡಳಿತ ಯಂತ್ರದಲ್ಲಿ ಸುಧಾರಣೆಯಾಗಿದೆಯೆ, ಎಷ್ಟು ಪರಿಣಾಮಕಾರಿಯಾಗಿ ಆಗಿದೆ ಎಂಬುದು ಗೊತ್ತಾಗುವುದಿಲ್ಲ. ಇದರಿಂದ ಖರ್ಚು ವಿಪರೀತವಾಗಿದೆ. ಆದಷ್ಟು ಸುಧಾರಣೆ ಮಾಡಿ ಹೆಚ್ಚಿನ ಕೆಲಸ ಸುವ್ಯವಸ್ಥಿತವಾಗಿ ನಡೆಯುಲುತಕ್ಕ ಏರ್ಪಾಡು ಮಾಡಬೇಕು.

ಮೈಸೂರು ಬೆಟ್ಟಿಂಗ್ ಟ್ಯಾಕ್ಸ್ ಏನಿದೆ ಅದನ್ನು ಟರ್ನ್ ಓವರ್ ಮೇಲೆ ಸೇಕಡ ೨೫ರಷ್ಟು ಹಾಕಲು ಅವಕಾಶವಿದೆ. ಆದರೆ ಈಗ ಸೇಕಡ ೧೫ರಷ್ಟನ್ನು ವಸೂಲು ಮಾಡುತ್ತಿದ್ದೇವೆ. ಕಾರಣವೇನು ? ಕಡಮೆ ವಿಧಿಸಿರುವುದಕ್ಕೆ ಕಾರಣವೇನೋ ಅರ್ಥವಾಗುತ್ತಿಲ್ಲ. ಇದರಿಂದ ಬರಬಹುದಾದ ಆದಾಯ ನಿಂತು ಹೋಗಿದೆ. ಸೇಕಡ ಇಪ್ಪತ್ತೈದರಂತೆ ವಸೂಲು ಮಾಡಬಹುದು. ಹಾಗೆ ಹೆಚ್ಚಿಸಿದರೆ ಸೇಕಡ ಹದಿನೈದರಂತೆ ವಸೂಲು ಮಾಡುವುದರ ⅔ರಷ್ಟು ಜಾಸ್ತಿ ಬರುತ್ತದೆಂಬುದನ್ನು ಸರ್ಕಾರ ತಿಳಿಯಬೇಕು. ಆದುದರಿಂದ ಈ ವರ್ಷದಿಂದಲಾದರೂ ಪರಮಾವಧಿ ಪರಮಾನದ ಶೇಕಡ ಇಪ್ಪತ್ತೈದರಷ್ಟನ್ನು ವಿಧಿಸುವುದು ಆವಶ್ಯಕ. ಆದ್ದರಿಂದ ಬೆಟಿಂಗ್ ಟ್ಯಾಕ್ಸ್ ಪ್ರಕಾರ ಶೇಕಡ ೨೦ರಷ್ಟು ತೆರಿಗೆಯನ್ನು ಟರ್ನ್‌ಓವರ್ ಮೇಲೆ ಹಾಕಿದರೆ ನಮ್ಮ Resourcesನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಇದರಿಂದ ಯಾವ ಸಾರ್ವಜನಿಕರಿಗೂ ತೊಂದರೆಯಾಗುವುದಿಲ್ಲ. ಇಂಥ ವಿಷಯದಲ್ಲಿ ಸರ್ಕಾರದವರು ತೆರಿಗೆಹಾಕುವುದರಲ್ಲಿ ಏಕೆ ನಿಧಾನವಾಗಿದ್ದಾರೋ ಗೊತ್ತಿಲ್ಲ. ಮಾನ್ಯ ಸಚಿವರು ಇದನ್ನು ಗುರುತು ಹಚ್ಚಿಕೊಂಡು ಸೂಕ್ತ ಕಾರ್ಯಕ್ರಮ ಶೀಘ್ರವಾಗಿ ತೆಗೆದುಕೊಂಡು, ಇತರ ತೆರಿಗೆಗಳ ವಿಷಯದಲ್ಲಿ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ.

ಅರಣ್ಯ ಶಾಖೆಯಲ್ಲಿ ಖರ್ಚು ವಿಪರೀತವಾಗುತ್ತಿರುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ೧೯೬೦-೬೧ರಲ್ಲಿ ಮೂರು ಕೋಟಿ ೬೧ ಲಕ್ಷ ರೂಪಾಯಿಗಳು ಖರ್ಚಾಗುತ್ತಿತ್ತು. ಈ ವರ್ಷ ೩೯೮ ಲಕ್ಷ ಅಂದರೆ, ಸುಮಾರು ನಾಲ್ಕು ಕೋಟಿ ಖರ್ಚಾಗುತ್ತದೆಂದು ಭಾವಿಸಿದ್ದಾರೆ. ಈ ಸಾರಿ ಎಂಟು ಕೋಟಿ ರೂಪಾಯಿಗಳ ಆದಾಯ ಬರಬಹುದೆಂದು ಹೇಳಿದ್ದೀರಿ. ಇದರಲ್ಲಿ ನಾಲ್ಕು ಕೋಟಿ ರೂಪಾಯಿಗಳು ಖರ್ಚಿಗಾಗಿ ಬೇಕಾಗುತ್ತದೆಂದು ಹೇಳಿದ್ದೀರಿ. ಆದಾಯದ ಅರ್ಧದಷ್ಟು ಹಣ ಖರ್ಚು ಮಾಡಬೇಕೆಂದು ಕೇಳಿದರೆ, ನಾವು ಎಷ್ಟು ಮಟ್ಟಿಗೆ ಅರಣ್ಯಸಂಪತ್ತನ್ನು ಉಳಿಸಿಕೊಳ್ಳುತ್ತಿದ್ದೇವೆ, ಆದಾಯ ತರುತ್ತಿದ್ದೇವೆಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ನೀವು ಆದಷ್ಟು ಮಟ್ಟಿಗೆ ನಮ್ಮ ಆದಾಯವನ್ನು ಹೆಚ್ಚಿಸುವುದನ್ನು ನೋಡಬೇಕು. ಹಣ ಖರ್ಚನ್ನು ಕಡಮೆ ಮಾಡುವುದನ್ನು ಯೋಜನೆ ಮಾಡಬೇಕೆಂದು ಸರ್ಕಾರಕ್ಕೆ ಹೇಳುತ್ತೇನೆ. ಬೇರೆ ಇನ್ನಾವ ಇಲಾಖೆಯಲ್ಲೂ ಇಷ್ಟು ಪ್ರಮಾಣದಲ್ಲಿ ಖರ್ಚಾಗುತ್ತಿಲ್ಲವೆನ್ನಬಹುದು. ಅಲ್ಲದೆ, ಈಗ ಕಳೆದ ಮೂರು ವರ್ಷಗಳಲ್ಲಿ ನಿಮ್ಮ ಆದಾಯ ಕೇವಲ ಶೇಕಡ ೨೦ರಷ್ಟು ಜಾಸ್ತಿಯಾಗಿದೆ. ೧೯೬೦-೬೧ರಲ್ಲಿ ಆರು ಕೋಟಿ ೯೨ ಲಕ್ಷ ಚಿಲ್ಲರೆ ಆದಾಯವಿತ್ತು. ಈಹೊತ್ತು ಎಂಟು ಕೋಟಿ ಆಗಬಹುದೆಂದು ಹೇಳಿದ್ದೀರಿ. ಖರ್ಚಾದರೋ ಶೇಕಡ ೩೩ರಷ್ಟು ಜಾಸ್ತಿಯಾಗಿದೆ. ಈ ದೃಷ್ಟಿಯಿಂದ ತಾವು ಅರಣ್ಯ ಆಡಳಿತವನ್ನು tone up ಮಾಡಬೇಕೆಂದು ಹೇಳುತ್ತೇನೆ. ಎಲ್ಲಿಯವರೆಗೆ ಆಡಳಿತದಲ್ಲಿ ಬಿಗಿ ಬರುವುದಿಲ್ಲವೋ ಅಲ್ಲಿಯವರೆಗೆ ನಿಮಗೆ ಯಾವ ಪ್ರಮಾಣದಲ್ಲಿ ಆದಾಯ ಬರಬೇಕೋ ಆ ಪ್ರಮಾಣದಲ್ಲಿ ಬರುವುದಿಲ್ಲ. ತಾವು ಹೇಳಬಹುದು, ಅಲ್ಲಿರತಕ್ಕ ನೈತಿಕ ಅಧಃಪತನವನ್ನು ಸ್ವಲ್ಪಮಟ್ಟಿಗೆ ಸರಿ ಮಾಡಿದರೆ ಅನುಕೂಲವಾಗಬಹುದು ಎಂದು. ನಾನಂತೂ ಆಶಾವಾದಿ. ಮಾನ್ಯ ಮಂತ್ರಿಗಳು ಇನ್ನೂ ಯುವಕರು ಅವರು ಆಸಕ್ತಿಯಿಂದ ಕೆಲಸ ಮಾಡಬಲ್ಲರು. ಅವರಿಗೆ ಸಿಕ್ಕಿರತಕ್ಕ ಈ ಸದವಕಾಶದಲ್ಲಿ ಹೆಚ್ಚಿಗೆ ಶ್ರಮವಹಿಸಿ ಕೆಲಸ ಮಾಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನ ಸಂಪತ್ತೇನಿದೆಯೆಂದು ತಮಗೆ ಗೊತ್ತಿದೆ. ಅಲ್ಲಿ ಶೇಕಡ ೬೬ರಷ್ಟು ಭಾಗ ಅರಣ್ಯವಿದೆ. ಭಾಷಾವಾರು ಪ್ರಾಂತ್ಯವಾಗುವುದಕ್ಕೆ ಮುಂಚೆ ಅಲ್ಲಿಂದ ಏನು ಆದಾಯ ಬರುತ್ತಿತ್ತೋ, ಈಗ ಅದು ಅರ್ಧವಾಗಿದೆ. ಅನೇಕ ಜನ ಮರಗಳನ್ನು ಕಡಿಸಿ ಕಳ್ಳದ್ದಲು ಮಾಡಿ ಮಾರಾಟ ಮಾಡುತ್ತಿದ್ದಾರೆ. ೧೯೬೦-೬೧ರವರೆಗೆ ಅಲ್ಲಿ ಕಾಡುಗಳಿಗೆ ವಿಪರೀತಿ ಹಾನಿಯುಂಟಾಗಿದೆಯೆಂಬದನ್ನು ನಾನೇ ಅನೇಕ ಸಾರಿ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಅಂದಮೇಲೆ ಎಷ್ಟು ಆಸಕ್ತಿಯಿಂದ ಆಡಳಿತ ಯಂತ್ರ ನಡೆಯುತ್ತಿದೆಯೆಂಬದನ್ನು ನೀವೇ ನೋಡಬಹುದು. ಅಧಿಕಾರಿಗಳ ಸಹಕಾರವಿಲ್ಲದೆ ಇಂಥ ಕೆಲಸಗಳು ನಡೆಯುವುದು ಸಾಧ್ಯವೇ ಇಲ್ಲ. ಗಂಧದ ಮರದ ಸಾಗಾಣಿಕೆ ಕೂಡ ಕಳ್ಳತನದಿಂದ ಆಗುತ್ತಿದೆ. ಲಕ್ಷಾಂತರ ರೂಪಾಯಿ ಇದರಿಂದ ನಮಗೆ ಹೋಗುತ್ತಿದೆಯೆಂದು ನಾನು ಈ ಸಂದರ್ಭದಲ್ಲ ತಿಳಿಸುತ್ತಿದ್ದೇನೆ.

ಆಮೇಲೆ ಅರಣ್ಯಕ್ಕೆ ಸಂಬಂಧಪಟ್ಟಂತೆ ಇರತಕ್ಕ ಕಾನೂನುಗಳ ಸಮನ್ವಯ ಇಷ್ಟು ದಿನಗಳಾದರೂ ಆಗದೆ ರೈತರಿಗೆ ಬಹಳತೊಂದರೆಯಾಗಿದೆ.

ಶ್ರೀ ಬಿ. ರಾಚಯ್ಯ.—ಈಗ ಅದು ಬರುತ್ತದೆ.

ಶ್ರೀ ಜಿ. ವೆಂಕಟೇಗೌಡ.—ಆದಷ್ಟು ಬೇಗನೆ ಇದನ್ನು ಮಾಡಬೇಕು. ಈಗ ೫-೬ ವರ್ಷಗಳಿಂದ ತೆರಿಗೆಯನ್ನು ತರತಕ್ಕ ಕಾನೂನುಗಳ ವಿಷಯದಲ್ಲಿ ಅವುಗಳನ್ನು ಸಮನ್ವಯ ಮಾಡುವುದರಲ್ಲಿ ಏನು ಆಸಕ್ತಿ

(ಶ್ರೀ ಜಿ. ವೆಂಕಟೇಗೌಡ)

ಯನ್ನು ಸರ್ಕಾರ ತೋರಿಸಿತೋ ಅಷ್ಟೇ ಅಸಕ್ತಿಯನ್ನು ರೈತರಿಗೆ, ಸಾರ್ವಜನಿಕರಿಗೆ ಅನುಕೂಲವಾಗುವಂಥವುಗಳನ್ನು ಸಮನ್ವಯ ಮಾಡುವುದಕ್ಕೆ ವಹಿಸಿಲ್ಲ. ಇದರಿಂದಾಗಿ ಎಷ್ಟು ರೈತರಿಗೆ ಕಷ್ಟವಾಗಿದೆಯೆಂಬುದನ್ನು ತಾವೇ ಯೋಚನೆ ಮಾಡಬೇಕು. ನಮ್ಮಲ್ಲಿ ಬೇಕಾದಷ್ಟು ಕಾಡಿದೆ. ಆದರೂ ತಮ್ಮ ಸ್ವಂತಕ್ಕೆ ಬೇಕಾದ ೧೦-೧೨ ರೂಪಾಯಿನ ಸೌದೆಗೂ ಬಹು ಕಷ್ಟಪಡಬೇಕಾಗಿದೆ. ಇದನ್ನ ತಪ್ಪಿಸಲು ಕಾನೂನುಗಳ ಸಮನ್ವಯ ಮಾಡಿ ರೈತರಿಗೆ ಅನುಕೂಲ ಮಾಡಬೇಕೆಂದು ಹೇಳುತ್ತೇವೆ. ರೈತರು ತಮ್ಮ ಜಮೀನಿನಲ್ಲಿ ಬೆಳೆದ ಮರಗಳನ್ನು ಮನೆಗೆ ತರುವುದೇ ಕಷ್ಟವಾಗಿದೆ. ಕೆಲವರಿಗೆ ರೇಂಜರು ಪಾಸು ಕೊಡಬೇಕೆನ್ನುತ್ತಾರೆ. ಇನ್ನು ಕೆಲವು ಕಡೆ ತಹಸೀಲ್‌ದಾರರು ಕೊಡಬೇಕೆನ್ನುತ್ತಾರೆ. ಖಚಿತವಾಗಿ ಏನು ಮಾಡಬೇಕೆಂಬುದು ಗೊತ್ತಾಗದಿದ್ದರೆ ರೈತರು ಏನು ಮಾಡಬೇಕು? ಇದು ತಮಗೇ ಗೊತ್ತಿದೆ. ನನ್ನ ಸ್ನೇಹಿತರಾದ ಶ್ರೀಮಾನ್ ಮಾದಯ್ಯ ಗೌಡರು ಸವಿಸ್ತಾರವಾಗಿ ಆ ವಿಚಾರವನ್ನು ಹೇಳಿದ್ದಾರೆ. ರೈತಜನರೇನೇ ಇವೊತ್ತು ಸರ್ಕಾರ ಮಾಡತಕ್ಕ ಕಾನೂನುಗಳಿಗೆ ಏನಾದರೂ ಮಾನ್ಯತೆ ಕೊಡುವವರು. ಸರ್ಕಾರದ ಕಾನೂನುಗಳಿಗೆ ಮಾನ್ಯತೆಯನ್ನು ಕೊಡತಕ್ಕವರು ಕೇವಲ ಕಡಮೆ. ರೈತರಿಗೆ ಸಾಕಷ್ಟು ಪರಿಹಾರವನ್ನು ಮಾಡಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಅನೇಕ ರೈತರಿಗೆ ಅದರಲ್ಲೂ ವ್ಯವಸಾಯ ಮಾಡಬೇಕು ಎನ್ನತಕ್ಕ ಜನರಿಗೆ ಬೇಕಾದಷ್ಟು ಭೂಮಿ ಸಿಕ್ಕುತ್ತಿಲ್ಲ. ನಮ್ಮ ಮೈಸೂರು ರಾಜ್ಯದಲ್ಲಿ ಎಷ್ಟು ಪ್ರದೇಶ ಕಾಡಿನೊಳಗೆ ಇರಬೇಕೋ ಅಷ್ಟು ಪ್ರದೇಶ ಇಲ್ಲ. ಕಾಡೇ ಇಲ್ಲದ ಹಳ್ಳಿಗಳು ಎಷ್ಟೋ ಇವೆ. ಅಂತಹ ಕಡೆಗಳಲ್ಲಿ ಅಫಾರೆಸ್ಟೇಷನ್ ಮಾಡಬೇಕು. ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಬೇಕಾದಷ್ಟು ಈ ಬಾಬಿಗೆ ಖರ್ಚು ಮಾಡಿದ್ದೇವೆ. ಅಷ್ಟು ದುಡ್ಡು ಖರ್ಚಾಗಿದ್ದರೂ ಯಾವ ಪ್ರಮಾಣದಲ್ಲಿ ನಮಗೆ ಪ್ರತಿಫಲ ಸಿಗಬೇಕಾಗಿತ್ತೋ ಆ ಪ್ರಮಾಣದಲ್ಲಿ ಪ್ರತಿಫಲ ಸಿಗಲಿಲ್ಲ. ಈಗ ಮೂರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಏನೇನು ಮಾಡಬೇಕೆಂಬುದನ್ನು ಸರಿಯಾಗಿ ಸರ್ಕಾರದವರು ಈ ವಿಷಯವಾಗಿ ಯೋಚನೆ ಮಾಡಲಿಲ್ಲವೆಂದು ಕಾಣುತ್ತದೆ. ಕೇವಲ ಎರಡು ಲಕ್ಷ ಎಕರೆ ಜಮೀನನ್ನು ಅಫಾರೆಸ್ಟೇಷನ್ ಮಾಡಬೇಕು ಎಂಬುದಾಗಿ ಸರ್ಕಾರದವರು ಇಟ್ಟಿದ್ದಾರೆ. ಅದು ಖಂಡಿತವಾಗಿ ಆಗಬೇಕು. ಆ ರೀತಿ ಮಾಡದೆ ಎಲ್ಲೋ ಸುಮ್ಮನೆ ಎರಡು ಮೂರು ಗಿಡಗಳನ್ನು ಹಾಕಿ ಅಫಾರೆಸ್ಟೇಷನ್ ಮಾಡಿದ್ದೇವೆಂದು ಹೇಳಿದರೆ ನಿಜವಾಗಿಯೂ ನಾವು ಈ ಬಾಬಿಗೆ ಖರ್ಚು ಮಾಡಿದಂತಹ ಹಣಕ್ಕೆ ಪ್ರತಿಫಲ ಸಿಕ್ಕುವುದಿಲ್ಲ. ಆದ್ದರಿಂದ ಆದಷ್ಟು ಮಟ್ಟಿಗೆ ಕೂಡಲೆ ಕಾಡನ್ನು ಬೆಳೆಸುವ ವಿಚಾರ ಸಂಪೂರ್ಣವಾಗಿ ಸಾಧನೆಯಾಗಬೇಕು ಎಂಬ ದೃಷ್ಟಿಯಿಂದ ರೈತರಿಗೆ ಅನೇಕ ವಿಷಯಗಳನ್ನು ಕಲಿಸಿ ಕೊಡಬೇಕು ಎಂಬುದಾಗಿ ನಾನು ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ. ಅದು ನನ್ನ ಅನುಭವದ ಮಾತಾಗಿದೆ. ಟಿಂಬರ್ ಮುಂತಾದ ಇತರ ಫಾರೆಸ್ಟ್ ಪ್ರಾಡಕ್ಟುಗಳನ್ನು ಹೊರಗಡೆಗೆ ಸಾಗಾಣಿಕೆ ಮಾಡುವ ನೀತಿನಿಯಮಗಳನ್ನು ನಾವು ಹಾಕಿಕೊಳ್ಳಬೇಕು. ನಮ್ಮಲ್ಲಿ ಅರಣ್ಯ ಬೇಕಾದಷ್ಟು ಇರಬಹುದು. ಯಾವ ತಾಲ್ಲೂಕಿನಲ್ಲಿ ಅರಣ್ಯ ಸಂಪತ್ತು ಇಲ್ಲವೋ ಆ ತಾಲ್ಲೂಕಿಗೆ ಅರಣ್ಯ ಸಂಪತ್ತನ್ನು ಬೆಳೆಸಲುತಕ್ಕ ಹಣ ಸಹಾಯವನ್ನು ಸರ್ಕಾರದವರು ಕೊಡುವುದು ಸೂಕ್ತವೆಂದು ನನಗನ್ನಿಸುತ್ತದೆ. ಈಗ ಈ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದೀರಿ. ಈಗಾಗಲೇ ಎಷ್ಟೋ ಸಣ್ಣಪುಟ್ಟ ಕೆಲಸ ಕಾರ್ಯಗಳನ್ನು ಅವರು ಮಾಡಬೇಕಾಗಿದೆ. ಈ ಕೆಲಸಗಳನ್ನೆಲ್ಲಾ ಆ ಸಂಸ್ಥೆ ನಿರ್ವಹಿಸುವುದಕ್ಕೆ ಸಾಕಷ್ಟು ಹಣವಿಲ್ಲದಿದ್ದರೆ ಅದು ಏನು ಮಾಡುವುದಕ್ಕೂ ಆಗುವುದಿಲ್ಲ. ಇನ್ನು ಮುಂದೆ ಒಂದೊಂದು ತಾಲ್ಲೂಕಿನಲ್ಲಿ ಮೂರು ನಾಲ್ಕು ಹೈಸ್ಕೂಲುಗಳು, ರಸ್ತೆಗಳ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆಗಳನ್ನು ಮಾಡಬೇಕಾದರೆ ಸಿಬ್ಬಂದಿ ಖರ್ಚು ಸರ್ಕಾರವೇ ಕೊಡಬೇಕು. ಆ ಖರ್ಚು ಒಂದು ತಾಲ್ಲೂಕ್ ಬೋರ್ಡಿಗೆ ಸುಮಾರು ಎರಡು ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಅವರು ಈಗ ಭೂಕಂದಾಯದ ಮೇಲೆ ಶೇಕಡ ೨೦ರಷ್ಟು ಹಣ ಕೊಡುತ್ತೇವೆಂದು ಒಪ್ಪಿರುವಾಗ ಈ ಅರಣ್ಯ ಸಂಪತ್ತಿಗೆ ಪ್ರತಿಯೊಂದು ತಾಲ್ಲೂಕು ಇನ್ನೂ ಹೆಚ್ಚಿಗೆ ಹಣ ಕೊಡಬೇಕು. ಅಂದಮೇಲೆ ಅವರು ಆಗ ಆದಾಯದ ಹತ್ತರಷ್ಟು ತಾಲ್ಲೂಕ್ ಬೋರ್ಡಿಗೆ ಕೊಡಬೇಕಾಗುತ್ತದೆ. ಈ ನನ್ನ ಸಲಹೆಯನ್ನು ಸರ್ಕಾರ ತೀವ್ರವಾಗಿ ಪರ್ಯಾಲೋಚನೆ ಮಾಡಿ ಈ ಮೈಸೂರು ಪಂಚಾಯತಿ ಲೋಕಲ್ ಬೋರ್ಡ್ ಕಾನೂನಿಗೆ ಒಂದು ತಿದ್ದುಪಡಿ ತಂದು ತಾಲ್ಲೂಕ್ ಬೋರ್ಡ್ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಉಪಕಾರ ಮಾಡಬೇಕೆಂದು ನಾನು ಹೇಳುತ್ತೇನೆ.

ಈಗ ನಮ್ಮ ದೇಶದಲ್ಲಿ ಅರಣ್ಯವೇನಿದೆ, ಅದನ್ನು ರೈತರಿಗೆ ವ್ಯವಸಾಯದ ಸಲುವಾಗಿ ಕೊಡುವ ವಿಚಾರದ ಬಗ್ಗೆ ಸರ್ಕಾರ ಒಂದು ನೀತಿಯನ್ನು ತಾಳಬೇಕು. ಈಗ ಅನೇಕ ಕಡೆ ಕಾಡುಗಳಿವೆ. ಈಗ ಇರತಕ್ಕ ಕಾಡುಗಳಿಂದ ಸಾಕಷ್ಟು ಆದಾಯ ಬರುತ್ತಿಲ್ಲ. ಆದ್ದರಿಂದ ಕಾಡಿನ ಸಂಪತ್ತನ್ನು ಹೆಚ್ಚು ಮಾಡುವುದಕ್ಕೆ ಕೆಲವು ಗ್ರಾಮಾಂತರ ಜನಗಳಿಗೆ ಶಕ್ತಿ ಇರಲಾರದು. ಜಮೀನು ಇಲ್ಲದಿರುವ ಜನಗಳಿಗೆ ಅಂತಹ ಕಾಡಿನ ಸಂಪತ್ತನ್ನು ಕೊಡುವುದರಿಂದ ಏನೇನೂ ಪ್ರಯೋಜನವಿಲ್ಲ. ಆ ರೀತಿ ಅಂತಹವರಿಗೆ ಕಾಡನ್ನು ಕೊಡುವುದರಿಂದ ಫಲ ಬಿಡತಕ್ಕ ಕಾಡುಗಳಿಗೆ ಧಕ್ಕೆ ತಂದಂತಾಗುತ್ತದೆ. ಕಾಡು ಸಮಮಟ್ಟವಾಗಿರಬೇಕು. ವ್ಯವಸಾಯಕ್ಕೆ ಯೋಗ್ಯವಾಗಿರಬೇಕು. ಜಮೀನುಗಳಲ್ಲಿ ವ್ಯವಸಾಯವಾಗುತ್ತಾ ಇರತಕ್ಕ ರುಜುವಾತು ಇರಬೇಕು. ಅಂತಹ ಪ್ರದೇಶವನ್ನು ಜಮೀನಿಗಾಗಿ ಮಾರ್ಪಡಿಸುವುದಕ್ಕೆ ಸರ್ಕಾರ ಕೊಡಬೇಕು. ಎಲ್ಲೆಲ್ಲಿ ಕಾಡಿನಿಂದ ಆದಾಯ ಬರುವುದಿಲ್ಲವೋ, ಕಾಡಾಗಿ ಬೆಳೆಸುವುದಕ್ಕೆ ಯೋಗ್ಯವಿಲ್ಲವೋ ಅಂತಹ ಪ್ರದೇಶವನ್ನು ಈ ರೀತಿ ಪರಿವರ್ತನೆ ಮಾಡಿದರೆ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆ, ರೈತರಿಗೂ ಪ್ರಯೋಜನವಾಗುತ್ತದೆ. ಆದಷ್ಟು ಜಾಗ್ರತೆಯಾಗಿ ಸರ್ಕಾರದವರು ಈ ಕೆಲಸವನ್ನ ಮಾಡಬೇಕು. ಅಫಾರೆಸ್ಟೇಷನ್ ಹೆಚ್ಚು ಹೆಚ್ಚಾಗಿ ನಡೆಯಬೇಕು. ಡಿ-ಫಾರೆಸ್ಟೇಷನ್ ಬದಲಾವಣೆ ಮಾಡಬೇಕು. ಯಾವಯಾವ ಭಾಗದಲ್ಲಿ ಸರ್ಕಾರಕ್ಕೆ ಯೋಗ್ಯವಾದ ಕಾಡುಗಳಿಲ್ಲ ಅಂತಹ ಕಾಡುಗಳೇನಾದರೂ ವ್ಯವಸಾಯಕ್ಕೆ ಯೋಗ್ಯವಾಗಿದ್ದರೆ ಅವನ್ನು ಕೂಡಲೆ ರಿಲೀಜ್ ಮಾಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇದರಿಂದ ಭೂಮಿ ಇಲ್ಲದೆ ಅನೇಕ ಜನರಿಗೆ ಹೆಚ್ಚಿಗೆ ಅನುಕೂಲ ಮಾಡಿಕೊಡಬಹುದು. ಈಗಾಗಲೇ ಅನೇಕ ಮಾನ್ಯಸದಸ್ಯರು ಶ್ರೀಮಾನ್ ಮಂಜಪ್ಪನವರು ಹೇಳಿದ್ದನ್ನು ಕೇಳಿದ್ದಾರೆ. ಈ ಕಾನೂನನ್ನು ಜಾರಿಗೆ ಕೊಡುವಾಗ ಒಂದು ಎಕರೆ ಜಮೀನು ಕೂಡ ಸಿಕ್ಕುವುದಿಲ್ಲ. ಆ ರೀತಿ ಪರಿವರ್ತನೆ

ಯಾಗುತ್ತದೆ. ಭೂಮಿ ಇಲ್ಲದೇ ಇರುವ ರೈತರಿಗೆ ಜಮೀನನ್ನು ಕೊಡುವುದರಿಂದ ಸರ್ಕಾರಕ್ಕೆ ಅಷ್ಟಾಗಿ ಆದಾಯ ಬರುವುದಿಲ್ಲ. ಪ್ರಜೆಗಳ ಕಷ್ಟವನ್ನು ಸಹ ದೂರ ಮಾಡುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಇದರಲ್ಲಿ ನೀತಿಯೇನಿದೆ ಅದನ್ನು ಅನುಸರಿಸಬೇಕು. ಆ ನೀತಿಯನ್ನು ಬಿಟ್ಟು ಭೂಮಿ ಇಲ್ಲದವರಿಗೆ ಕಾಡನ್ನು ಕೊಡಬೇಕು ಎನ್ನುವ ನೀತಿಯನ್ನು ನಾನು ಒಪ್ಪುವುದಿಲ್ಲ. ಯಾವ ಭಾಗದಲ್ಲಿರತಕ್ಕ ಕಾಡು ಸರ್ಕಾರಕ್ಕೆ ಆದಾಯ ಕೊಡುವುದಿಲ್ಲವೋ, ವ್ಯವಸಾಯಕ್ಕೆ ಯೋಗ್ಯವಾಗಿದೆಯೋ ಅಂತಹ ಪ್ರದೇಶವನ್ನು ರೈತರಿಗೆ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಆದಷ್ಟು ಮಟ್ಟಿಗೆ ಕಾಡಿನ ಉತ್ಪನ್ನ ಜಾಸ್ತಿಮಾಡುವ ರೀತಿಯಲ್ಲಿ ಮಾಡಬೇಕು. ಮತ್ತು ಖರ್ಚನ್ನು ಸಹ ಕಡಮೆ ಮಾಡುವ ಹಾಗೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ಗದಗ್ (ಗದಗ್).—ಸಭಾಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಮುಂದಿರುವ ಈ ಡಿಮ್ಯಾಂಡುಗಳಲ್ಲಿ ನಾನು ಡಿಮ್ಯಾಂಡ್ ನಂಬರ್ 5 ಸೇಲ್ಸ್ ಟ್ಯಾಕ್ಸ್ ಬಗ್ಗೆ ಕೆಲವು ಸೂಚನಾ ಸಲಹೆಗಳನ್ನು ಮಾಡ ಬಯಸುತ್ತೇನೆ. ನಮ್ಮ ಪ್ರಾಂತದ ಆದಾಯಗಳಲ್ಲಿ ಸೇಲ್ಸ್ ಟ್ಯಾಕ್ಸ್ ನಿಂದ ಬರುವಷ್ಟು ಆದಾಯಕ್ಕಿಂತ ಇನ್ನಾವ ಹೆಚ್ಚು ಆದಾಯವಿಲ್ಲ. ಈಗ ಸೇಲ್ಸ್ ಟ್ಯಾಕ್ಸ್ ಆದಾಯದ ಅಂದಾಜು 9½ ಕೋಟಿ ಅಥವಾ ಹತ್ತು ಕೋಟಿ ಎಂದು ನಾನು ತಿಳಿಯುತ್ತೇನೆ. ಆದರೆ ಪ್ರತಿಯೊಂದು ಪ್ರಾಂತ್ಯದ ವ್ಯವಹಾರೋದ್ಯಮ ಕ್ಷೇತ್ರವನ್ನು ಗಣನೆಗೆ ತೆಗೆದುಕೊಂಡರೆ ಈ ಆದಾಯ ಕಡಮೆಯಾಗಿಯೇ ಇದೆಯೆಂದು ನಾನು ಹೇಳಬಹುದು. ಇದು ಹೆಚ್ಚಾಗಬೇಕು ಎಂಬ ಬಗ್ಗೆ ಅಭ್ಯಂತರ ಯಾವುದೂ ಇಲ್ಲ. ಆದರೆ ಕಡಮೆ ಇರುವ ಈ ಆದಾಯಕ್ಕೆ ಏನಾದರೂ ಖಾತೆಯಲ್ಲಿ ಕೆಲವು ಲೋಪದೋಷಗಳು ಇರಬೇಕೆಂದು ಹೇಳುವುದು ಸ್ಪಷ್ಟವಾಗಿದೆ. ಆದರೆ ಅಂತಹ ಲೋಪದೋಷಗಳು ಯಾವುವು, ಅವುಗಳನ್ನೆಲ್ಲಾ ಸರಿಮಾಡಲಿಕ್ಕೆ ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ನಾವು ಮುಖ್ಯವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮತ್ತು ಅದಕ್ಕೆ ಬೇಕಾದ ಸಲಹಾ ಸೂಚನೆಗಳನ್ನೂ ಸಹ ಹೇಳುವುದು ಇನ್ನೂ ಹೆಚ್ಚು ಅತ್ಯವಶ್ಯವಿದೆ. ಮುಖ್ಯವಾಗಿ ನನಗೆ ತಿಳಿದಮಟ್ಟಿಗೆ ಈ ಖಾತೆಯ ಆದಾಯವೇನಿದೆ, ಅದು ಹಿಂದೆ ಎಷ್ಟು ಸುವ್ಯವಸ್ಥಿತವಾಗಿತ್ತೋ ಅಷ್ಟು ಸರಿಯಾಗಿ ಆಗಿಲ್ಲ, ಎನ್ನುವುದೇ ಮೊದಲನೆಯ ಕಾರಣ. ಈ ಖಾತೆಯಲ್ಲಿರತಕ್ಕ ಲೋಪದೋಷಗಳನ್ನು ತಡೆಯುವುದಕ್ಕೆ ಬೇಕಾಗಿರತಕ್ಕ ಕ್ರಮಗಳನ್ನೂ ಸಹ ಸರಿಯಾಗಿ ತೆಗೆದುಕೊಳ್ಳಲಿಲ್ಲ, ಎನ್ನುವುದು ಎರಡನೇ ಕಾರಣ. ಇನ್ನು 3ನೆಯ ಕಾರಣ ಈ ಆಕ್ಟಿಗೆ ಸಂಬಂಧಪಟ್ಟ ಹಾಗೆ ಅವರ ಕಾನೂನುಗಳಲ್ಲಿ ಕೆಲವು ಶಬ್ದಗಳನ್ನು ಉಪಯೋಗಿಸಿರುವ ರೀತಿ ನೀತಿಯೇ ಬೇರೆಯಾಗಿ ಅದರಲ್ಲಿ ಅನೇಕ ಲೋಪದೋಷಗಳಿವೆ ಎನ್ನುವುದು—ಹೀಗೆಯೇ ಇತರ ಕಾರಣಗಳು ಇನ್ನೂ ಅನೇಕವಿರಬಹುದು. ಅವನ್ನೆಲ್ಲಾ ನಾವು ಪೂರ್ಣವಾಗಿ ಮತ್ತು ಸವಿಸ್ತಾರವಾಗಿ ಹೇಳಲಿಕ್ಕೆ ಅಷ್ಟೊಂದು ಅವಕಾಶವಿಲ್ಲದೇ ಇರುವುದರಿಂದ ಮುಖ್ಯವಾಗಿ ಇವತ್ತಿನ ದಿವಸ ಈ ಮೂರು ವಿಷಯಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ಹೇಳಬಯಸುತ್ತೇನೆ. ಈಗ ಆಡಳಿತದ ಬಗ್ಗೆ ಹೇಳಬೇಕಾದರೆ, ಈ ಇಲಾಖೆಯಲ್ಲಿ ತರಪೇತು ಹೊಂದಿದಂಥ ಅಧಿಕಾರಿಗಳು ಬಹಳ ಕಡಮೆ ಇದ್ದಾರೆ. ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್ ಆಫೀಸರು ಯಾರೇ ಆಗಲಿ ಅವರು ಚೆನ್ನಾಗಿ ತರಪೇತು ಹೊಂದಿದವರಾಗಿರಬೇಕು. ಆಕ್ಟಿನ ಪ್ರಕಾರ ಅವರು ಏನೇನು ಕೆಲಸಗಳನ್ನು ಮಾಡಬೇಕೆಂದು ನಿರ್ಧರವಾಗಿದೆಯೋ ಆ ಕೆಲಸಗಳನ್ನು ಅವರು ನಿಷ್ಠೆಯಿಂದ ಮಾಡತಕ್ಕವರಾಗಿರಬೇಕು. ಮತ್ತು ದಕ್ಷತೆಯಿಂದ ಕೆಲಸ ಮಾಡತಕ್ಕವರಾಗಿರಬೇಕು. ಅಂತಹ ಅಧಿಕಾರಿಗಳನ್ನು ಈ ಇಲಾಖೆಯಲ್ಲಿ ನೇಮಿಸದೆ ಇದ್ದಲ್ಲಿ ತುಂಬಾ ಸರ್ಕಾರಕ್ಕೆ ನಷ್ಟವಾಗುತ್ತದೆ ಮತ್ತು ಯಾವ ಒಂದು ಪ್ರಯೋಜನವೂ ಆಗಲಿಕ್ಕಿಲ್ಲ.

4 P.M.

ಈ ಸೇಲ್ಸ್ ಟ್ಯಾಕ್ಸಿನ ಸಂಬಂಧ ನನಗೆ ಸ್ವಲ್ಪ ಹೆಚ್ಚಿಗೆ ಇರುವುದರಿಂದ ಆ ವಿಷಯದಲ್ಲಿ ನನಗೆ ಸ್ವಲ್ಪ ಅನುಭವ ಇದೆ. ಆದ್ದರಿಂದ ಆ ವಿಷಯದಲ್ಲಿ ಒಂದೆರಡು ಉದಾಹರಣೆಗಳನ್ನು ನಾನು ಹೇಳ ಬಯಸುತ್ತೇನೆ. ನಾನು ಈಗ ಒಂದೆರಡು ವರ್ಷಗಳಿಂದಲೂ ಈ ಸೇಲ್ಸ್ ಟ್ಯಾಕ್ಸ್ ವಿಷಯವನ್ನು ಮಾತನಾಡುವಾಗ ಬಿಲ್‌ಕಲೆಕ್ಟರುಗಳು ಅವಶ್ಯ ಇಲ್ಲ, ಇವರುಗಳಿಂದ ದುರುಪಯೋಗವಾಗುತ್ತಿದೆ, ಎನ್ನುವುದನ್ನು ಹೇಳಿದ್ದೇನೆ. ಈ ವಿಷಯವನ್ನು ಸರ್ಕಾರದವರು ಸಹ ಒಪ್ಪಿಕೊಂಡಿದ್ದರು. ಆದರೆ ಬಿಲ್‌ಕಲೆಕ್ಟರುಗಳು ಇನ್ನೂ ಇದ್ದಾರೆ. ಈ ಬಿಲ್ ಕಲೆಕ್ಟರುಗಳ ಅವಶ್ಯವಿಲ್ಲ ಎಂದು ನಾನು ಹೇಳಬಯಸುತ್ತೇನೆ. ಸಾಮಾನ್ಯವಾಗಿ ನಗರಗಳಲ್ಲಿ ಕೆಲವಾರು ಬಗೆಯ ಬಿಲ್‌ಕಲೆಕ್ಟರುಗಳಿರುತ್ತಾರೆ. ಇವರು ವರ್ತಕರ ಹತ್ತಿರ ಸೇಲ್ಸ್ ಟ್ಯಾಕ್ಸ್ ಇತ್ಯಾದಿ ಟ್ಯಾಕ್ಸ್‌ಗಳನ್ನು ವಸೂಲುಮಾಡುವಾಗ ಅವರಿಗೆ ಹೆರಾಸ್ ಮಾಡುವ ಕೆಲಸ ಮಾಡುತ್ತಿದ್ದಾರೆ ಎನ್ನುವಂಥಾ ವಿಷಯವನ್ನು ನಾನು ಆಗ್ರಹದಿಂದ ಸರ್ಕಾರದವರಿಗೆ ಹೇಳಬಯಸುತ್ತೇನೆ.

ಇನ್ನೊಂದು ಸಂಗತಿಯನ್ನು ನಾನು ಈಗ ಹೇಳಬಯಸುತ್ತೇನೆ. ಇತ್ತೀಚೆಗೆ ರೆವಿನ್ಯೂ ಇಲಾಖೆಯಲ್ಲಿ ಸೇಲ್ಸ್ ಟ್ಯಾಕ್ಸಿಗೆ ಸಂಧಪಟ್ಟ ಪೇಮೆಂಟ್‌ಗಳು ಸರಿಯಾಗಿ ಆಗುತ್ತಿಲ್ಲ. ಬಹಳ ತಡ ಮಾಡಿ ರೆವಿನ್ಯೂ ಖಾತೆಯ ತಹಸೀಲ್ದಾರರು ಆ ಕಲೆಕ್ಷನ್‌ಗೋಸ್ಕರವಾಗಿ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳನ್ನು ಕಳುಹಿಸುತ್ತಾರೆ. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ನಮ್ಮ ಭಾಗದಲ್ಲಿ ಒಬ್ಬ ವ್ಯಾಪಾರಸ್ಥರ ಹತ್ತಿರ ಒಬ್ಬ ಸೇಲ್ಸ್ ಟ್ಯಾಕ್ಸ್ ಇಲಾಖೆಯ ಬಿಲ್‌ಕಲೆಕ್ಟರು ಒಂದು ಸೇಲ್ಸ್ ಟ್ಯಾಕ್ಸ್ ಬಿಲ್ಲನ್ನು ತೆಗೆದುಕೊಂಡು ಬಂದು ಅವರನ್ನು ಸೇಲ್ಸ್ ಟ್ಯಾಕ್ಸ್ ಕೊಡಬೇಕೆಂದು ಕೇಳಿದನು. ಅದಕ್ಕೆ ಆ ವ್ಯಾಪಾರಸ್ಥರು ನಾನು ಕೊಡಬೇಕಾದ ಸೇಲ್ಸ್ ಟ್ಯಾಕ್ಸ್ ಎಲ್ಲವನ್ನೂ ಕೊಟ್ಟಿದ್ದೇನೆ. ಬೇರೆಯಾವುದೂ ಇಲ್ಲ. ಈ ಬಗ್ಗೆ ಸೇಲ್ಸ್ ಟ್ಯಾಕ್ಸ್ ಪ್ರಾಕ್ಟೀಷನರಿಂದ ನನಗೆ ಒಂದು ಪತ್ರ ಕೂಡ ಬಂದಿದೆ ಎಂದು ಅವರು ಆ ಪತ್ರವನ್ನು ಆ ಬಿಲ್‌ಕಲೆಕ್ಟರಿಗೆ, ತೋರಿಸಿದರು. ಆ ಪತ್ರದ ವಿಷಯ ನನಗೆ ಗೊತ್ತಿಲ್ಲ ನೀವು ಸೇಲ್ಸ್ ಟ್ಯಾಕ್ ಕೊಡಲೇಬೇಕು. ಇವೊತ್ತು ನೀವು ಸೇಲ್ಸ್ ಟ್ಯಾಕ್ಸ್ ಕೊಡದಿದ್ದರೆ ನಿಮ್ಮ ಅಂಗಡಿಯನ್ನು ಜಪ್ತಿಮಾಡುತ್ತೇನೆ ಎಂದು ಹೇಳಿದನು. ಅವರ ಅಂಗಡಿಯ ಪಕ್ಕದಲ್ಲಿದ್ದವರೆಲ್ಲರೂ ನಾವು ಜಾಮೀನಾಗುತ್ತೇವೆ, ಜಪ್ತಿಮಾಡುವುದು ಬೇಡಿ ಎಂದು ಹೇಳಿದರು. ಆದರೂ ಸಹ ಆ ಬಿಲ್‌ಕಲೆಕ್ಟರು ಆ ವ್ಯಾಪಾರಸ್ಥರ ಅಂಗಡಿಯನ್ನು ಜಪ್ತಿಮಾಡಿಕೊಂಡು ಸಾಮಾನುಗಳನ್ನು ಸೇಲ್ಸ್ ಟ್ಯಾಕ್ಸ್ ಆಫೀಸಿನ ಹತ್ತಿರ ತೆಗೆದುಕೊಂಡು ಹೋದರು. ಆಮೇಲೆ ಸಾಮಾನುಗಳನ್ನು ಆ ವರ್ತಕರಿಗೆ ಕೊಟ್ಟರೋ ಇಲ್ಲವೋ ಗೊತ್ತಿಲ್ಲ. ಈ ರೀತಿ ವರ್ತಕರಿಗೆ ಅವ

(ಶ್ರೀ ಕೆ. ಪಿ. ಗದಗ್)

ಮರ್ಯಾದೆ ಮಾಡುವುದು ಒಳ್ಳೆಯದಲ್ಲ. ಇಂತಹ ಕೆಲವು ಲೋಪದೋಷಗಳು ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಇವೆ. ಅವುಗಳನ್ನು ಸರ್ಕಾರದವರು ತಪ್ಪಿಸಬೇಕು. ಸೇಲ್ಸ್ ಟ್ಯಾಕ್ಸ್ ವಸೂಲುಮಾಡುವುದರಲ್ಲಿ ನನ್ನದು ಯಾವ ಅಭ್ಯಂತರವೂ ಇಲ್ಲ. ಆದರೆ ಜನಗಳಲ್ಲಿ ಒಂದು ಪ್ರೀತಿವಿಶ್ವಾಸವನ್ನು ಇಟ್ಟುಕೊಂಡು ಸೇಲ್ಸ್ ಟ್ಯಾಕ್ಸ್‌ಅನ್ನು ವಸೂಲು ಮಾಡಬೇಕಾಗುತ್ತದೆ. ಜನತೆಯ ಪ್ರತಿನಿಧಿಗಳು ಸರ್ಕಾರಕ್ಕೆ ಏನು ಅಭಿಪ್ರಾಯವನ್ನು ಕೊಟ್ಟಿರುತ್ತಾರೆಯೋ ಅದನ್ನು ಅಧಿಕಾರಿಗಳು ಗಮನಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು. ಇಂಥಾ ಕ್ರಮಗಳನ್ನು ತೆಗೆದುಕೊಂಡದ್ದು ಅನೇಕ ಸಾರಿ ಆಗಿದೆ. ಅದಕ್ಕೋಸ್ಕರವಾಗಿ ನಾನು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಮತ್ತೊಂದು ಸಂಗತಿ ಏನೆಂದರೆ ಒಬ್ಬ-ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಆಫಿಸರು ಅವರ ಮೇಲಿನ ಆಫಿಸರ ಹತ್ತಿರ ರಜಾ ಹೋಗುವುದಕ್ಕೆ ಕೇಳಿಕೊಂಡರು. ಆದಕ್ಕೆ ಅವರು ಈಗ ಆಫೀಸಿನಲ್ಲಿ ಯಾರೂ ಇಲ್ಲ, ಆದ್ದರಿಂದ ಇನ್ನು 8-10 ದಿವಸಗಳು ರಜಾ ಹೋಗುವುದು ಬೇಡಿ ಎಂದು ಹೇಳಿದರು. ಆಗ ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಆಫಿಸರು ಯಾರಿಗೂ ಏನನ್ನೂ ತಿಳಿಸದೆ ಹೋದರು. ಆ ಮೇಲೆ ಅವರ ಮೇಲ್ಪಟ್ಟ ಅಧಿಕಾರಿಗಳು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮಾಡಿದರು. ಆದರೆ ಆಫಿಸರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದಂತೆ ತಡೆಮಾಡಿದರು. ಇಂಥಾದ್ದು ಕೆಲವು ಆಗುತ್ತಿವೆ. ಆಡಳಿತದಲ್ಲಿ ಒಂದು ನಿಯಮ ಬೇಕು. ಒಂದು ಶಿಸ್ತು ಬೇಕು. ಮೇಲ್ಪಟ್ಟ ಅಧಿಕಾರಿಗಳು ಮಾಡಿದ್ದನ್ನು ವಿಚಾರ ಮಾಡಿ ಅದನ್ನು ಖಾಯಂ ಮಾಡಿ ಅದನ್ನು ಸರಿಪಡಿಸದಿದ್ದರೆ ಮೇಲ್ಪಟ್ಟ ಅಧಿಕಾರಿಗಳು ತಮ್ಮ ಅಧಿಕಾರವನ್ನು ಬಜಾಯಿಸುವುದಕ್ಕೆ ಬಲವಿಲ್ಲದಂತಾಗುತ್ತದೆ. ಇಂಥಾದ್ದು ಆಗದಂತೆ ನೋಡಿಕೊಳ್ಳಬೇಕು. ಆದ್ದರಿಂದ ಇದನ್ನು ಹೆಚ್ಚು ಜವಾಬ್ದಾರಿಯಿಂದ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಸೇಲ್ಸ್ ಟ್ಯಾಕ್ಸ್ ಇವೇಷನ್ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳಬಯಸುತ್ತೇನೆ. ವ್ಯಾಪಾರಸ್ಥರು ಸಾಮಾನ್ಯವಾಗಿ ಡಬಲ್ ಸೆಟ್ಸ್ ಅಕೌಂಟ್ಸ್ ಇಟ್ಟುಕೊಂಡಿರುತ್ತಾರೆ. ಈ ವಿಷಯ ಸಾಧಾರಣವಾಗಿ ಸೇಲ್ಸ್ ಟ್ಯಾಕ್ಸ್ ಇಲಾಖೆಯವರಿಗೂ ಗೊತ್ತಿವೆ. ಮತ್ತೆ ಎಲ್ಲರಿಗೂ ಗೊತ್ತಿದೆ. ಯಾವ ಸಂದರ್ಭದಲ್ಲಿ ಯಾವ ರೀತಿ ಲೆಕ್ಕ ಬರೆಯಬೇಕೆಂಬುದು ವ್ಯಾಪಾರಗಾರರಿಗೆ ಹೆಚ್ಚು ಅನುಭವ ಇದೆ. ಇಲಾಖೆಯವರಿಗೂ ಹೆಚ್ಚು ಗೊತ್ತಿದೆ. ಡಬ್ಬಲ್ ಅಕೌಂಟ್ಸ್ ಇಡುವುದನ್ನು ಕಂಡು ಹಿಡಿಯಬೇಕಾದರೆ ಒಂದು ಇಂಟಲಿಜೆಂಟ್ ಬ್ರಾಂಚ್ ಓಪನ್ ಮಾಡಿ, ಅಧಿಕಾರಿಗಳು ಹೋಗಿ ಒಬ್ಬರ ಅಕೌಂಟನ್ನು ಮತ್ತೊಬ್ಬರು ವೆರಿಫೈ ಮಾಡುವಂತಿರಬೇಕು. ಇಲ್ಲವೆ ಬೇರೆಯಾವುದಾದರೂ ಪ್ರಯತ್ನ ಮಾಡಿ ಇಂಟಲಿಜೆಂಟ್ ಬ್ರಾಂಚಿನವರು ವ್ಯಾಪಾರಗಾರರ ಜೊತೆಯಲ್ಲಿ ಬೆರೆತು ಈ ಡಬ್ಬಲ್ ಅಕೌಂಟ್ ಇಡುವುದನ್ನು ವೆರಿಫೈ ಮಾಡಿ ಕಂಡು ಹಿಡಿಯುವಂಥಾ ಒಂದು ಉಪಾಯವನ್ನು ಹುಡಿಕಿದರೆ ಆಗ ಡಬ್ಬಲ್ ಅಕೌಂಟ್ ಇಡುವವರನ್ನು ಹಿಡಿಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಮಾಡತಕ್ಕದ್ದು ಅವಶ್ಯ ಇದೆ.

ಇನ್ನು ಆಯಿಲ್ ಇಂಡಸ್ಟ್ರೀಸ್ ಬೇಬಿ ಎಕ್ಸ್‌ಪೆಲರ್ಸ್ ಎಂದು ಇವೆ. ಇದರಿಂದ ಮತ್ತು ಸೇಂಗಾದಿಂದ ಸಣ್ಣ ಪ್ರಮಾಣದಲ್ಲಿ ಎಣ್ಣೆ ತೆಗೆಯುತ್ತಾರೆ. ಇದರ ಮೇಲಿನ ತೆರಿಗೆ ಹೋಗುತ್ತಿದೆ ಮತ್ತು ಹಳ್ಳಿಯೊಳಗೆ ಸೇಂಗಾ ಮುಂತಾದುವುಗಳನ್ನು ಖರೀದಿ ಮಾಡುತ್ತಾರೆ. ವ್ಯಾಪಾರಗಾರರು ಅದನ್ನು ಲೆಕ್ಕ ಬರೆಯುವುದಿಲ್ಲ. ಅದರ ಮೇಲಿನ ಸೇಲ್ಸ್ ಟ್ಯಾಕ್ಸ್ ಹೋಗುತ್ತದೆ. ಇವುಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಮತ್ತು ಇವುಗಳ ಬಗ್ಗೆ ಹೆಚ್ಚು ನಿಗಾ ಇಟ್ಟು ಈ ವ್ಯವಹಾರಗಳು ಆಗದಂತೆ ನೋಡಿಕೊಳ್ಳಬೇಕು.

ಆಮೇಲೆ ಚೆಕ್ ಪೋಸ್ಟ್‌ಗಳ ಬಗ್ಗೆ ಹೋದ ಸಲ ಹೇಳಿದ್ದೇನೆ. ಚೆಕಿಂಗ್ ಇನ್‌ಸ್ಪೆಕ್ಟರುಗಳನ್ನು ನೇಮಕ ಮಾಡುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೋದ ಸಲ ಆಶ್ವಾಸನೆಯನ್ನು ಕೊಟ್ಟಿದ್ದರು. ಇತ್ತೀಚೆಗೆ ಅದರ ಬಗ್ಗೆ ವ್ಯವಹಾರಗಳು ಕೂಡ ನಡೆದಿದೆ. ಆದ್ದರಿಂದ ಚೆಕಿಂಗ್ ಇನ್‌ಸ್ಪೆಕ್ಟರುಗಳನ್ನು ನೇಮಕ ಮಾಡುವ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಚೆಕಿಂಗ್ ಇನ್‌ಸ್ಪೆಕ್ಟರುಗಳು ತಮ್ಮ ಜವಾಬ್ದಾರಿಯನ್ನು ಅರಿತು ಸರಿಯಾಗಿ ಕೆಲಸ ಮಾಡಿದರೆ ಎಲ್ಲವೂ ಸರಿಯಾಗುತ್ತದೆ.

ಇನ್ನು ಚೆಕ್‌ಸ್ಟೇಷನ್, ಎಷ್ಟೋವೇಳೆ ಯಾವ ಪ್ರಕಾರ ನಡೆದಿವೆ ಈ ಟ್ರಾನ್ಸ್‌ಪೋರ್ಟ್ ಅನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳ ಬಯಸುತ್ತೇನೆ ಕನ್‌ಸೈನಾರ್, ಕನ್‌ಸೈನಿಗೆ ಮಾಲು ಕಳುಹಿಸುವಾಗ ಸೆಲ್ಫ್ ಎಂದು ಹೇಳಿ ಕಳುಹಿಸಿರುತ್ತಾನೆ. ಎಲ್ಲೆಲ್ಲೋ ಹೋಗುತ್ತದೆ ಏನೇನೋ ಮಾರಾಟವಾಗುತ್ತದೆ. ಚೆಕ್‌ಸ್ಟೇಷನ್ ಇದ್ದರೆ ಈ ಟ್ಯಾಕ್ಸ್ ಇವೇಷನ್ ಏನು ಆಗುತ್ತದೆ. ಅದನ್ನು ತಡಗಟ್ಟಲಿಕ್ಕೆ ಅನುಕೂಲವಾಗುತ್ತದೆ. ಕೇರಳದಲ್ಲಿ ಈ ಪ್ರಕಾರಮಾಡಿದ್ದಾರೆ. ಅಲ್ಲಿ ಯಾವ ಪ್ರಕಾರ ಮಾಡಿದ್ದಾರೆ ಎಂಬುದನ್ನು ತಿಳಿದುಕೊಂಡು ಆ ತರಹದ ಕ್ರಮವನ್ನು ನಾವೂ ಕೂಡ ಅನುಸರಿಸಬೇಕು. ಅಲ್ಲಿ ಯಶಸ್ವಿಯಾಗಿದ್ದಾರೆ ನಾವೂ ಅದನ್ನು ಇಲ್ಲಿ ರೂಢಿಯಲ್ಲಿ ತರಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಷಯವನ್ನು ಹೇಳುವುದಾದರೆ ಈ ಆಕ್ಟ್‌ನ spirit ಮತ್ತು ಜಾರಿಗೆ ಕೊಡುವ ಕ್ರಮ ಸರಿಯಾಗಿಲ್ಲ. ಇಂಥವು ಕೆಲವು ಇವೆ. ಒಂದು ರೀತಿಯಲ್ಲಿ ಡಬ್ಬಲ್ ಟ್ಯಾಕ್ಸ್ ಆಗುವಂಥದ್ದು ಇದೆ ಮತ್ತು ಒಂದು ರೀತಿಯಲ್ಲಿ ಟ್ಯಾಕ್ಸ್ ಬೀಳತಕ್ಕದ್ದು ಬೀಳದಂತಹದೂ ಇದೆ, ಇದನ್ನು ಪರಿಶೀಲನೆ ಮಾಡಬೇಕು. ಇಷ್ಟು ಅವಧಿಯಾದರೂ ಇದನ್ನು ಪರಿಶೀಲನೆ ಮಾಡದೇ ಇದು ಹೀಗೆಯೇ ಉಳಿದಿದ್ದು ಸರಿಯಲ್ಲ. ಒಂದೆರಡು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಎಕ್ಸಂಪ್ಷನ್ ಲಿಸ್ಟ್‌ನೊಳಗೆ fire wood ಎಂದು ಇದೆ. Domestic use ಗೆ ಆದರೆ exempt ಆಗಬೇಕು exempt ಆಗುವುದಿಲ್ಲ, ಅಷ್ಟೇ ಅಲ್ಲ ಎರಡು ಮೂರು ಸಾರಿ ಸಹ ಟ್ಯಾಕ್ಸ್ ಬೀಳುವ ಪರಿಸ್ಥಿತಿ ಇದೆ ಎಂದು ಹೇಳುತ್ತೇನೆ. ಈಗ ಹುಬ್ಬಳ್ಳಿ ಅಥವಾ ಧಾರವಾಡದ ಕಡೆಯವರು ಲೊಂಡಾ, ಅಳ್ನಾವರ ಇಂಥಾ ಕಡೆಯಿಂದ fire wood ಖರೀದಿ ಮಾಡುತ್ತಾರೆ. ಅಲ್ಲಿ ಕೊಡುವವರು ಟ್ಯಾಕ್ಸ್ ಹಾಕುತ್ತಾರೆ. ಹೋಲ್ ಸೇಲ್ ಡೀಲರ್ 50 ವ್ಯಾಗನ್ ತರಿಸುತ್ತಾನೆ, ರೀಟೇಲ್ ಡೀಲರ್‌ಗೆ ಕೊಡುತ್ತಾನೆ. ಅವನು ಮುಂದೆ ಯಾರಿಗೆ ಕೊಡುತ್ತಾನೆ? ಡೊಮೆಸ್ಟಿಕ್ ಉಪಯೋಗಕ್ಕೆ ಖರೀದಿಮಾಡುವವರಿಗೆ ಕೊಡುತ್ತಾನೆ.

ಹೀಗೆ ಪ್ರತಿ ಸಾರಿ ಒಂದೆರಡು transaction ಆದಾಗಲೂ ಕೂಡ ಎಕ್ಸ್‌ಂಪ್ಷನ್ ಇದ್ದರೂ ಸಹಿತ ಎರಡು ಮೂರು ಸಾರಿ ಟ್ಯಾಕ್ಸ್ ಬೀಳುತ್ತದೆ. ಅದಕ್ಕೆ ಒಂದು ಸೂಚನೆ ಮಾಡಿದ್ದೆ; ಅದು ಸರಿ ಹೋಗಲಿಲ್ಲ. ಈಗ ನಾನು ಹೇಳುವುದೇನೆಂದರೆ ಒಮ್ಮೆ ಬಿದ್ದರೆ ಬೀಳಲಿ ಅಳ್ಳಾವರ, ಲೊಂಡಾದಲ್ಲಿ ಬಿದ್ದ ಮೇಲೆ ಎರಡನೇ ಸಾರಿ ಬೀಳದಂತೆ ಮಾಡಿದರೆ ಸಾಕು. ಅಷ್ಟಾದರೂ ಸಹಿತ ಮಾಡಬೇಕು. ಬಹಳ ದಿವಸದಿಂದ ಹೇಳುತ್ತಾ ಇದ್ದೇನೆ fire wood ಬಡ ಜನರಿಗೆ ಉಪಯೋಗವಾಗುವ ಪದಾರ್ಥ. ಎರಡು ಮೂರು ಸಾರಿ ಟ್ಯಾಕ್ಸ್ ಬೀಳುವುದು ಸರಿಯಲ್ಲ, ಇದು ಎಕ್ಸೆಂಪ್ಷನ್ ಲಿಸ್ಟ್‌ನಲ್ಲಿ ಇರುವುದಕ್ಕಿಂತ ಟ್ಯಾಕ್ಸ್ ಲಿಸ್ಟ್‌ನಲ್ಲೇ ಹಾಕಿ ಒಂದೇ ಸಾರಿ ಕೊಟ್ಟು, ಎರಡು ಮೂರು ಸಾರಿ ಟ್ಯಾಕ್ಸ್ ಬೀಳದಂತೆ ಮಾಡಬೇಕೆಂದು ಬಹಳ ವಿನಯದಿಂದ ಆಗ್ರಹದಿಂದ ಕೇಳಿಕೊಳ್ಳುತ್ತೇನೆ.

ಮತ್ತೊಂದು ಎಂದರೆ ಟಿಂಬರು. ಇದಕ್ಕೆ first dealer ನಿಂದ collect ಮಾಡಬೇಕೆಂದು ಇದೆ. ಇದರಲ್ಲಿ ಒಂದು ವಿಚಿತ್ರ ಬಂದಿದೆ. ಏಕೆಂದರೆ first dealer ಒಮ್ಮೊಮ್ಮೆ ಸರ್ಕಾರದವರು ಆಗುತ್ತಾರೆ. ಆಗ ಸರ್ಕಾರದವರು first dealer ಆದ್ದರಿಂದ ಕೊಡುವುದಿಲ್ಲ ಎಂದು ಹೇಳುತ್ತಾರೆ. ಅದು ಹೇಗೆ ಆಗುತ್ತದೆ? ಇವರ spirit ನೋಡಿದರೆ ಅವರೂ ಕೂಡ ಟ್ಯಾಕ್ಸ್ ಕೊಡಲೇಬೇಕು. ಎರಡನೇ ಷೆಡ್ಯೂಲ್‌ನೊಳಗೆ ಇದೇ ಪ್ರಕಾರದ ಇನ್ನು ಕೆಲವು goods ಇವೆ. ಇವೆಲ್ಲವೂ ಸರಿಯಾಗಬೇಕು. ಟ್ಯಾಕ್ಸ್ ಹೆಚ್ಚಾಗಿ ಬರಬೇಕು. ಹೆಚ್ಚಾಗಿ ಬರಬೇಕಾದರೆ ಜನತೆಯೊಡನೆ ಹೆಚ್ಚು ವಿಶ್ವಾಸದಿಂದ ನಡೆದುಕೊಂಡು ಅವರಿಗೆ ಚೆನ್ನಾಗಿ ಮನವರಿಕೆ ಮಾಡಬೇಕು. ಇಷ್ಟು ಹೇಳಿ ನನ್ನ ನಾಲ್ಕಾರು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ಅರಣ್ಯ ಖಾತೆಗೆ 397 ಲಕ್ಷದ 70 ಸಾವಿರ ರೂಪಾಯಿ, ತೆರಿಗೆಗಳಿಗೆ 33 ಲಕ್ಷದ 28 ಸಾವಿರ ರೂಪಾಯಿ ಇತರ ಬಾಬುಗಳಿಗೆ 3 ಲಕ್ಷದ 48 ಸಾವಿರ ರೂಪಾಯಿಗಳು ಈ ರೀತಿ 1962-63ನೇ ಸಾಲಿಗೆ ಖರ್ಚುಮಾಡಬೇಕು, ಅದಕ್ಕೆ ಈ ಸಭೆ ತನ್ನ ಅನುಮತಿ ಕೊಡಬೇಕೆಂದು ಸರ್ಕಾರದವರು ಈ ಮೂರು ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಸ್ವಾಮಿ, ಸರ್ಕಾರದವರಿಗೆ ನಿಜವಾಗಿಯೂ ಕೂಡ ಈ ದೇಶದ ಅಭ್ಯುದಯ, ಅಭಿವೃದ್ಧಿ, ಮಂಗಳ, ಕಲ್ಯಾಣವಾಗಬೇಕೆಂದು ಅವರ ಮನಸ್ಸಿನಲ್ಲಿ ಇದ್ದಿದ್ದರೆ ಹಣಕಾಸಿನ ವಿಚಾರ ವಿಮರ್ಶೆಮಾಡುವಾಗ ಒಬ್ಬಿಬ್ಬರು ಬಂದು, ಒಬ್ಬಿಬ್ಬರು ಕುಳಿತು, ನಿದ್ದೆಮಾಡಲು ಈ ಸಭೆಗೆ ಬರುತ್ತಾ ಇರಲಿಲ್ಲ. ದೇಶದ ಅಭ್ಯುದಯವನ್ನು ನಿರ್ಲಕ್ಷಿಸಿ ಸ್ವೇಚ್ಛೆಯಿಂದ ವ್ಯವಹಾರ ಮಾಡುತ್ತಿದ್ದಾರೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡರೆ ದೇಶಕ್ಕೆ ಕಲ್ಯಾಣವಾಗುವುದು ಇಲ್ಲದೇ ಇದ್ದರೂ, ದುರ್ದೈವ, ದುರ್ಗತಿಗೆ ಬರುತ್ತದೆ ಎಂದು ಹೇಳುತ್ತೇನೆ.

ಸ್ವಾಮಿ, ಹೀಗೆ ಏಕೆ ಹೇಳುತ್ತೇನೆಂದರೆ, ದೇಶದಲ್ಲಿ ನಡೆಯುತ್ತಿರುವ ಯೋಜನೆಗಳ ವಿಚಾರದಲ್ಲಿ ಸದಸ್ಯರು ಏನು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಮಂತ್ರಿಗಳಿಗೆ ಅವಕಾಶವಿಲ್ಲ, ಇಷ್ಟವಿಲ್ಲ ಎಂದರೆ ಏನರ್ಥ! ಅನೇಕ ಜನ ಸ್ನೇಹಿತರು ಅರಣ್ಯ ಸಂಪತ್ತು-ವನಶ್ರೀ ಕಡಮೆಯಾಯಿತು, ರೈತನ ಬಾಳು ಬರಡಾಯಿತು, ರೈತ ಅನ್ನವನ್ನು ಬೆಳೆಯುವುದಿಲ್ಲ, ಅನ್ನಕ್ಕೆ ಬೇರೆ ಕಡೆ ಕೈ ಒಡ್ಡಬೇಕಾಯಿತು ಎಂದು ಹೇಳುತ್ತಿದ್ದಾರೆ. ಮೊದಲನೆಯ ಮತ್ತು ಎರಡನೆಯ ಯೋಜನೆಗಳಲ್ಲಿ ಮಾಡಿದುದೇನು? ಎಷ್ಟು ಸಾವಿರ ಎಕರೆಗಳಲ್ಲಿ ಅರಣ್ಯವನ್ನು ಬೆಳಸಿದರು? ಎಷ್ಟು ಎಕರೆಗಳಲ್ಲಿ ಮರಗಳು ಬೆಳೆದು ನಿಂತಿವೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಅರಣ್ಯವನ್ನು ಬೆಳೆಸುತ್ತಿದ್ದೇವೆ, ಅದಕ್ಕಾಗಿ ಇಷ್ಟು ಹಣ ಬೇಕು ಇದರಿಂದ ಅರಣ್ಯ ಸಂಪತ್ತು ಜಾಸ್ತಿಯಾಗುತ್ತದೆ, ರಾಷ್ಟ್ರದ ವರಮಾನ, ಪ್ರಕೃತಿ ಸಂಪತ್ತು ಜಾಸ್ತಿಯಾಗಲು ಇದು ಸಾಧಕವಾಗುತ್ತದೆ ಎಂದು ಬರಿಯ ಬಡಾಯಿಯ ಮಾತನ್ನು ಸರ್ಕಾರ ಏಕೆ ಆಡುತ್ತದೆ? ಅರಣ್ಯ ಸಂಪತ್ತನ್ನು ಕಾಪಾಡುತ್ತೇವೆಂದು ಒಬ್ಬರು ಮಂತ್ರಿಗಳು ಹೇಳಿದುದನ್ನು ಇದೇ ಸಭೆಯಲ್ಲಿ ಕೇಳಿದ್ದೇವೆ. ದಾಂಡೇಲಿಯಲ್ಲಿ ದೊಡ್ಡಣ್ಣನವರ ಕಂಪೆನಿಗೆ ಕೊಟ್ಟ ದರವನ್ನು ನೋಡಿದರೆ, ಮೂಗು ಮುಟ್ಟಬೇಕಾಗಿದೆ, ಈಗ ಅದನ್ನು ಬಗೆ ಹರಿಸುವುದಕ್ಕೆ ಒಂದು ಸರ್ಕಾರವನ್ನು ಕಿತ್ತು ಹಾಕಿ ಇನ್ನೊಂದನ್ನು ಪ್ರತಿಷ್ಠೆ ಮಾಡುತ್ತೇವೆಂದು ಹೇಳಿದ ಸರ್ಕಾರ ಆ ಸರ್ಕಾರದಲ್ಲಿದ್ದ ಮಂತ್ರಿಮಾಡಿದ ದುರ್ವ್ಯವಹಾರವನ್ನು ಈಹೊತ್ತು ವ್ಯವಸಾಯ ಮತ್ತು ಅರಣ್ಯ ಶಾಖೆಯ ಸೆಕ್ರೆಟರಿಯನ್ನು ನೇಮಕಮಾಡಿ ವಿಚಾರಮಾಡಬೇಕೆಂದು ಹೇಳಿದ ಪ್ರಮುಖ ಮಂತ್ರಿಗಳು ಈರೀತಿ ಮಾಡಬಾರದು...

Mr. DEPUTY SPEAKER.—The Hon'ble Member should not refer to the names of individuals.

Sri C. J. MUCKANNAPPA.—This question was brought before this House and discussed. I am not making any accusations.

ಇಂಥ ಸಂದರ್ಭದಲ್ಲಿ ಕೈಕೊಂಡ ಕಾರ್ಯ ಕ್ರಮವೇನೆಂದು ಕೇಳುತ್ತೇನೆ. ರಾಷ್ಟ್ರ ಸಂಪತ್ತನ್ನು, ಭೂ ಸಂಪತ್ತನ್ನು, ಅರಣ್ಯ ಸಂಪತ್ತನ್ನು ಹೆಚ್ಚಿಸುತ್ತೇವೆಂದು ಹೇಳುತ್ತಾರೆ. ದೇಶದಲ್ಲಿ ಮೂರನೆಯ ಒಂದು ಭಾಗದಷ್ಟು ಅರಣ್ಯವಿರಬೇಕೆಂದಿದೆ, ಆದರೆ ಶ್ರೀಮಾನ್ ಮಾದಯ್ಯ ಗೌಡರು ಹೇಳಿದ ಹಾಗೆ ಕೇವಲ ಶೇಕಡ ಹದಿನೈದರಷ್ಟಿದೆ. ಹೀಗಿರುವಾಗ ಶೇಕಡ 33⅓ರಷ್ಟು ಬರ ಬೇಕಾದರೆ ಎಷ್ಟು ಕಾಲ ಬೇಕು, ಎಷ್ಟು ಹಣ ಬೇಕು ಎಂದು ಕೇಳುತ್ತೇನೆ. ತಮಗೆ ಬೇಕಾದ ಜನರಿಗೆ ಕೊಟ್ಟು ಕಾಡನ್ನು ಹಾಳುಮಾಡಿ, ಅರಣ್ಯ ಸಂಪತ್ತನ್ನು ಬೇರೆಯವರಿಗೆ ಧಾರೆಯೆರೆದಿದ್ದಾರೆ! ಈಗ ಅದನ್ನು ಕಾಪಾಡುವುದಕ್ಕಾಗಿ ನಾಲ್ಕು ಕೋಟಿ ರೂಪಾಯಿ ಕೊಡಿ ಎಂದು ಕೇಳುವುದಕ್ಕೆ ಇವರಿಗೇನು ಅಧಿಕಾರವಿದೆ? ಇದಕ್ಕೆ ಕೊಡಲು ನಮ್ಮಿಂದ ಸಾಧ್ಯವೆ ಎಂದು ಕೇಳುತ್ತೇನೆ. ಲಕ್ಷಾಂತರ ರೂಪಾಯಿ ಬಾಳುವ ಗಂಧದ ಮರ ಕಳ್ಳ ಸಾಗಾಣಿಕೆಯಾಗುತ್ತಿದೆ; ಇದನ್ನು ತಡೆಯಲು ಏನು ಕ್ರಮ ಕೈಕೊಂಡಿದ್ದಾರೆ? ಬಳ್ಳಾರಿಯ ಸಂಡೂರು ಒಂದು ಜಾಗದಲ್ಲಿ ಲಕ್ಷಾಂತರ ರೂಪಾಯಿನ ಗಂಧದ ಮರವನ್ನು ಕಡಿದು ಒಬ್ಬ ಮನುಷ್ಯ, ಅದು ತನ್ನ ಆಸ್ತಿ ಎಂದು ಹೇಳಿ ಸರ್ಕಾರವನ್ನು ಎದುರಿಸುತ್ತಿದ್ದಾರೆ. ಸಂಡೂರಿನ ಮಾಜಿ ದೊರೆ ಲಕ್ಷಾಂತರ ರೂಪಾಯಿ ಬಾಳುವ ಗಂಧದ ಮರವನ್ನು ಕಡಿದು ಸಾಗಿಸುತ್ತಿದ್ದಾರೆ. ಹೀಗಿರುವಾಗ ಈ ಸರ್ಕಾರ, ಈ ಗಾಂಧಾರಿಯ ಪುತ್ರರು ನಾವು ಕಡಿದು ಕಟ್ಟಿ ಹಾಕುತ್ತೇವೆ ಎಂದು ಹೇಳುವುದಕ್ಕೆ ಇವರಿಗೇನು ಅಧಿಕಾರ?

(SRI C. J. MUCKANNAPPA)

I will sit in Sandur and rule Delhi ಎಂದು ಆತ ಹೇಳುತ್ತಿದ್ದಾರೆ. ಸ್ವಾಮಿ, ಒಬ್ಬ ಮನುಷ್ಯ ಅರಣ್ಯ ಸಂಪತ್ತನ್ನು ದೋಚುತ್ತಿದ್ದರೂ ಅದನ್ನು ಕಣ್ಣಾರೆ ನೋಡಿಕೊಂಡು ಈ ಹೊತ್ತು ನಾಲ್ಕು ಕೋಟಿ ರೂಪಾಯಿ ಕೇಳುವುದು ತಲೆ ತಗ್ಗಿಸುವ ವಿಚಾರ. ಸಂಡೂರಿನ ಮಾಜಿ ದೊರೆ ಮಾಡುತ್ತಿರುವುದು ದುರ್ವ್ಯವಹಾರಕ್ಕೆ ಏನುಮಾಡುತ್ತಿದೆ ಸರ್ಕಾರ? ಅವರ ಮೇಲೆ ಏನು ಕ್ರಮ ಕೈಗೊಂಡಿದ್ದಾರೆ? ಏನೂ ಮಾಡಿಲ್ಲ. ಆದರೆ ಬಡವರು ಈಚಲು ವನಗಳಿಂದ ತರೆಹೊರೆ ಸೌದೆಯನ್ನು ತರುವವರ ಮೇಲೆ ಕ್ರಮ ತೆಗೆದು ಕೊಳ್ಳುತ್ತಾರೆ! ಇದಕ್ಕೇನು ಹೇಳಬೇಕು? ದೇಶದ ಅರಣ್ಯ ಸಂಪತ್ತನ್ನು ದೋಚಿ ಪೋಲು ಮಾಡುತ್ತಿದ್ದರೆ ಈ ವಿಧಾನ ಸೌಧದಲ್ಲಿ ಮೆತ್ತನೆಯ ಕುರ್ಚಿಯಲ್ಲಿ ಕುಳಿತು ಅಧಿಕಾರಿಗಳನ್ನಿಟ್ಟುಕೊಂಡು ಅರಣ್ಯಯ ಬೆಳೆಯುತ್ತೇವೆಂದು ಹೇಳುತ್ತಾರೆ. ಇವರ ಕೈಲ್ಲಿ ದತ್ತೂರಿ ಗಿಡಗಳನ್ನು ಬೆಳೆಸುವುದಕ್ಕೂ ಆಗುವುದಿಲ್ಲ. ವನ ಮಹೋತ್ಸವ ಮಾಡುತ್ತಾರೆ! ಮರಗಳನ್ನು ಕಡಿದು ತುಂಡುಮಾಡಿ ಅಡಿಗೆ ಮಾಡುವುದಕ್ಕೆ ಉಡುಪಿಯವರಿಗೆ ಕೊಡುವುದಕ್ಕೆ, ಭದ್ರಾವತಿಗೆ ಸೌದೆ ಕೊಡುವುದಕ್ಕೆ ವನ ಮಹೋತ್ಸವ ಮಾಡುತ್ತಾರೆ! ಅರಣ್ಯ ಸಂಪತ್ತನ್ನು ಬೆಳೆಸಬೇಕು, ದೇಶದ ಸಂಪತ್ತನ್ನು ಬೆಳಸಬೇಕು ಎಂದಿದ್ದರೆ ಹೀಗೆ ಮಾಡುತ್ತಿರಲಿಲ್ಲ. ರಾಮು ಕಾಡಿನಿಂದ ಬರುವಾಗ ಅವರ ಜೊತೆಯಲ್ಲೇ ಬಂದವರ ಕೈಲಿ ಅರಣ್ಯ ಖಾತೆ ಇದೆ. ನಿಜವಾಗಿಯೂ ರಾಮನಾದರೆ ಅರಣ್ಯ ಸಂಪತ್ತನ್ನು ರಕ್ಷಣೆ ಮಾಡಲಿ, ಇಲ್ಲದಿದ್ದರೆ ಬಿಡಲಿ. ಭರತನಂತೂ ಗಂಟೆ ಕಟ್ಟಿಕೊಂಡು ಹೋಗಿದ್ದಾರೆ. ಸಣ್ಣ ಪುಟ್ಟ ಜನರ ಮೇಲೆ ಅಧಿಕಾರಿಗಳ ಅಂಕುಶವಿರಬೇಕು. ರೇಂಜ್ ಆಫೀಸರು, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು, ಕನ್ಸರ್ವೇಟರುಗಳ ಕಚೇರಿಗಳಲ್ಲಿ ಏನು ನಡೆಯುತ್ತಿದೆಂಬುದನ್ನು ನೋಡಬೇಕು. ಎಲ್ಲಿ ರಸ್ತೆಗಳು ಚೆನ್ನಾಗಿರುತ್ತವೆ, ಎಲ್ಲಿ ಇಳಿದು ಕೊಳ್ಳುವುದಕ್ಕೆ ಚೆನ್ನಾಗಿರುತ್ತದೆ, ಅಂಥ ಕಡೆ ಓಡಾಡುತ್ತಿದ್ದಾರೆ. ಇದನ್ನು ಬಿಟ್ಟು ಎಲ್ಲಿ ಕಳ್ಳತನ ನಡೆಯುತ್ತದೆ, ಎಲ್ಲಿ ಅರಣ್ಯ ಸಂಪತ್ತು ಪೋಲಾಗುತ್ತಿದೆ ಅಲ್ಲಿ ಹೋಗಿ ತಡೆಗಟ್ಟುವುದಿಲ್ಲ. ಇವರಿಗೇನಾದರೂ ದೇಶಾಭಿಮಾನವಿದೆಯೆ? ಬಡವರ ಮೇಲೆ, ವರ್ಷಕ್ಕೆ ಐದಾರು ಫಲ್ಲ ರಾಗಿ ಬೆಳೆದು ಕೊಂಡು ಜೀವನ ಮಾಡುವವರ ಮೇಲೆ ಈ ಇಲಾಖೆಯ ಅಧಿಕಾರಿಗಳು ಕೇಸು ಹಾಕುವುದು. ಈ ಅಧಿಕಾರಿಗಳಿಗೆ ನೂರಾರು ರೂಪಾಯಿ ಸಂಬಳ ಕೊಡಬೇಕು, ತಣ್ಣಗೆ ಗಾಳಿ ಬಿಸಿಲು, ಫ್ಯಾನ್ ಹಾಕಬೇಕು, ರಿವಾಲ್ವಿಂಗ್ ಕುರ್ಚಿ ಹಾಕಬೇಕು. ಇಂಥ ನೀತಿಯನ್ನನುಸರಿಸಬಾರದು. ಹೀಗಾದರೆ ಇನ್ನು ಇಪ್ಪತ್ತು ವರ್ಷವಾದರೂ ರಾಜ್ಯದಲ್ಲಿ ಏನೂ ಪ್ರಗತಿಯಾಗುವುದಿಲ್ಲ. ಇವರೇ ಆಡಳಿತದಲ್ಲಿ ಮುಂದುವರಿದರೆ, ಶ್ರೀಮತಿ ನಾಗರತ್ನಮ್ಮನವರು ಹೇಳಿದ ಹಾಗೆ ಕೋತಿಯ ಕತೆಯಾಗುತ್ತದೆ. ಮಗು ಹೋದರೂ ಚಿಂತೆಯಿಲ್ಲವೆಂದು ತಾಯಿ ಅದನ್ನು ಕೆಳಗೆ ಹಾಕುವ ಹಾಗಾಗುತ್ತದೆ. ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಮಹಾರಾಷ್ಟ್ರದ ಗಡಿ ವಿಚಾರ ಚರ್ಚಿಸಲು ಹೋಗುತ್ತಾರೆ, ಪದೇ ಪದೇ ಡೆಲ್ಲಿಗೆ ಹೋಗುತ್ತಾರೆ, ಆದರೆ ನಮ್ಮ ರಾಜ್ಯದ ಅರಣ್ಯ ಸಂಪತ್ತು ಎಷ್ಟು ಬೆಳೆದಿದೆ ಎಂಬ ಬಗ್ಗೆ ಗಮನ ಕೊಡುವುದಿಲ್ಲ. ಈ ವಿಚಾರದಲ್ಲಿ ಅಂಕಿ ಅಂಶಗಳನ್ನು ಕೊಟ್ಟಿದ್ದರೆ, ಸರ್ಕಾರದೊಡನೆ ಸಹಕರಿಸಲು ನಾವು ಸಿದ್ಧವಾಗಿರುತ್ತಿದ್ದೆವು. ಈಚೀಚೆಗೆ ಮ್ಯಾಜಿಸ್ಟ್ರೇಟರು, ಡೆಪ್ಯುಟಿ ಕಮಿಷನರು, ಪೋಲೀಸ್ ಸೂಪರಿಂಟೆಂಡೆಂಟ್ ಇಂಥವರ ಮನೆಯಲ್ಲೇ ದೊಡ್ಡ ಊರುಗಳಲ್ಲಿ ಕಳ್ಳತನಗಳು ನಡೆಯುತ್ತಿವೆ. ಹೀಗೆ ಊರಿನಲ್ಲಿ ನಡೆಯುವ ಕಳ್ಳತನವನ್ನೇ ಕಂಡು ಹಿಡಿಯದೇ ಹೋದರೆ ಸಾವಿರಾರು ಮೈಲಿ ವಿಸ್ತೀರ್ಣವಿರುವ ಅರಣ್ಯದಲ್ಲಿ, ಅದರಲ್ಲಿಯೂ ಮೂರು ನಾಲ್ಕು ಜನ ಗಾರ್ಡುಗಳಿದ್ದಾರೆ, ಹಿಡಿಯಲು ಸಾಧ್ಯವೆ? ಗಾರ್ಡುಗಳು ರೇಂಜರುಗಳಾದರೂ ಜಾಸ್ತಿಯಾಗಬೇಕೆಂದು ನನಗೆ ಕಾಣುತ್ತದೆ.

ಮರ, ಗಿಡ ಯಾವುದೂ ಇರುವುದಿಲ್ಲ, ಅಂಥ ಪ್ರದೇಶವನ್ನು ಅರಣ್ಯವೆನ್ನುತ್ತಾರೆ ಎಂದು ಮಾನ್ಯ ಮಿತ್ರರ್ಯಾರೋ ಹೇಳಿದರು. ಈಚಲ ಮರವೇ ಇರದಿರುವ ಪ್ರದೇಶವನ್ನು ಸೇಂದೀ ವನ ಎಂದು ರಿಜಿಸ್ಟರಿನಲ್ಲಿ ನಮೂದಿಸಿರುತ್ತಾರೆ. ಇದಕ್ಕಿಂತಲೂ ಅವಹೇಳನವಾದುದು ಬೇರೆ ಯಾವುದೂ ಇಲ್ಲ. ನೂರಾರು ಎಕರೆ ಈಚಲು ಮರಗಳೇ ಇಲ್ಲದಿರುವ ಪ್ರದೇಶ ಸೇಂದಿವನವೆಂದು ಲೆಕ್ಕದಲ್ಲಿ ಬರೆಯಲ್ಪಟ್ಟಿದೆ. ಕೆಲವು ಕಡೆ ಅಮೃತಮಹಲ್ ಕಾವಲು, ಸ್ಟೇಟ್ ಫಾರೆಸ್ಟ್ ಎಂಬುವು ಇವೆ. ತಂಗಡಿ ಗಿಡಗಳಿರುವ ಪ್ರದೇಶ ಸಹ ಕಾಡು ಎಂದು ಕರೆಯಲ್ಪಡುತ್ತಿದೆ. ನಮ್ಮ ಕಣ್ಣಿಗೆ ಮಣ್ಣೆರಚುವುದಕ್ಕೆ ಕುರಚಲುಗಿಡವಿರುವ ಪ್ರದೇಶವನ್ನೆಲ್ಲಾ ಲೆಕ್ಕಕ್ಕೆ ಸೇರಿಸಿಕೊಂಡು ಕಾಡು ಇಷ್ಟಿದೆ ಎಂದು ಹೇಳುವುದು ಸರಿಯಲ್ಲ. ಎಲ್ಲಿ ಸಾಕಷ್ಟು ಮರಗಳಿಲ್ಲ, ಯಾವ ಭೂಮಿಯಲ್ಲಿ ಯಾವ ಗಿಡ ಬೆಳೆಯಬಹುದು ಎಂಬುದನ್ನು ಸರಿಯಾಗಿ ನೋಡಿ ಲಕ್ಷ್ಯವಿಟ್ಟು ಚೆನ್ನಾಗಿ ಅರಣ್ಯವನ್ನು ಬೆಳೆಸುವವರೆಗೆ ಸಂಸ್ಥಾನಕ್ಕೆ ಸರಿಯಾದ ಆದಾಯ ಬರುವುದಿಲ್ಲ. ಇದಕ್ಕೆ ಗಮನ ಕೊಡಬೇಕಾದ್ದು ಅಗತ್ಯ.

4-30 P.M.

ಆಮೇಲೆ ಬಿದುರು ಬೊಂಬು ಒಂದು ಟನ್ನಿಗೆ ಒಂದು ರೂಪಾಯಿ ರಾಯಲ್ಟಿ ಹಾಕುವುದು ಸರಿಯೆ? ಒಂದು ಲಾರಿ ತುಂಬಿಕೊಂಡು ಹೋಗುವುದಕ್ಕೆ ಒಂದು ರೂಪಾಯಿ ತೆಗೆದುಕೊಳ್ಳುವುದು ಸರಿಯೇ? ಭದ್ರಾವತಿ ಕಾಗದದ ಕಾರ್ಖಾನೆಗೆ ಸರಬರಾಯಿ ಕೊಡುವುದು, ಕಂಡೀಷನ್ಸ್‌ಗೆ ವಿರುದ್ಧವಾಗಿ ನಡೆದಿರುವುದನ್ನು ಲಕ್ಷಮಾಡದೆ ಶ್ರೀಮಂತರನ್ನು ಶ್ರೀಮಂತರನ್ನಾಗಿ ಮಾಡಿ ಬಡತನ ದೇಶದಲ್ಲಿ ಜಾಸ್ತಿ ಮಾಡಲು ಪ್ರಯತ್ನ ನಡೆಯುತ್ತಿದೆ. ಆದುದರಿಂದ ಈ ಕಡೆ ಸ್ವಲ್ಪ ಗಮನ ಕೊಡಬೇಕು. ಸಣ್ಣ ಪುಟ್ಟ ನೌಕರರನ್ನು ಬೇರೆ ಬೇರೆ ಕಡೆಗಳಿಗೆ ವರ್ಗ ಮಾಡುವುದಕ್ಕಲ್ಲ 1-2 ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವವರಿರುವುದು. ಎಲ್ಲಿ ಯಾವ ಗಿಡಗಳನ್ನು ಎಷ್ಟು ಬೆಳೆಸಬೇಕು, ಹೇಗೆ ಅರಣ್ಯ ಸಂಪತ್ತನ್ನು ವೃದ್ಧಿಮಾಡಬೇಕು ಎಂಬುದಕ್ಕೆ ಲಕ್ಷ್ಯ ಕೊಡದಿರುವವರಿಗೆ ಜನರು ಬೆವರು ಸುರಿಸಿ ಸಂಪಾದಿಸಿರುವ ಹಣವನ್ನು ಸಂಬಳವಾಗಿ ಕೊಡಬಹುದೇ? ದೇಶದ ಪ್ರಜೆಗಳ ಹಿತಕ್ಕಾಗಿ ನೇಮಿಸಲ್ಪಡುವವರು ಮಾಡುವಷ್ಟು ಅನ್ಯಾಯ ಇನ್ನಾರೂ ಮಾಡುತ್ತಿಲ್ಲ. ಈಗಲಾದರೂ ಗಮನ ಕೊಟ್ಟು ಲೋಪದೋಷಗಳನ್ನು ದೂರಮಾಡಿ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಪ್ರಯತ್ನ ಪಡಬೇಕೆಂದು ಸರ್ಕಾರಕ್ಕೆ ಸೂಚಿಸುತ್ತಿದ್ದೇನೆ.

ಇನ್ನು ಮಾರಾಟ ತೆರಿಗೆ, ಇದೊಂದು ದೊಡ್ಡ ಆದಾಯ. ಇದರಿಂದ ಬರುವ ಆದಾಯ, ಇದಕ್ಕಾಗಿ ಇಟ್ಟಿರುವ ಸಿಬ್ಬಂದಿ ಇದೆಲ್ಲಾ ನೋಡಿ ಮಾನ್ಯ ಸ್ನೇಹಿತರಾದ ಗದಗ್‌ರವರು ಇದೊಂದು ದೊಡ್ಡ ನಾಟಕ ಎಂದು ಹೇಳಿದರು. 125 ಜನ ಸೇಲ್ಸ್

ಟ್ಯಾಕ್ಸ್ ಇನ್ಸ್‌ಪೆಕ್ಟರುಗಳನ್ನು ನೇಮಕಮಾಡಿದಿರಿ ಏಕೆ? ಅವರು ಮಾರ್ಕೆಟ್ಟಿನಲ್ಲಿ ತಿರುಗಿ ತೆರಿಗೆ ಸರಿಯಾಗಿ ವಸೂಲು ಮಾಡಬೇಡವೆ? ಮೊನ್ನೆ ತಾನೆ ಹಣಕಾಸಿನ ಮಂತ್ರಿಗಳು ಲೀಕೇಜೆಲ್ಲಾ ಪ್ಲಗ್ ಮಾಡುತ್ತೇವೆಂದು ಹೇಳಿದರು. ಸೀಸ ಹಾಕುತ್ತಾರೋ ಅಥವಾ ಹತ್ತಿ ಬಟ್ಟೆ ತುರುಕುತ್ತಾರೋ ತಿಳಿಯದು. ಅವರು ಹಾಜರಿಲ್ಲ, ಇದ್ದಿದ್ದರೆ ಯಾವುದೋ ಒಂದು ಕಾಲದಲ್ಲಿ ಹತ್ತಿ ವ್ಯಾಪಾರ ಮಾಡುತ್ತಿದ್ದಾಗ ಅವರು ಹೇಗೆ ಮಾಡುತ್ತಿದ್ದರೆಂದು ಕೇಳುತ್ತಿದ್ದೆ. ದೇಶದ ಹಣವನ್ನು ಬಹಳ ಬುದ್ಧಿವಂತಿಕೆಯಿಂದ ವಸೂಲು ಮಾಡಬೇಕೆಂದು ಶ್ರೀ ಮರಿಯಪ್ಪನವರು ಹೇಳುತ್ತಿದ್ದರು. ದೇಶಕ್ಕೆ ಹಣಬೇಕೆಂದು ಹೇಳುವಾಗ ಸರಿಯಾಗಿ ಕೆಲಸ ಮಾಡಬೇಕು. ಮಾರಾಟ ತೆರಿಗೆ ಇಲಾಖೆಯಲ್ಲಿ ಲಂಚಕೋರರನ್ನು ಸಂಖ್ಯೆಯಲ್ಲಿ ಲಂಚ ನಿರೋಧ ಇಲಾಖೆ ಹಿಡಿದಿದೆ, ಕೋರ್ಟು ಕಛೇರಿಗಳಲ್ಲಿ ಡಿಸ್‌ಮಿಸ್ ಆಗಿರುವವರೆಷ್ಟು, ಅವರಿಗಿರಿರುವ ಆಸ್ತಿಯೆಷ್ಟು ಎಂಬುದನ್ನೇನಾದರೂ ನೋಡಿದ್ದೀರಾ? ಎಲ್ಲೋ ಎರಡು ಬೆಂಕಿಪಟ್ಟಿಗೆ, ಮೂರು ಕಟ್ಟು ಎಲೆ ಇಟ್ಟುಕೊಂಡಿರುವ ಸಣ್ಣ ವ್ಯಾಪಾರಗಾರರ ಮೇಲೆ ಮಾರಾಟ ತೆರಿಗೆ ವಿಧಿಸುತ್ತಾರೇ ವಿನಾ ಲಕ್ಷಾಂತರ ರೂಪಾಯಿಗಳ ವ್ಯಾಪಾರ ಮಾಡುವವರ ಮೇಲೆ ವಿಧಿಸುವುದಿಲ್ಲ. ಬೀದಿಗಳಲ್ಲಿ ಕುಳಿತು ವ್ಯಾಪಾರ ಮಾಡುವವರು, ಪೆಟ್ರೋಲ್ ಬಂಕ್ ವಗೈರೆ ಇಟ್ಟುಕೊಂಡಿರುವುದು ಮಾತ್ರ ಕಣ್ಣಿಗೆ ಬೀಳುತ್ತಾರೆಂದು ಕಾಣುತ್ತದೆ. ತೆರಿಗೆ ಯಾರು ಯಾರು ಕೊಡಬೇಕೋ ಅವರೆಲ್ಲರಿಂದಲೂ ವಸೂಲು ಮಾಡಬೇಕು, ಶ್ರೀಮಂತರಿಂದ ಒಂದು ಕಾಸೂ ಬಿಡಬಾರದು. ಬಡವರ ಕಣ್ಣಲ್ಲಿ ರಕ್ತ ಬರುವಂತೆ ಮಾಡಿ ಸರ್ಕಾರದ ಬೊಕ್ಕಸ ತುಂಬುತ್ತಿರುವಾಗ ಸರ್ಕಾರಕ್ಕೆ ಬರಬೇಕಾದ್ದರಲ್ಲಿ ಒಂದು ಕಾಸೂ ಬಿಡಬಾರದು. ಸರಿಯಾಗಿ ವಸೂಲು ಮಾಡಬೇಕು. ಈಗ 72 ಸಾವಿರ ರೂಪಾಯಿಗಳ ಮಾರಾಟ ತೆರಿಗೆ ಕೊಡಲು 72 ತಿಂಗಳ ಕಂತು ಕೊಟ್ಟಿದ್ದಾರೆ. ಎಷ್ಟು ಮಟ್ಟಿಗೆ ವ್ಯವಹಾರವಿದೆ ಎಂಬುದನ್ನು ಇದರಿಂದ ತಿಳಿಯಬಹುದು. ಹೀಗಾದರೆ ದೇಶದ ಕಲ್ಯಾಣವಾದ ಹಾಗೆ ಆಯಿತು! ನಿಮ್ಮ ಕೈಯ್ಯಲ್ಲಿ ದೇಶದ ಹಣ ಎಷ್ಟು ಮಟ್ಟಿಗೆ ಭದ್ರವಾಗಿರುತ್ತದೆ ಎಂಬುದನ್ನು ದಯೆಯಿಟ್ಟು ಯೋಚನೆಮಾಡಿ. ಈ ವಿಚಾರದಲ್ಲಿ ಹೆಚ್ಚಿನ ಅನುಭವವಿರುವ ಗದಗ್‌ರವರು ಚೆಕ್‌ಪೋಸ್ಟು ಇರಬೇಕೆಂದು ಹೇಳಿದರು. ಮಾನ ಮರ್ಯಾದೆಯಿಂದಿರುವ ರೈತರು ಮನೆ ಕಟ್ಟಿಕೊಳ್ಳಲು ಅಲ್ಪ ಸ್ವಲ್ಪ ಮರದ ಸಾಮಾನುಗಳಿಗಾಗಿ ಅರಣ್ಯದಲ್ಲಿ ಗಿಡಗಳನ್ನೇನಾದರೂ ಕತ್ತರಿಸಿದರೆ ಅವರನ್ನು ಕ್ರಿಮಿನಲ್ ಕೋರ್ಟ್ ಮುಂದೆ ನಿಲ್ಲಿಸುವುದು, ಅವಮಾನ ಮಾಡುವುದು ಸರಿಯಲ್ಲ, ಜನಸಾಮಾನ್ಯರಿಗೆ ಈರೀತಿ ತೊಂದರೆಯಾದರೆ ದೇಶದಲ್ಲಿ ಕ್ರಾಂತಿಯಾಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದರು. ಹೆಚ್ಚು ಹೆಚ್ಚಾಗಿ ಅರಣ್ಯ ಸಂಪತ್ತನ್ನು ದೋಚಿಕೊಂಡು ಹೋಗುವವರನ್ನು ಬಿಟ್ಟು ಸಣ್ಣ ಪುಟ್ಟ ಜನರನ್ನು ಹಿಡಿದು ತಾವು ತಪ್ಪಿತಸ್ಥರನ್ನು ಪತ್ತೆ ಮಾಡುತ್ತಿರುವುದಾಗಿ ಹೇಳುವುದರಿಂದ ಪ್ರಯೋಜನವಿಲ್ಲ. ಸಾಮಾನ್ಯ ಜನರನ್ನು ಗೌರವದಿಂದ ಕಾಣುವ ಮಾರ್ಗವನ್ನನುಸರಿಸದಿದ್ದರೆ ಕೆಟ್ಟ ಪರಿಣಾಮವಾಗುತ್ತದೆ.

ದೇಶಕ್ಕಾಗುತ್ತಿರುವ ಇನ್ನೊಂದು ಅನ್ಯಾಯವಿದೆ. ಬೆಟಿಂಗ್ ಛಾರ್ಜ್ ಸೇಕಡ ಹದಿನೈದರಂತೆ ವಿಧಿಸಲಾಗುತ್ತದೆ. ಇದನ್ನು ಕೊಡುವವರು ಯಾರು ಎಂಬುದನ್ನು ಗಮನಿಸಬೇಕು. ಈ ಸಂಬಂಧದಲ್ಲಿ ವಶೀಲೀ ಬಾಜಿ ನಡೆದಿದೆ. ಶ್ರೀಮಂತರಿಂದ ಬರುವ ಆದಾಯಕ್ಕೆ ತಡೆ ಹಾಕಿ ಬಡವರಮೇಲೆ ಹೊರೆ ಹಾಕಿದ್ದಾರೆ. ಇದು ಅನ್ಯಾಯ. ರೇಸ್‌ಕೋರ್ಸ್‌ನಲ್ಲಿ ಜೂಜಾಡುವವರು ಬೆಟಿಂಗ್ ಟ್ಯಾಕ್ಸ್ ಕೊಡುವುದರಿಂದ ಈ ತೆರಿಗೆಯನ್ನು ಸೇಕಡ ಇಪ್ಪತ್ತೈದಕ್ಕೆ ಹೆಚ್ಚಿಸಬಹುದು. ಹಾಗೆ ಮಾಡಿದರೆ ಸ್ವಲ್ಪ ಹೆಚ್ಚು ಆದಾಯ ಬರುತ್ತದೆ. ಆದುದರಿಂದ ಸರ್ಕಾರ ತನ್ನ ಆದಾಯವನ್ನು ಹೆಚ್ಚಿಸಿ ಕೊಳ್ಳಬೇಕಾದರೆ ಈ ಬೆಟಿಂಗ್ ಟ್ಯಾಕ್ಸನ್ನು ಸೇಕಡ ಹದಿನೈದರಿಂದ ಇಪ್ಪತ್ತೈದಕ್ಕೆ ಏರಿಸಬೇಕೆಂದು ಸಲಹೆ ಮಾಡುತ್ತೇನೆ.

†Sri B. V. MAGAVI (Haveri).—Sir, while supporting the demands for grants, I would like to make the following observations regarding the implementation of Sales-tax. The Government feels that there is so much leak of taxation and so much of evasion in payment. It makes the public feel that this result is either due to the neglect of the officers or the evasive nature of the merchant community. But nobody has tried to find out as to what is the root cause of all this, for so much of evasion in the business community.

In my opinion it is section ten of the Sales-tax Act dealing with registration and grant of licence wherein it is stated that every dealer having a turnover of more than Rs. 7,500 should register himself as a registered dealer, that works a great hardship to the merchants. While this limit is Rs. 25,000 in other States particularly the neighbouring State of Maharashtra I do not know why this limit has been fixed at Rs. 7,500 in our State. This practically means that every business man has to register himself under this Act. I am sure, there are many panwalas having a turnover of more than Rs. 7,500. There cannot be any business with a turnover of less than Rs. 7,500. In these days of inflation, this limit of Rs. 7,500 is a very small figure and it brings within its ambit the petty merchants and even hawkers. By harassing the small and petty merchants we are not going to earn much. At the same time we must know the difficulty of the petty merchants. The petty merchant runs the shop. It is a one man show. He has to go and purchase his requirements and he has to remain at the counter as salesman. If at all he writes anything he writes in a small diary.

(SRI B. V. MAGAVI)

But when he becomes an assessee the Sales-tax Officer would require him to maintain accounts in a tabular form and he would be required to produce vouchers and cash bills. He would be required to fill in returns in a proper manner. Just imagine whether a petty merchant having an income of not more than Rs. 200 per month, can afford to maintain a clerk to write his accounts and submit returns in a proper form? The Government have utterly failed to understand his difficulties. These petty merchants are thus harassed by the Sales-tax Officers. They are not satisfied with whatever is submitted to them. The Officer will say that he is going to tax the merchant arbitrarily. Many a time the merchants are taxed arbitrarily. The ultimate result is that the poor man who runs the business on practically somebody else's money, goes into liquidation and ultimate bankruptcy. Inspite of so much harassment to the assessees, let us see what the Government are able to collect. I am informed there are a number of Assistant Commercial Tax Officers and their offices are situated in the mofussil. I am told the gross income in the office of an Assistant Commercial Tax Officer is about Rs. 55,000 and the expenditure of that Office is about Rs. 40,000. In some offices of the Assistant Commercial Tax Officer the gross revenue is only Rs. 45,000 and for that the expenditure is about Rs. 40,000. Just for an income of Rs. 5,000 or Rs. 10,000 the Government are causing so much harassment to the mall and petty merchants. It may be that in some offices the collection may range from Rs. 40,000 to Rs. 1 lakh. Offices having Rs. 1 lakh collection are very few. Generally they are collecting only about Rs. 60,000. After deducting their expense, the net revenue to Government is hardly a few thousands. The cost of collection is on an average about 60 per cent. That being the case, how far are Government justified in maintaining these ACTOs? I think this is a waste of public money and innumerable harassment to the poor merchants. They can only have the satisfaction of harassing the poor merchants. This Act has created a new cadre called Sales Tax Consultants. I am not completely blind to evasion of taxes. In my opinion Government are not able to collect more than 66 per cent of the tax due. In many cases the collection comes to only about 60 per cent. This evasion of tax is there not, because people are unwilling to pay this tax but because they do not want to be harassed at the hands of the Sales Tax Officer.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ವಿಷಯದಲ್ಲಿ ಸ್ವಲ್ಪ ಹೇಳಿ.

ಶ್ರೀ ಬಿ. ವಿ. ಮಾಗಾವಿ.—ಆ ವಿಷಯವನ್ನು ತಾವೇ ಮಾತನಾಡಿ.

The Government of India was wise enongh to take out certain articles like cloth, sugar, etc., from the list of taxable goods at the consumer end and making them taxable at the source of supply or production. The point is why the Government of Mysore also should not follow the same procedure in this respect. The Government of Mysore should appoint a committee which can find out those articles that can be taxed at the very source of supply or production. There are many articles which can come in the above category like cement, kerosene, vanaspati ghee, safety matches and they can be taxed at the source of production or supply. By so doing the Government would certainly be able to increase the revenue by more than 20 per cent and Government can at the same time save the small merchants and grocers and kiranawalas from the harassment at the hands of the Sales Tax Officers and they can at the same time increase the minimum limit for registration as dealers from Rs. 7500 to Rs. 25,000.

As regards leakage of taxes, generally accounts are checked by the Commercial Tax Officer and the Assistant Commercial Tax Officer. If there is any collusion between the officer and the assessee, there is no proper authority to find out what amount of tax has been evaded. I propose to Government that the Inspectors who have been appointed

should be asked to inspect the accounts and the officer concerned may work as the supervising authority so that there would be no chances of collussion first between the Inspector and the assessee and then between the assessee and the supervising authority. The Government can ultimately stop the pilferage by this method. An Intelligence Branch has been appointed for Bangalore City. I do not know what prevented the Government from appointing a similar Intelligence Branch for the mofussil areas also.

Then, Sir, some discrimination has been made in the matter of equation of posts of the Sales Tax Officers. I hope Government will look into this matter. I know that this problem is there in all departments, but I hope Government will see that the sales tax people alone are not hit hard in the matter of equation.

Before I conclude, I would appeal to Government to appoint a committee to find out what commodities can be taxed at the very source of supply or production and see that the harassment to the merchant class is reduced and at the same time the revenue to Government is also increased. Secondly, I would ask the Government to inform the Sales Tax Officers to treat the assessees in the proper manner with proper dignity attached to the man and see that they carry out their duties without in any way offending any of the parties concerned.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಅಧ್ಯಕ್ಷರೇ, ಫಾರೆಸ್ಟ್ ವಿಷಯದಲ್ಲಿ ನನ್ನ ಸ್ನೇಹಿತರು ಎಲ್ಲಾ ಹೇಳಿದ್ದಾರೆ. ನಾನು ಇನ್ನು ಹೆಚ್ಚಿಗೆ ಹೇಳುವವನಲ್ಲ. ಅವರು ಬಿಟ್ಟಿರುವ ಒಂದೆರಡು ಮಾತುಗಳನ್ನು ಮಾತ್ರ ನಾನು ಹೇಳುತ್ತೇನೆ. ಈಗ ಫಾರೆಸ್ಟ್ ಐಟಮನ್ನು ಬಡ್ಜೆಟ್ಟಿನಲ್ಲಿ ನೋಡಿದರೆ ಅಲ್ಲಿ ಡೆವಲಪ್‌ಮೆಂಟ್ ಆಫ್ ಫಾರೆಸ್ಟ್ ಎಂದು ಇದೆ. ಆದರೆ ಈ ಬಡ್ಜೆಟ್ ಎಸ್ಟಿಮೇಟನ್ನು ತಿರುಗಿಸಿ ನೋಡಿದರೆ ಅವೆಲ್ಲಾ ಸಾಮಾನ್ಯವಾಗಿ ಕಟ್ಟಡಗಳನ್ನು ಕಟ್ಟುವುದು, ರಸ್ತೆಗಳನ್ನು ಮಾಡುವುದು, ನಾಲೆಗಳನ್ನು ತೆಗೆಯುವುದು—ಇಂತಹ ಬಾಬುಗಳಿಗೆ ಹಣವನ್ನು ಒದಗಿಸಿದ್ದಾರೆಯೇ ಹೊರತು ಹೆಚ್ಚಿಗೆ ಅಫಾರೆಸ್ಟೇಷನ್‌ಗೆ ಮತ್ತು ಹೆಚ್ಚು ಗಿಡಗಳನ್ನು ಹಾಕಿ ಅರಣ್ಯ ಸಂಪತ್ತನ್ನು ಹೆಚ್ಚಿಸಲಿಕ್ಕೆ ಯಾವ ಪ್ರಯತ್ನವನ್ನೂ ಇವರು ಸಾಕಷ್ಟು ಮಾಡಲಿಲ್ಲ. ಕೇವಲ ಹನ್ನೊಂದು ಲಕ್ಷ ರೂಪಾಯಿಗಳು ಮಾತ್ರ ಈ ಬಾಬಿಗೆ ಒದಗಿಸಿದ್ದಾರೆ. ನಾವು ಎಷ್ಟು ನೋಡಿ ಹೇಳಿದರೂ ಕೂಡ ನ್ಯಾಷನಲ್ ವೆಲ್ತ್ ದೇಶದಲ್ಲಿ ಹೆಚ್ಚು ಮಾಡಿಕೊಳ್ಳ ತಕ್ಕಂಥ ಬಾಬುಗಳಿಗೆ ಸರ್ಕಾರದವರು ಸಾಕಷ್ಟು ಫಂಡ್ಸನ್ನು ಒದಗಿಸಲಿಲ್ಲ. ಒಟ್ಟು ಮೂರುವರೆ ಅಥವಾ ನಾಲ್ಕು ಕೋಟಿ ರೂಪಾಯಿಗಳ ಬಡ್ಜೆಟ್ಟಿನಲ್ಲಿ ಕೇವಲ ಹನ್ನೊಂದು ಲಕ್ಷವನ್ನು ಅಫಾರೆಸ್ಟೇಷನ್ ಬಾಬಿಗೆ ಕೊಟ್ಟಿದ್ದಾರೆ. It is negligible ಎಂದು ಆಡಿಟ್ ವರದಿಯಲ್ಲಿ ಹೇಳಿದ್ದಾರೆ. ಈಗ ಮೈನರ್ ಫಾರೆಸ್ಟಿನಿಂದ ಫಾರೆಸ್ಟ್ ಪ್ರೊಡ್ಯೂಸನ್ನು ಕೊಡುತ್ತಾ ಇರುವುದರಿಂದ ಹನ್ನೊಂದು ಲಕ್ಷ ರೂಪಾಯಿಗಳು ಈಗ ಲುಕ್ಸಾನು ಆಗಿದೆ ಎಂದು ನಾನು ಹೇಳುತ್ತೇನೆ. ಮೈನರ್ ಫಾರೆಸ್ಟ್ ಪ್ರೊಡ್ಯೂಸನ್ನು ರಿಯಾಯಿತಿ ದರದಲ್ಲಿ ಕೇಳುತ್ತಿದ್ದಾರೆಂಬುದು ಸರ್ಕಾರಕ್ಕೆ ಗೊತ್ತಿಲ್ಲವೆಂದು ಕಾಣುತ್ತದೆ. ಇದರಿಂದ ದೇಶದಲ್ಲಿ ಈ ಹನ್ನೊಂದು ಲಕ್ಷ ರೂಪಾಯಿಗಳು ಆದಾಯ ಬಂದಿದ್ದರೆ ಎಷ್ಟು ಉಪಯೋಗವಾಗುತ್ತಿತ್ತು ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಫಾರೆಸ್ಟ್ ಫಾಯಿದೆ ಕಡಮೆಯಾಗುವುದಕ್ಕೆ ಕಾರಣಗಳೇನು ಎಂಬುದನ್ನು ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಏಜೆನ್ಸಿ ತಪ್ಪಿಸಿದ್ದು ಮತ್ತು ಬೆಳಗಾಂನಲ್ಲಿ ಇದಕ್ಕಾಗಿ ಹರಿಜನರನ್ನು ನಿಲ್ಲಿಸಿದ್ದು. ಇವೇ ಈ ಫಾರೆಸ್ಟ್ ಉತ್ಪತ್ತಿ ಬಹಳ ಕಡಮೆಯಾಗುವುದಕ್ಕೆ ಮುಖ್ಯ ಕಾರಣಗಳು. ಬೆಂಗಳೂರಿನಲ್ಲಿ ಒಂದು ಡಿಪೋವನ್ನು ತೆಗೆಸಿ ಬೇರೆ ತರಹದಲ್ಲಿ ಫಾರೆಸ್ಟ್ ಪ್ರೊಡ್ಯೂಸನ್ನು ಮಾರಾಟ ಮಾಡುವುದಕ್ಕೆ ಸರ್ಕಾರದವರು ಏತಕ್ಕೋಸ್ಕರ ನಿಗಾ ಕೊಡಲಿಲ್ಲವೆಂದು ನಾನು ಪ್ರಶ್ನೆ ಹಾಕುತ್ತೇನೆ. ಆ ರೀತಿ ಮಾಡಿದ್ದರೆ ಹೆಚ್ಚಿಗೆ ಮಾರಾಟ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವೇ? ಫಾರೆಸ್ಟಿನಲ್ಲಿ ಬೇಸಿಗೆ ಕಾಲ ಬಂದರೆ ಬೆಂಕಿಬಿದ್ದು ಕಾಡುಗಳಿಗೆ ವಿಶೇಷವಾಗಿ ನಷ್ಟವಾಗುತ್ತದೆ. ಅಂದ ಮೇಲೆ ಸರ್ಕಾರದವರು ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಇದುವರೆಗೂ ಏನೇನು ಮಾಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಹಿಂದಿನಕಾಲದಲ್ಲಿ ಇದರಿಂದ ಕೋಟಿಗಟ್ಟಲೆ ರೂಪಾಯಿಗಳು ನಷ್ಟವಾಗುತ್ತಿದ್ದರು. ಈಗಲೂ ಅದೇ ರೀತಿ ಎಷ್ಟೋ ಭಾಗಗಳಲ್ಲಿ ನಡೆದಿದೆ. ಈ ತರಹ ಬೆಂಕಿ ಬೀಳುವುದನ್ನು ತಪ್ಪಿಸುವುದಕ್ಕೆ ಏನಾದರೂ ಆಧುನಿಕ ಕ್ರಮಗಳು ಇದ್ದರೆ ಕೂಡಲೇ ಸರ್ಕಾರದವರು ಕೈಗೊಳ್ಳಬೇಕು. ತೃತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸಾಮಾನ್ಯವಾಗಿ ಮೂರು ಲಕ್ಷ ಎಕರೆಗಳಷ್ಟು ಕಾಡುಗಳನ್ನು ಬೆಳೆಸುತ್ತೇವೆಂದು ಹೇಳಿದ್ದೀರಿ. ೬೨-೬೩ನೇ ಸಾಲಿಗೆ ಈ ಬಾಬಿಗೋಸ್ಕರ ಬಡ್ಜೆಟ್ಟಿನಲ್ಲಿ ಏಳುವರೆ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ಹೇಳಿದ್ದೀರಿ. ಈ ತರಹ ಕೇವಲ ಏಳೂವರೆ ಲಕ್ಷ ರೂಪಾಯಿಗಳನ್ನು ಮುಂದಿನ ವರ್ಷವೂ ಒದಗಿಸುವುದಾದರೆ ತೃತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೇವಲ ಎಪ್ಪತ್ತೇಳು ಲಕ್ಷ ಎಕರೆಗಳಷ್ಟು ಕಾಡನ್ನು ಬೆಳೆಸುವುದಕ್ಕೆ ಸಾಧ್ಯವೇ ಎಂದು ನಾನು ಕೇಳುತ್ತೇನೆ. ಈ ರೀತಿ imaginary figures ವಿನಾಕಾರಣ ತೋರಿಸುತ್ತಿದ್ದೀರಿ. ನೀವು ಮಾಡುತ್ತಿರುವುದನ್ನು ನೋಡಿದರೆ ಬೆಟ್ಟ ಅಗಿದು ಇಲಿಯನ್ನು ಹಿಡಿದುಕೊಂಡು ಬಂದ ಹಾಗೆ ಅಗುತ್ತದಷ್ಟೆ.

ಇನ್ನು ವನಮಹೋತ್ಸವವನ್ನು ಹತ್ತಾರು ವರ್ಷಗಳ ಹಿಂದಿನಿಂದಲೂ ಕೂಡ ಇಡೀ ಇಂಡಿಯಾ ದೇಶದಲ್ಲೆಲ್ಲಾ ಮಾಡಿಕೊಂಡು ಬಂದು ಬೇಕಾದಷ್ಟು ಗಿಡಗಳನ್ನು ಬೆಳೆಸಿದ್ದೀರಿ. ಆದರೆ ಈ ಗಿಡಗಳು ಏನಾದುವೋ ಗೊತ್ತಿಲ್ಲ. ಇರತಕ್ಕ ಕಾಡನ್ನು ಕಡಿದು ಹಾಕುವುದು, ಎಲ್ಲಿ ಗಿಡಗಳು ಬೆಳೆಯುವುದಿಲ್ಲವೋ ಅಲ್ಲಿ ಕಾಡನ್ನು ಬೆಳೆಸುವುದು—ಹೀಗಾಗಿ ಕಾಡಿನ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಸಂಪತ್ತೇ ಕಡಮೆಯಾಗುತ್ತದೆ. ಮುಂದೆ ಈ ತರಹ ಆಗದಂತೆ ನೋಡಿಕೊಳ್ಳಬೇಕಾದುದು ಸರ್ಕಾರದ ಕರ್ತವ್ಯ. ಸಾಮಾನ್ಯವಾಗಿ ಈ ಮೈನರ್ ಫಾರೆಸ್ಟ್‌ಗಳಲ್ಲಿ ಬೇವಿನಗಿಡ ಮತ್ತು ಇತರೇ ಔಷಧಿಗಳಿಗೆ ಬೇಕಾದ ಗಿಡ ಮೂಲಿಕೆಗಳನ್ನು ಇತ್ತೀಚೆಗೆ ಯಾರೂ ಯಾವ ಕಡೆಯಲ್ಲೂ ಬೆಳೆಯುತ್ತಿಲ್ಲ. ಅಂಥಾದ್ದನ್ನು ಬೆಳೆಯುವುದಕ್ಕೆ ಸರ್ಕಾರ ಪ್ರೋತ್ಸಾಹ ನೀಡಬೇಕು. ಹುಣಿಸೇ ಗಿಡದಿಂದ ಬೇಕಾದಷ್ಟು ಸೌದೆ ಬರುತ್ತದೆ. ಅರಣ್ಯ ಇಲಾಖೆಯವರು ನರ್ಸರೀಸನ್ನು ಚೆನ್ನಾಗಿ ಬೆಳೆಸಿದರೆ ಅದನ್ನು ದೇಶದ ಎಲ್ಲಾ ಕಡೆಗೂ ಸರಬರಾಜು ಮಾಡಿದರೆ ಹೆಚ್ಚಿಗೆ ದುಡ್ಡು ಬರುತ್ತದೆ. ಒಟ್ಟಿನಲ್ಲಿ ಸರ್ಕಾರದವರು ಹೊಂಗೆ, ಹುಣಿಸೆ ಮತ್ತು ಬೇವಿನ ಮರಗಳನ್ನು ಹೆಚ್ಚಿಗೆ ಬೆಳೆಯಲು ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಸೇಲ್ಸ್ ಟ್ಯಾಕ್ಸ್ ವಿಚಾರ. ಸಾಮಾನ್ಯವಾಗಿ ಈ ವಿಚಾರವನ್ನು ನನ್ನ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ಈ ಸೇಲ್ಸ್ ಟ್ಯಾಕ್ಸ್‌ನಲ್ಲಿ ಈಗ ಏನಾಗಿದೆ ಯೆಂದರೆ ನ್ಯಾಯವಾಗಿ ಯಾರು ಈ ತೆರಿಗೆ ಕೊಡಬೇಕೋ ಅವರು ಕೊಡುತ್ತಿಲ್ಲ. ಇದು ಕನ್ಸ್ಯೂಮರ್ಸ್‌ಗೆ ವಿಶೇಷವಾಗಿ ಬೀಳುವ ತೆರಿಗೆಯಾಗಿದೆ. ಕೆಲವರು ಈ ತೆರಿಗೆಯನ್ನು ಕೊಡುತ್ತಾರೆ ಮತ್ತೆ ಕೆಲವರು ಈ ಸೇಲ್ಸ್ ಟ್ಯಾಕ್ಸ್ ಮುಖಾಂತರ ಆದಾಯ ಪಡೆಯುತ್ತಿದ್ದಾರೆ. ಆದಾಯ ಮಾರ್ಗಗಳನ್ನು ಕಲ್ಪಿಸಿ ಕೊಂಡಿದ್ದಾರೆ. ಇತ್ತೀಚೆಗೆ ಕೇವಲ ಬಡವರಿಗೆ ಅದರಲ್ಲೂ ಸಾಮಾನ್ಯ ಜನಗಳಿಗೆ ಈ ತೆರಿಗೆಯನ್ನು ಹೆಚ್ಚಿಗೆ ವಿಧಿಸಿ ಗೋಳಾಡಿಸುತ್ತಿದ್ದಾರೆ. ಈ ತೆರಿಗೆಯನ್ನು ಕೊಡದೇ ಇರುವವರನ್ನು ಕೂಡಲೇ ಕಂಡು ಹಿಡಿದು ಅವರಿಂದ ಹೆಚ್ಚು ಹೆಚ್ಚಾಗಿ ತೆರಿಗೆಯನ್ನು ವಸೂಲು ಮಾಡಬೇಕೆಂಬುದೇ ನನ್ನ ಸಲಹೆ. ಇನ್ನು ಈ ಸೇಲ್ಸ್‌ಟ್ಯಾಕ್ಸ್ ಕಲೆಕ್ಟರ್ ವಿಚಾರದಲ್ಲಿ ಆಫೀಸರ್ಸ್ ಲಂಚ ತೆಗೆದುಕೊಳ್ಳುವುದು ಇತ್ತೀಚೆಗೆ ಬಹಳ ಜಾಸ್ತಿಯಾಗಿದೆ. ಸುಮ್ಮನೆ ಸಾಹುಕಾರರಿಗೆ ಒಂದು ನೋಟೀಸನ್ನು ಕಳುಹಿಸುವುದು. ಪುನಃ ಅವರನ್ನು ಒಳಗೊಳಗೇ ಸರಿಮಾಡಿಕೊಂಡು ತೆರಿಗೆಯೆಲ್ಲಾ ಬಂದಿದೆ, ಸರ್ಕಾರಕ್ಕೆ ಅವನು ಕೊಡಬೇಕಾದ ಬಾಕಿ ಏನೂ ಇಲ್ಲವೆಂದು ಹೇಳಿರತಕ್ಕ ನಿದರ್ಶನಗಳು ಅನೇಕವಿವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದುಡ್ಡು ತೆಗೆದುಕೊಂಡು ಅವರು ಹೇಳಿದಷ್ಟು ಇವನು ತೆರಿಗೆ ಹಾಕುತ್ತಾನೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇನ್ನು ಇನ್‌ಕಂಟ್ಯಾಕ್ಸ್ ಎಂದು ಬೇರೆ ಆಗಿದೆ. ವ್ಯವಸಾಯ ಮಾಡುವವರ ಮೇಲೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಎಂದು ಹಾಕುತ್ತಾರೆ. ಇದರಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಒಂದು ಕಡೆ ಇನ್‌ಕಂಟ್ಯಾಕ್ಸ್ ಆಫೀಸರ್‌ನಿಂದ ಆಗಲೀ ಅಥವಾ ಕಮಿಷನರಿಂದ ನೋಟೀಸ್ ಬಂದರೆ ರೈತರಿಗೆ ಅಷ್ಟಾಗಿ ತಿಳಿವಳಿಕೆ ಇಲ್ಲದೆ ಇರುವುದರಿಂದ ಅವನು ಆ ನೋಟೀಸನ್ನು ಲಾಯರ್ ಹತ್ತಿರ ತೆಗೆದುಕೊಂಡು ಹೋಗುತ್ತಾನೆ. ಅವನಿಗೆ ಬೇರೆ ಲಾಯರ್ ಫೀಸ್ ಕೊಟ್ಟು ಐದುನೂರು-ಆರುನೂರು ರೂಪಾಯಿಗಳಷ್ಟು ಇನ್‌ಕಂಟ್ಯಾಕ್ಸ್ ಕೊಡಬೇಕಾಗುತ್ತದೆ. ಸಾಮಾನ್ಯವಾಗಿ ಆ ರೈತನಿಗೆ ಐದುನೂರು ರೂಪಾಯಿಗಳಷ್ಟು ಆದಾಯವಿರುವುದಿಲ್ಲ. ಅಂಥಾದ್ದರಲ್ಲಿ ಲಾಯರ್ ಹತ್ತಿರ ಹೋದ ಕೂಡಲೆ ಅವರು ಅವನನ್ನು ಹೆದರಿಸಿ ಇನ್‌ಕಂಟ್ಯಾಕ್ಸ್ ಬಿಲ್ಲಿಗೆ, ನಾಲ್ಕರಷ್ಟು ಖರ್ಚು ಮಾಡುವ ಹಾಗೆ ಮಾಡುತ್ತಾರೆ. ಇದರಿಂದ ಅವರು ತಮ್ಮ ಮನೆಗಳನ್ನು ಸಹ ಮಾರಿಕೊಂಡು ಹೋಗುವ ಸ್ಥಿತಿಗೆ ಬಂದು ತುಂಬಾ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಅದು ನನ್ನ ಸ್ವಂತ ಅನುಭವವಾಗಿದೆ. ಇನ್‌ಕಂಟ್ಯಾಕ್ಸ್ ಕೊಡದೇ ಇರುವವರು ಎಷ್ಟೋ ಜನರಿದ್ದಾರೆ. ಲೇವಾದೇವಿ ಮಾಡುವವರು ಅನೇಕರು ವರ್ಷಾನುಗಟ್ಟಲೆ ಇನ್‌ಕಂಟ್ಯಾಕ್ಸ್ ಕೊಟ್ಟಿರುವುದಿಲ್ಲ. ಅಂತಹವರು ಸರ್ಕಾರಕ್ಕೆ ದ್ರೋಹ ಮಾಡತಕ್ಕ ಸನ್ನಿವೇಶಗಳು ಬೇಕಾದಷ್ಟಿವೆ. ಆದ್ದರಿಂದ ಇನ್‌ಕಂಟ್ಯಾಕ್ಸ್ ಇಲಾಖೆಯವರು ಇದನ್ನೆಲ್ಲಾ ಚೆನ್ನಾಗಿ ಗಮನದಲ್ಲಿಟ್ಟುಕೊಂಡು ಹಳ್ಳಿಗಳ ಕಡೆ ಲೇವಾದೇವಿ ಮಾಡುವವರಿಂದ ನ್ಯಾಯವಾಗಿ ಸರ್ಕಾರಕ್ಕೆ ಇನ್‌ಕಂಟ್ಯಾಕ್ಸ್ ವಸೂಲು ಆಗುವಂತೆ ವ್ಯವಸ್ಥೆ ಬಹಳ ಜಾಗ್ರತೆಯಾಗಿ ಮಾಡಬೇಕು ಎಂಬುದಾಗಿ ನಾನು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇವೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಅಧ್ಯಕ್ಷರೇ, ಈ ಅರಣ್ಯಶಾಖೆ ಬಹಳ ಮುಖ್ಯವಾದುದು. ಅದರಿಂದ ಬರತಕ್ಕ ಆದಾಯ ವಿಚಾರದಲ್ಲಿ ನಾಲ್ಕು ಸಲಹೆಗಳನ್ನು ನಿಮ್ಮ ಮುಂದಿಡಬೇಕೆಂದು ನಿಂತುಕೊಂಡಿದ್ದೇನೆ. ಇಲ್ಲಿ ಏನೇನು ಮಾಡುತ್ತಿದ್ದಾರೆಂದರೆ ಕೆಲವು ಹಳ್ಳಿಗಳಲ್ಲಿ ಬಿ. ಎಚ್. ರೋಡಿನ ಪಕ್ಕದಲ್ಲಿ ಇರುವ ಸಾಲು ಮರಗಳನ್ನು ಮತ್ತು ಮೈದಾನ ಪ್ರದೇಶದಲ್ಲಿದ್ದ ಮರಗಳನ್ನು ಅಲ್ಲದೆ, ಬೇಚರಾಕ್ ಹಳ್ಳಿಗಳಲ್ಲಿ ಇದ್ದ ಮರಗಳನ್ನೆಲ್ಲ ತಂದು ಹಾಕಿ-ಡಿಫಾರೆಸ್ಟ್ ಮಾಡಿದ್ದಾರೆ. ಇದರಿಂದ ಮಳೆ ಹವಾಗುಣ ವ್ಯತ್ಯಾಸವಾಗಿರುವುದೂ ಅಲ್ಲದೆ ನಮ್ಮ ದೇಶಕ್ಕೆ ಬಹಳ ನಷ್ಟವಾಗಿದೆ. ನಮ್ಮ ಕಡೆ ಫಾರೆಸ್ಟ್ ಪ್ರೊಡ್ಯೂಸನ್ನು ವರ್ಷ ವರ್ಷ ಹರಾಜು ಮಾಡುತ್ತಾರೆ. ಹರಾಜುಮಾಡುವಾಗ ನಾನು ಮತ್ತು ನನ್ನ ಸ್ನೇಹಿತರಾದ ಶ್ರೀಮಾನ್ ಶಂಕರಪ್ಪನವರು ತುಮಕೂರಿನಲ್ಲಿ ಡಾ॥ ಗಂಗಾಧರಪ್ಪನವರ ಅಂಗಡಿಯಲ್ಲಿ ಕುಳಿತು ಮಾತನಾಡುವಾಗ ಈ ವಿಷಯ ಹೊರಬಂತು. ಆ ಮನುಷ್ಯ ಏನು ಹೇಳುತ್ತಾನೆ. ಮೂರು, ನಾಲ್ಕು ವರ್ಷಗಳ ಲೀಜ್ ಕೊಡುತ್ತಾರೆಂದರೆ. ಹೈಯಸ್ಟ್ ಬಿಡ್‌ಗಿಂತ ಶೇಖಡ 25ರಷ್ಟು ಜಾಸ್ತಿ ಕೊಡುತ್ತೇನೆ ಎಂದು. ಈಗ ಅದರ ಜೊತೆಗೆ ಇರುವ ಕಾಡನ್ನು ಅಭಿವೃದ್ಧಿಮಾಡುವುದಕ್ಕೆ ಟ್ರೆಂಚ್ ಹೊಡೆಯುತ್ತಿದ್ದಾರೆ. ಈಗಾಗಲೇ ಕೆಲವು ಪೈಲಟ್ ಪ್ರಾಜೆಕ್ಟುಗಳಾಗಿ ಕೆಲವು ಕಡೆ ಟ್ರೆಂಚ್ ತೋಡಿಬಿಟ್ಟಿದ್ದಾರೆ. ಮರಗಳ ಪೈಕಿ ಶೇಕಡ 25ರಷ್ಟು ಈಗಾಗಲೇ ಕಾಯಿ ಬಿಡುತ್ತಿವೆ. ಆ ರೀತಿ ಟ್ರೆಂಚ್ ಹೊಡೆದಮೇಲೆ ಹೆಚ್ಚು ಆದಾಯ ಸಿಕ್ಕುತ್ತಿದೆ. ಹೀಗಿರುವಾಗ ಆತ ಸರ್ಕಾರದವರ ಹತ್ತಿರ ಹೋಗಿ ಶೇಕಡ 25ರಷ್ಟು ಜಾಸ್ತಿ ಕೊಡುತ್ತೇನೆ. ನಾಲ್ಕೈದು ವರ್ಷಗಳಕಾಲ ಲೀಜಿಗೆ ಕೊಡಿ ಎಂದು ಕೇಳಿಕೇಳಿ ಸಾಕಾಯಿತು. ತನ್ನ ಕೈಯಿಂದ ದುಡ್ಡು ಖರ್ಚಾದರೂ ಇದರಿಂದೇನೂ ಆಗಲಿಲ್ಲವೆಂಬುದಾಗಿ ನಮಗೆ ಹೇಳಿದ. ಇಂಥಾದ್ದನ್ನು ಸರ್ಕಾರದವರು ನಿಜವಾಗಿ ಮತ್ತು ಆಳವಾಗಿ ಯೋಚನೆ ಮಾಡಬೇಕಾಗಿದೆ. ಈ ತರಹ ಮಾಡುವುದರಿಂದ ಕಾಡಿನ ಸಂಪತ್ತು ಜಾಸ್ತಿಯಾಗುವುದಿಲ್ಲ. ಶೇಕಡ 25ರಷ್ಟು ಜಾಸ್ತಿ ಹಣ ಕೊಡುತ್ತೇನೆಂದು ಹೇಳಿದಮನುಷ್ಯ ನಿಮ್ಮ ಹತ್ತಿರ 3-4 ವರ್ಷಗಳಿಂದ ಬಂದರೂಕೂಡ ಏನೂ ಫಲಿತಾಂಶವಾಗಲಿಲ್ಲವೆಂದು ಹೇಳುತ್ತಾನೆ. ಅಂದಮೇಲೆ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ್ದರಲ್ಲಿ ನಿಜಾಂಶ

ಏಕೆ. ಇದರಲ್ಲಿ ಏನೋ ವಿಚಾರವಿರಬೇಕು. ಎಲ್ಲೋ ಯಾವ ಮಂತ್ರಿ ಜೇಬೂ ಆತ ಬೆಚ್ಚಗೆ ಮಾಡಲಿಲ್ಲವೆಂದು ಕಾಣುತ್ತದೆಂದು ನಾನು ಹೇಳುತ್ತೇನೆ.

5 P.M.

Sri B. D. JATTI (Minister for Finance.)—What does the Hon'ble Member mean by that? When he says that, he must be specific about it. There is no use in making wild allegations. It is a reflection on the entire ministry. Let him say is this is the Minister and this is the amount taken, I seriously object to it.

Sri C. J. MUCKANNAPPA.—What has happened to the Doddnnanavar affair? Is it not a fact the Prime Minister has asked this Government that this matter has to be gone into?

ಶ್ರೀ ವಿ. ಎಂ. ದೇವ್.—ನಾನು ಹೇಳುವುದು ಇಷ್ಟೆ. ಈ ತರಹ ಮಾಡುವುದರಿಂದ ಫಾರೆಸ್ಟ್ ಡೆವಲಪ್‌ಮೆಂಟ್ ಮಾಡುವುದಕ್ಕೆ ತೊಂದರೆಯಾಗಿದೆ. ಇದಕ್ಕಿನ್ನೂ ಸರ್ಕಾರದವರು ಸೀರಿಯಸ್ ಕನ್ಸಿಡರೇಷನ್ ಕೊಟ್ಟು ಇದನ್ನು ಪರಿಗಣಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಕಬ್ಬಿಣದ ಕಾರ್ಖಾನೆಗೆ ಅಸಾಧ್ಯವಾದ ಸೌದೆ ಫ್ರೀ ಆಗಿಹೋಗುತ್ತಿದೆ. ನಮಗೆ ಸ್ವಾತಂತ್ರ್ಯಬರುವುದಕ್ಕೆ ಮುಂಚೆ ಅಲ್ಲಿ ಕಲ್ಲಿದ್ದಲಿನ ವ್ಯವಸ್ಥೆ ಮಾಡುವುದಕ್ಕೆ ಕಷ್ಟವಾಗಿತ್ತು. ಈಗ ಆ ತರಹ ಪರಿಸ್ಥಿತಿ ಇರುವುದಿಲ್ಲ. ಕಬ್ಬಿಣ ಕರಗಿಸುವುದಕ್ಕೆ ಫಾರೆಸ್ಟ್ ಕಡಿದು ಸೌದೆ ಉಪಯೋಗಿಸುವುದಕ್ಕೆ ಬದಲಾಗಿ ಬೇರೆ ಯಾವುದಾದರು ಒಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಸಾಮಿಲ್ ಹಾಕಿ ಕೆಲಸ ಮಾಡಿದರೆ ಬಹಳ ಲಾಸ್ ಆಗುತ್ತದೆ. ಅದನ್ನು ಖಾಸಗಿಯವರು ನಡೆಸಿದರೆ ಅದರಿಂದ ಆದಾಯ ಬರುತ್ತದೆ. ನಾನು ಮೊದಲೇ ಹೇಳಿದಹಾಗೆ ಆಡಳಿತದಲ್ಲಿ ದುರ್ವ್ಯಾಪಾರ ಜಾಸ್ತಿಯಾಗಿರುವುದರಿಂದ ಈರೀತಿ ಅನ್ಯಾಯವಾಗುತ್ತಿದೆ. ಫಾರೆಸ್ಟಿನಲ್ಲಿ ಬೇಕಾದಷ್ಟು ಮರಗಳು ಆಗಿಂದಾಗ್ಗೆ ಕಳ್ಳ ಸಾಗಾಣಿಕೆಯಾಗುತ್ತಾ ಇರುತ್ತವೆ. ಆಡಳಿತದಲ್ಲಿ ದಕ್ಷತೆ ಇಲ್ಲದಿದ್ದರೆ ಅದರಿಂದ ಏನೂ ಆಗುವುದಿಲ್ಲ ಎಂದು ನನಗನ್ನಿಸುತ್ತದೆ. ಇದು ಸಾಕಷ್ಟು ಸೀರಿಯಸ್ ವಿಷಯ ಎನ್ನುವುದು ನಿಜವಾಗಿಯೂ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಇದನ್ನು ನಿಲ್ಲಿಸಬೇಕಾದರೆ ಅಧಿಕಾರಿಗಳಿಗೆ ಬರತಕ್ಕ ಸಂಬಳಕ್ಕೂ ಇದಕ್ಕೂ ಒಂದು ಸಂಬಂಧವನ್ನು ಕಲ್ಪಿಸದಿದ್ದರೆ ನಿಜವಾಗಿಯೂ ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಇವೊತ್ತಿನ ದಿವಸ ಒಂದು ಹೋಬಳಿಯಲ್ಲಿ ಅಥವಾ ತಾಲ್ಲೂಕಿನಲ್ಲಿ ಕಂದಾಯದ ವಸೂಲಿ ಸರಿಯಾಗಿ ಆಗದೆ ಇದ್ದರೆ ರೆವಿನ್ಯೂ ಇನ್ಸ್‌ಪೆಕ್ಟರ್ ಅಥವಾ ಶೇಕದಾರರ ಸಂಬಳದಲ್ಲಿ ಖೋತಾ ಆಗುತ್ತದೆ. ತಹಸೀಲ್ದಾರರಿಗೆ ಅವರಿಗೆ ಬರುವ ಅಲೋಯನ್ಸ್ ನಿಂತುಹೋಗುತ್ತದೆ. ಪೂರ್ವಿಕರು ಮತ್ತು ಜವಾಬ್ದಾರಿ ಇರುವವರು ಆ ರೀತಿ ಕಾನೂನು ಮಾಡಿದ್ದಾರೆ. ಒಟ್ಟಿನಲ್ಲಿ ಯಾವುದಾದರೂ ಒಂದು ಆಡಳಿತ ಸರಿಯಾಗಿ ನಡೆಯಬೇಕಾದರೆ ಯಾವ ರೀತಿ ಇರಬೇಕೆಂಬುದಕ್ಕೆ ಮಾನ್ಯ ಸದಸ್ಯರನೇಕರು ಎಷ್ಟೋ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಮನುಷ್ಯನ ಆರ್ಥಿಕ ಸ್ಥಿತಿಗೂ ಅವನು ಮಾಡುವ ಕೆಲಸಕ್ಕೂ ಏನಾದರೂ ಒಂದು ಗಂಟು ಹಾಕದೆ ಇದ್ದರೆ ಏನು ಮಾಡಿದರೂ ಅದರಿಂದ ಪ್ರಯೋಜನವಾಗುವುದಿಲ್ಲ.

ಇನ್ನೊಂದು ವಿಷಯ, ಮೊನ್ನೆ ಫಿಲೇಚರ್ ಸಿಲ್ಕ್ ವಿಚಾರ ಈ ಸಭೆಯಲ್ಲಿ ಬಂತು. ಆ ಸಂಬಂಧದಲ್ಲಿ ಮಾನ್ಯ ಸಚಿವರು ಹೇಳಿದರು ಇದರಬಗ್ಗೆ ಏನಾದರೂ ಒಂದು ಇನ್‌ಸೆನ್‌ಟೀವ್ ಬರುವ ಹಾಗೆ ಮಾಡುತ್ತೇವೆಂದು. ಇನ್‌ಸೆನ್‌ಟೀವ್ ವಿಚಾರಕ್ಕೆ ಬಂದರೆ ಏನೂ ಆಗುವುದಿಲ್ಲ. ಯಾವ ಮನುಷ್ಯನಿಗೆ ಆಗಲಿ ಅವನಿಗೆ ಬರುವ ಸಂಬಳಕ್ಕೂ ಅವನು ಮಾಡುವ ಕೆಲಸಕ್ಕೂ ಒಂದೇಸಮನಾಗಿ ಸಂಬಂಧವಿದ್ದರೆ ಒಳ್ಳೆಯದೆಂದು ಕಾಣುತ್ತದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಈ ಅರಣ್ಯ ಖಾತೆಗೆ ಸಂಬಂದಪಟ್ಟಂಥ ಬೇಡಿಕೆಯ ವಿಷಯದ ಮೇಲೆ ಬಹಳ ಮಂದಿ ಸದಸ್ಯರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಹೇಳುವ ರೀತಿಯಲ್ಲಿ ಕೂಡ ಒಬ್ಬಿಬ್ಬರು ಈ ಇಲಾಖೆಯಲ್ಲಿರತಕ್ಕ ಕೆಲವು ಲೋಪದೋಷಗಳನ್ನು ಕಠಿಣವಾಗಿಕೂಡ ಎತ್ತಿ ಹಿಡಿದಿದ್ದಾರೆ. ಅದಕ್ಕೋಸ್ಕರವಾಗಿ ಮೊದಲನೇಸಾರಿ ಅವರೆಲ್ಲರಿಗೂಕೂಡ ನನ್ನ ಅಭಿವಂದನೆಗಳನ್ನು ಸಲ್ಲಿಸುತ್ತೇನೆ. ಅರಣ್ಯ ಇಲಾಖೆ ಮೈಸೂರು ಸಂಸ್ಥಾನದಲ್ಲಿ ವಿಶಾಲ ಕರ್ಣಾಟಕವಾದಮೇಲೆ ಒಂದು ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆದಿದೆ. ಅದರಲ್ಲೂಕೂಡ ಅರಣ್ಯ ಸಂಪತ್ತಿನಲ್ಲಿ ಬಹು ಭಾಗ ಇಂಟಿಗ್ರೇಟೆಡ್ ಭಾಗಗಳಿಂದ ಬಂದಿದೆ. ಈ ದೃಷ್ಟಿಯಿಂದ ಅರಣ್ಯ ಇಲಾಖೆ ಇನ್ನೂ ಹೆಚ್ಚಿನ ರೀತಿಯಲ್ಲಿ ದಕ್ಷತೆಯಿಂದ ದೇಶದ ಒಂದು ಸಂಪತ್ತನ್ನು ಹೆಚ್ಚಿಸುವ ರೀತಿಯಲ್ಲಿ ಕೆಲಸಮಾಡಲಿ ಎನ್ನತಕ್ಕ ಒಂದು ಸದುದ್ದೇಶದಿಂದ ಮಾನ್ಯಸದಸ್ಯರೆಲ್ಲರೂಕೂಡ ಮಾತನಾಡಿದ್ದಾರೆ, ಎಂದು ಭಾವನೆ ಮಾಡಿಕೊಂಡು ಅವರು ಇಲ್ಲಿ ಹೇಳಿರತಕ್ಕ ಮತ್ತು ಪ್ರಸ್ತಾಪ ಮಾಡಿರತಕ್ಕ ಕೆಲವು ವಿಷಯಗಳಿಗೆ ಉತ್ತರಕೊಟ್ಟಮೇಲೆ ಅವರು ನಾನು ಕೇಳಿರತಕ್ಕ ಬೇಡಿಕೆಗೆ ಒಂದು ಕಾಸೂ ಕೂಡ ಖೋತಾಮಾಡದೆ ಸಂಪೂರ್ಣವಾಗಿ ಸಹಾನುಭೂತಿಯನ್ನು ನೀಡುತ್ತಾರೆ ಎನ್ನುವ ಭರವಸೆಯಿಂದ ಕೆಲವು ವಿಷಯಗಳಿಗೆ ಉತ್ತರ ಕೊಡಲು ನಾನು ಪ್ರಾರಂಭ ಮಾಡುತ್ತೇನೆ. ಮೊದಲನೆಯದಾಗಿ ಮಾತನಾಡುತ್ತಾ ಶ್ರೀಮಾನ್ ಹುಚ್ಚೇಗೌಡರು ಬಹಳ ಹಳಬರು, ಹಿರಿಯರು ಮತ್ತು ಅನುಭವಿಗಳು. ಅವರು ಹೇಳತಕ್ಕ ಮಾತಿನಲ್ಲಿ ಏನಾದರೂ ನಿಜವಾದ ಲೋಪದೋಷಗಳು ಇದ್ದರೆ ಅವುಗಳನ್ನು ಸರಿಪಡಿಸತಕ್ಕದ್ದು ಸರ್ಕಾರದವರ ಕರ್ತವ್ಯ ಎನ್ನುವ ಭಾವನೆಯುಳ್ಳವನು ನಾನು ಆಗಿದ್ದೇನೆ. ಅವರು ಪ್ರಸ್ತಾಪಮಾಡಿದ ಒಂದೆರಡು ಸಾಮಿಲ್ಲುಗಳಲ್ಲಿ ಸರಿಯಾದ ರೀತಿಯಲ್ಲಿ ಉತ್ಪತ್ತಿ ಬರುತ್ತಿಲ್ಲ, ಅದನ್ನು ಏತಕ್ಕೆ ಇಟ್ಟುಕೊಳ್ಳಬೇಕು, ಅಂಥಾ ನಷ್ಟವಾಗತಕ್ಕ ಬಾಬುಗಳನ್ನು ಇಟ್ಟುಕೊಳ್ಳುವುದರಿಂದ ದೇಶಕ್ಕೆ ಇದರ ಹೊರೆ ಹೆಚ್ಚಾಗುವುದಿಲ್ಲವೇ ಎಂದು ಹೇಳಿ ಶಂಕೆಪಟ್ಟರು. ಅದು ಹಣಕಾಸಿನ ಲಾಭ ದೃಷ್ಟಿಯಿಂದ ಶಂಕೆ ಪಡತಕ್ಕದ್ದು ಸಹಜವಾಗಿದೆ. ಆದರೆ ಉತ್ತರಕನ್ನಡ ಜಿಲ್ಲೆಯಲ್ಲಿ ಸುಮಾರು 100ಕ್ಕೆ 80 ಭಾಗದಷ್ಟು ಕಾಡು ಇದೆ. ಅಲ್ಲಿನ ಜನರಿಗೆ ಬೇರೆ ವಿಧವಾದ ಕೆಲಸಕಾರ್ಯಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಅಲ್ಲಿ ಅವರು ಕಾಡಿನಲ್ಲಿರತಕ್ಕ ಕೆಲಸವನ್ನು ಅವಲಂಬಿಸಿ ಜೀವನವನ್ನು ಸಾಗಿಸಬೇಕಾಗಿದೆ. ಅಲ್ಲಿ ವ್ಯವಸಾಯದಲ್ಲಿ ಹೆಚ್ಚಿನ ರೀತಿಯಲ್ಲಿ ಜನಗಳು

(ಶ್ರೀ ಬಿ. ರಾಚಯ್ಯ)

ತಮ್ಮ ಜೀವನವನ್ನು ಸಾಗಿಸುವುದಕ್ಕೆ ಅವಕಾಶ ವಿರುವುದಿಲ್ಲ. ಅಂಥಕಡೆ ಒಂದೆರಡು ಸಾಮಿಲ್ಲುಗಳು ಇವೆ. ಅಲ್ಲಿ ಟಿಂಬರ್‌ಅನ್ನು ಕಟ್‌ಮಾಡಿ ಸೈಜ್ ಮಾಡ ತಕ್ಕ ಸ್ಥಿತಿಯಲ್ಲಿ ಇಲ್ಲ. ಬೇರೆಕಡೆ ಲಾಗ್ಸ್ ಉಳಿಕೆ ಆಗುವುದನ್ನು ತೆಗೆದುಕೊಳ್ಳದಿದ್ದರೆ ಅವು ಹಾಳಾಗು ತ್ತವೆ. ಕಟ್‌ಮಾಡಿದ ಮರದ ಭಾಗಗಳು ಏನಿವೆ ಅವುಗಳನ್ನು ತೆಗೆದುಕೊಂಡು ಅವು ಕೆಲಸಕ್ಕೆ ಬರತಕ್ಕ ರೀತಿಯಲ್ಲಿ ಉಪಯೋಗಿಸಿ ಕಟ್‌ಮಾಡಿ ಕೊಡು ವುದಕ್ಕೋಸ್ಕರ ಮೆಷಿನ್ಸ್ ಉಪಯೋಗಿಸಿಕೊಂಡು ಕೆಲವಾರು ಜನಗಳಿಗೆ ನೌಕರಿಯನ್ನು ಒದಗಿಸುವ ದೃಷ್ಟಿಯಿಂದ ಅದನ್ನು ಮಾಡುತ್ತಿದ್ದೇವೆ. ಕಾಡಿನಲ್ಲಿ ಹಾಳಾಗುವುದನ್ನು ತೆಗೆದುಕೊಂಡು ಬಂದು ಉಪ ಯುಕ್ತವಾದ ರೀತಿಯಲ್ಲಿ ಮಾಡುವುದರಿಂದ ಆ ಸಾಮಿಲ್ಲುಗಳನ್ನೇ ಬೇರೆ ಮಾಡಿ ಅದರ ಜವಾಬ್ದಾರಿ ಯೆಷ್ಟು, ಅದರ ಖರ್ಚು ಎಷ್ಟು ಮತ್ತು ಆದರಿಂದ ಬರತಕ್ಕ ಆದಾಯ ಎಷ್ಟು ಎಂಬುದಕ್ಕೆ ಒಂದು ಲೆಕ್ಕವನ್ನು ಇವೊತ್ತಿನವರೆಗೂ ಇಟ್ಟಿಲ್ಲ. ಇನ್ನು ಮುಂದೆ ಆ ಲೆಕ್ಕವನ್ನು ಇಡಬೇಕಾಗುತ್ತದೆ. ಯಾವುದೇ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೂ ಕೂಡ ಲಾಭದ ದೃಷ್ಟಿಯ ಜೊತೆಗೆ ಅಲ್ಲಿನ ಪರಿಸ್ಥಿತಿಯನ್ನು ಅನುಸರಿಸಬೇಕು. ಕೆಲವು ಸಂದರ್ಭ ಗಳಲ್ಲಿ ಬರಗಾಲ ಬಂದಕಡೆ ಯಾವವಿಧವಾದ ರಿಟರ್ನ್ಸ್ ಕೂಡ ನಾವು ಎಕ್ಸ್‌ಪೆಕ್ಟ್‌ಮಾಡುವುದಿಲ್ಲ ಎಂದು ನಾನು ಹೇಳುತ್ತೇನೆ. ಕಾಡನ್ನೇ ಅವಲಂಬಿಸಿಕೊಂಡು ಕಾಡಿ ನಲ್ಲೇ ಹುಟ್ಟಿ ಕಾಡಿನಲ್ಲೇ ಬೆಳೆದಿರತಕ್ಕ ಜನಗಳಿಗೆ ಕಾಡಿನಲ್ಲಿ ಒಂದು ಆಶೆಯನ್ನು ತೋರಿಸಬೇಕಾದರೆ ಅಲ್ಲಿ ಆ ಒಂದು ಕೈಗಾರಿಕೆಯನ್ನು ಇಡತಕ್ಕದ್ದು ಸರ್ಕಾರದ ಧರ್ಮ ಎಂದು ನಾನು ತಿಳಿದು ಕೊಂಡಿದ್ದೇನೆ. ಆದರೂಕೂಡ ಇನ್ನು ಮುಂದೆ ಲೆಕ್ಕಾ ಚಾರ ಇಟ್ಟು ನಷ್ಟವಾಗದ ರೀತಿಯಲ್ಲಿ ಹೊಸ ನರ್ಸರಿ ಗಳನ್ನು ಹಾಕಿ ಮತ್ತು ಲಾಭ ಬರತಕ್ಕ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ಎರಡನೆಯದಾಗಿ ಒಂದು ಬಹಳ ಪ್ರಾಮುಖ್ಯ ವಾದ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ತುಮ ಕೂರಿನಲ್ಲಿ ಕೆಲವುಮಟ್ಟಿನ ಲೋಪದೋಷಗಳಿವೆ ಎಂದು ಹೇಳಿದ್ದಾರೆ. ಒಂದುಸಾರಿಯೂ ನಾನು ಹೋಗಿಲ್ಲ. ಅಲ್ಲಿರತಕ್ಕ ಅಲ್ಪಸ್ವಲ್ಪ ನ್ಯೂನತೆ ಏನಿದೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನಮಾಡುತ್ತೇನೆ ಎಂದು ತಿಳಿಸುತ್ತೇನೆ.

ಭದ್ರಾವತಿ ಕಾರ್ಖಾನೆಗೆ ಏನು ರೇಟ್ ಫಿಕ್ಸ್ ಮಾಡಿದ್ದೀರಿ ಎಂದು ಕೇಳಿದರು. ಈ ವಿಷಯದಲ್ಲಿ ಆಗಿಂದಾಗ್ಗೆ ಹಿಂದಿನ ಅಸೆಂಬ್ಲಿಯಲ್ಲೂ ಹೇಳುತ್ತಾ ಇದ್ದರು, ಈಗಲೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಮುಖ್ಯವಾಗಿ ನನಗೆ ಈ ಚರ್ಚೆಯಲ್ಲಿ ಕಂಡದ್ದು ಅರಣ್ಯ ಸಂಪತ್ತಿನಿಂದ ಎಷ್ಟು ಉತ್ಪನ್ನ ಬರುತ್ತಾ ಇದೆ, ಎಷ್ಟು ಪರ್ಸೆಂಟೇಜು ಖರ್ಚುಮಾಡುತ್ತಾ ಇದ್ದಾರೆ ಮತ್ತು ಖರ್ಚುಮಾಡತಕ್ಕ ಹಣ ನಿಜವಾಗಿಯೂಕೂಡ ಮುಂದೆ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಎಷ್ಟುಮಟ್ಟಿಗೆ ಫಲಕಾರಿಯಾಗುತ್ತದೆ ಅಥವಾ ಬೇರೆ ಈ ಕಟ್ಟಡ ಕಟ್ಟುವುದಾಗಲೀ, ಕಾಡಿನಲ್ಲಿರತಕ್ಕ ರಸ್ತೆಗಳನ್ನು ರಿಪೇರಿ ಮಾಡುವುದಾಗಲೀ ಅವು ಎಷ್ಟಾಗಿವೆ ಅಲ್ಲದೆ ಈಗ ಮಾಡತಕ್ಕ ಖರ್ಚು ಏನು, ಅದು ನಿಜವಾಗಿಯೂ ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಾ ಇದೆಯೋ ಮತ್ತು ಕಾಡಿನಲ್ಲಿರತಕ್ಕ ಉತ್ಪನ್ನ ಏನಿದೆ ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗುತ್ತಾ ಇದೆಯೇ, ಆ ಉತ್ಪನ್ನಗಳ ಹೈಕಿ ಸೌದೆ ಮತ್ತು ಟಿಂಬರ್‌ನಿಂದ ಬಂದ ಉತ್ಪನ್ನವೇನು; ಬ್ಯಾಂಬೂ ಯಾವ ರೀತಿಯಲ್ಲಿ ವಿಲೇವಾರಿಯಾಗುತ್ತಾ ಇದೆ ಅದ ರಿಂದ ಸರ್ಕಾರಕ್ಕೆ ಸಾಕಾದಷ್ಟು ಸರಿಯಾದಂಥ ಬೆಲೆ ಬರುತ್ತ ಇದೆಯೇ ಎಂಬ ನಾನಾ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ.

ಮೊದಲನೆ ಪಂಚವಾರ್ಷಿಕ ಯೋಜನೆ, ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಯಾವ ವರ್ಷ ಎಷ್ಟೆಷ್ಟು ಪ್ಲಾಂಟೇಷನ್ ಮಾಡಿದ್ದಾರೆ ಎಂಬ ವಿಷಯ ಕೊಟ್ಟಿದ್ದರೆ ಚೆನ್ನಾಗಿತ್ತು. ನಾವು ಟೀಕೆ ಮಾಡು ವುದಕ್ಕೂ ಕೂಡ ಅವಕಾಶವಿರಲಿಲ್ಲ ಎಂದು ಮಾನ್ಯ ಸದಸ್ಯರು ವ್ಯಕ್ತಪಡಿಸಿದರು. ಮೊದಲನೆಯದಾಗಿ ಶ್ರೀಮಾನ್ ಮಾದಯ್ಯ ಗೌಡರು ಪ್ರಸ್ತಾಪ ಮಾಡಿದ ಹಾಗೆ ಆ ಅಂಕಿಗಳನ್ನು ಕೊಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ನಮ್ಮ 19 ಜಿಲ್ಲೆಗಳಲ್ಲಿ ಎಷ್ಟು ಎಕರೆ ಜಮೀನು ಕಾಡುಪ್ರದೇಶ ಇದೆ, ಅದು ಎಷ್ಟು ಪರ್ಸೆಂಟೇಜ್ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

District	Forest region roughly	Acre	Per centage
Bangalore	,,	2,70,080	13.7
Tumkur	,,	2,17,600	8.3
Kolar	,	2,18,240	10.7
Chitradurga	,,	2,41,922	9.0
Bellary	,,	4,00,000	16.4
Mysore	,,	8,97,920	30.2
Mandya	,,	24,960	2.00
Hassan	,,	1,26,720	7.5
Chickamagalore	,,	3,91,040	22.4
Shimoga	,,	8,63,360	33.7
South Kanara	,,	11,89,120	57.2
Coorg	,,	4,21,120	41.2
Belgaum	,,	4,63,360	14.2
Dharwar	,,	2,81,600	8.3
Bijapur	,,	2,14,400	5.1
North Kanara	,,	20,58,880	81.2
Bidar	,,	55,680	4.0
Raichur	,,	1,74,080	5.0
Gulbarga	,,	1,77,920	4.0

ಒಟ್ಟಿನಲ್ಲಿ ಮೈಸೂರು ಸಂಸ್ಥಾನದಲ್ಲಿ 18.4% ಕಾಡು ಪ್ರದೇಶ ಇದೆ.

ಈಗ 5 ವರ್ಷದ ಹಿಂದೆ ನಡೆದ ಪ್ಲಾಂಟೇಷನ್ ವಿವರ ಗಳನ್ನುಕೊಡುತ್ತೇನೆ.

	Teak wood	Fuel and other materials	Soft wood	Cashwnut
	Acres	Acres	Acres	Acres
1957-58	5,579	10,303	1,421	407
1958-59	5,713	11,956	1,624	1,872
1959-60	7,725	17,979	1,977	3,113
1960-61	7,063	21,709	1,677	2,830
1961-62	8,655	21,901	2,644	4,384

ಇಷ್ಟೇ ಜಮೀನುಗಳಲ್ಲಿ ಹೊಸದಾಗಿ ಮೇಲಿಂದ ಮೇಲೆ ಪ್ಲಾಂಟೇಷನ್ ಹಾಕಿ ಅರಣ್ಯ ಸಂಪತ್ತನ್ನು ವರ್ಷ ವರ್ಷ ಹೆಚ್ಚಿಸಬೇಕೆಂದು ಮಾಡಿದ್ದೇವೆ.

ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಐದು ವರ್ಷಗಳಲ್ಲಿ ಟೀಕ್ ವುಡ್ 52,000 ಎಕರೆ Fuel and other miscellaneouns materials 32,000 ಎಕರೆ, soft wood 12,000 ಎಕರೆ Cashew-nut 18,000 ಎಕರೆ ಇಷ್ಟೇ ಅಲ್ಲದೆ ತಾಲ್ಲೂಕು ಬೋರ್ಡು ಮತ್ತು ಪಂಚಾಯ್ತಿಗಳಲ್ಲಿರತಕ್ಕ ಕೆಲವು ಭಾಗಗಳಲ್ಲಿ ಅವರಿಗೆ ಸ್ವಲ್ಪ ಸಬ್ಸಿಡಿ ಕೊಟ್ಟು form forestry ಗೋಸ್ಕರ 20,000 ಎಕರೆಯಲ್ಲಿ ಅವರ ಕಡೆಯಿಂದ ಮಾಡಿಸಬೇಕೆಂದು ಇದೆ. ಇದು ಅಷ್ಟು ಯಶಸ್ವಿಯಾಗಿ ನಡೆಯುತ್ತಿಲ್ಲ ಎಂದು ನನಗೆ ತಿಳಿದು ಬಂದಿದೆ. ಅನೇಕ ಪ್ರಾಜೆಕ್ಟುಗಳಿಂದಾಗಿ ಈ ಜಮೀನುಗಳ ಮುಳುಗಡೆಯಾಗುತ್ತಾ ಇದೆ. ಮತ್ತು ಇದರಲ್ಲಿ ಜನರನ್ನು ರೀಹ್ಯಾಬಿಟೇಟ್ ಮಾಡುವುದಕ್ಕಾಗಿಯೂ ಸಹ ಜಮೀನು ಕೊಡುತ್ತಾ ಇದ್ದೇವೆ. ಹೊಸದಾಗಿ ಗಿಡಗಳನ್ನು ಬೆಳೆಸಿ ಅರಣ್ಯ ಸಂಪತ್ತನ್ನು ಹೆಚ್ಚಿಸದಿದ್ದರೆ ಅನೇಕ ಮಾನ್ಯ ಸದಸ್ಯರು ಹೇಳಿದಹಾಗೆ ನಮಗೆ ಸಕಾಲದಲ್ಲಿ ಮಳೆ ಬರುವುದಿಲ್ಲ. ಬಿಜಾಪುರದಲ್ಲಿ ಸಕಾಲದಲ್ಲಿ ಮಳೆಬರುವುದಿಲ್ಲ. ಎಲ್ಲಿ ಅರಣ್ಯ ಪ್ರದೇಶ ಮೂರನೆಯ ಒಂದು ಭಾಗವಾದರೂ ಇರುತ್ತದೆಯೋ ಅಲ್ಲಿ ಸಕಾಲದಲ್ಲಿ ಮಳೆಯಾಗುತ್ತದೆ. ಮಳೆಗೂ ಅರಣ್ಯಕ್ಕೂ ನಿಕಟ ಸಂಬಂಧವಿದೆ. ನಾಗಮಂಗಲದಲ್ಲಿ ಹಿಡುವಳಿ ಜಮೀನಿನಲ್ಲಿ ಕೂಡ ಮರಗಿಡಗಳನ್ನು ಜನರು ಬೆಳೆಸುತ್ತಿಲ್ಲ. ನಮಗೆಲ್ಲರಿಗೂ ಗೊತ್ತಿರುವಂತೆ ಹಿಂದಿನ ಕಾಲದಲ್ಲಿ ಬದುಗಳ ಮೇಲೆ ಮನೆಯ ಉಪಯೋಗಕ್ಕೆಬೇಕಾದ ಗಿಡಮರಗಳನ್ನು ಬೆಳೆಸುತ್ತಿದ್ದರು. ಆದರೆ ಈ ಹೊತ್ತು ಯಾರ ಸ್ವಂತ ಜಮೀನಿನಲ್ಲಿಯೂ ಮರಗಳಿಲ್ಲ. ಇಷ್ಟೇ ಅಲ್ಲ, ರಸ್ತೆಗಳ ಪಕ್ಕದಲ್ಲಿರುವ ಮರಗಳಿಗೆ ಬೆಂಕಿ ಹಾಕಿ ಸುಟ್ಟು ತಾನೇ ಬಿದ್ದು ಹೋಯಿತು ಎನ್ನುವ ಜನರಿದ್ದಾರೆ. ಹೀಗಿರುವಾಗ ಕೇವಲ ಅರಣ್ಯ ಇಲಾಖೆ ಮಾತ್ರ ಗಿಡವನ್ನು ಬೆಳೆಸಲು ಹೆಚ್ಚು ಪ್ರೋತ್ಸಾಹ ಕೊಡಬೇಕೆಂದರೆ, ಇಷ್ಟು ಮಾತ್ರ ಸಾಕಾಗುವುದಿಲ್ಲ ; ಸಾರ್ವಜನಿಕರ ಪ್ರೋತ್ಸಾಹ ಮತ್ತು ಸಹಕಾರ ಕೂಡ ಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವನ ಮಹೋತ್ಸವ ?

ಶ್ರೀ ಬಿ. ರಾಚಯ್ಯ.—ಬೇರೆ ಬೇರೆಯವರ ಕೈಯಲ್ಲಿ ವನಮಹೋತ್ಸವ ಮಾಡಿಸುವುದು ಜನರು ಮಾಡರೆಂಬ ಉದ್ದೇಶದಿಂದ. ಅವರು ನೆಟ್ಟು ಹೋಗಿದ್ದಾರೆ ಅವರೇ ಬಂದು ಆ ಗಿಡಕ್ಕೆ ನೀರು ಹಾಕಲಿ ಎನ್ನುವ ಮನೋಭಾವವಿರಬಾರದು, ಇದರಿಂದ ಪ್ರಯೋಜನವಿಲ್ಲ. ಎಲ್ಲರೂ ಏನು ತತ್ವ ಬೋಧನೆ ಮಾಡುತ್ತಿದ್ದೇವೆ, ಅದನ್ನು ನಮ್ಮ ಜೀವನದಲ್ಲಿ ಅಳವಡಿಸುವುದಕ್ಕೆ ಮತ್ತು ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡಿದರೆ, ಇನ್ನೊಬ್ಬರೂ ಅದನ್ನು ಮಾಡುತ್ತಾರೆಂಬ ನಂಬಿಕೆಯಿರುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಾಲು ಮರಗಳನ್ನು ಜನರು ಹಾಕಿದರೆ ಅದು ಸರ್ಕಾರಕ್ಕೆ ಸೇರಿದ್ದೆಂದು ತಹಸೀಲ್ದಾರರು ಹೇಳುತ್ತಾರೆ. ಜನರು ಹಾಕಿದ ಮರಗಳ ಮೇಲೆ ಅವರಿಗೇ ಹಕ್ಕನ್ನು ಕೊಟ್ಟರೆ ಅನುಕೂಲವಾಗುತ್ತದೆ. ಅದು ಬಿಟ್ಟು ಅವರು ಬಂದು ಹಾಕಿದರು, ಇವರು ಬಂದು ಹಾಕಿದರು ಎಂದರೇನು ಪ್ರಯೋಜನ ?

ಶ್ರೀ ಬಿ. ರಾಚಯ್ಯ.—ಸಾಲು ಮರಗಳೆಂದರೆ, ರಸ್ತೆ ಪಕ್ಕದ ಮರಗಳ ಸ್ವಾಧೀನವನ್ನು ಪಬ್ಲಿಕ್ ವರ್ಕ್ಸ್ ಇಲಾಖೆ ಹೊಂದಿದೆ. ಹಿಂದೆ ಇದು ರೆವಿನ್ಯೂ ಇಲಾಖೆಯಲ್ಲಿತ್ತು. ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಹನುಮಂತಯ್ಯನವರು ಮೈಸೂರು–ಬೆಂಗಳೂರು ರಸ್ತೆಯಲ್ಲಿ ಹುಣಿಸೇ ಮರಗಳನ್ನು ಮತ್ತು ಇತರ ಮರಗಳನ್ನೂ ಜನರು ನೆಟ್ಟ ಪಕ್ಷದಲ್ಲಿ, ಅಂಥ ಪಕ್ಕದಲ್ಲಿರುವ ಜನರೇ ಆ ಮರಗಳು ಬಿಡುವ ಫಸಲನ್ನು ತೆಗೆದುಕೊಳ್ಳುವಂತೆ ಏರ್ಪಾಡು ಮಾಡಿದರು. ಅದು ಒಳ್ಳೆಯದೇನೋ ಎನಿಸುತ್ತದೆ. ಕೆಲವು ಭಾಗಗಳಲ್ಲಿ ಅಂಥ ಪದ್ಧತಿಯನ್ನು ಜಾರಿಗೆ ಕೊಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮರದ ಮೇಲಿನ ಹಕ್ಕು ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿರಲಿ, ಆದರೆ ಜನ ಆ ಮರದ ಫಸಲನ್ನೇಕೆ ತೆಗೆದುಕೊಳ್ಳಬಾರದು ?

ಶ್ರೀ ಬಿ. ರಾಚಯ್ಯ.—ಮರಗಳು ಎಲ್ಲಿಯೇ ಇರಲಿ, ಅದು ಅರಣ್ಯ ಸಂಪತ್ತಿಗೆ ಸಂಬಂಧಪಟ್ಟದ್ದು. ಅರಣ್ಯ ಇಲಾಖೆಯಲ್ಲಿರುವಂತೆ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಎಸ್. ಎಂ. ಗುರಡ್ಡಿ (ಮುದ್ದೇಬಿಹಾಳ್).—ಬಿಜಾಪುರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಬೇವಿನಗಿಡ ಚೆನ್ನಾಗಿ ಬೆಳೆಯುತ್ತದೆ. ಅಲ್ಲಿ ಮಳೆಯ ಅಭಾವವಿದೆ. ಆದಕಾರಣ ಈ ಗಿಡಗಳನ್ನು ಬೆಳೆಯುವುದಕ್ಕೆ ಸಬ್ಸಿಡಿ ಕೊಟ್ಟರೆ ಅದರಿಂದ ರೈತರಿಗೆ ಅನುಕೂಲವಾಗುತ್ತದೆ. ಈ ಬಗ್ಗೆ ಒಂದು ಯೋಜನೆಯನ್ನು ಮಾಡಲು ಸಾಧ್ಯವಿದೆಯೇ ?

ಶ್ರೀ ಬಿ. ರಾಚಯ್ಯ.—ತಾಲ್ಲೂಕು ಬೋರ್ಡಿನವರು ಇಂಥ ಸಬ್ಸಿಡಿ ಕೊಡುವುದಕ್ಕೆ ಅಧಿಕಾರವಿದೆ. ಅವರು ಅದನ್ನು ಪ್ರಯೋಗಿಸಿಕೊಳ್ಳಬಹುದು.

ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಬೀದರ್ ಜಿಲ್ಲೆಯ ಪಕ್ಕದಲ್ಲಿ ಆಂಧ್ರ ಸರ್ಕಾರದವರು ಬೇಕಾದಷ್ಟು ಅರಣ್ಯವನ್ನು ಬೆಳೆಸಿದ್ದಾರೆ, ನಮ್ಮ ಸರ್ಕಾರ ಏನುಮಾಡುತ್ತದೆ ?

ಶ್ರೀ ಬಿ. ರಾಚಯ್ಯ.—ಪ್ರತಿ ಜಿಲ್ಲೆಯಲ್ಲಿಯೂ, ಇಂಥಿಂಥಾ ಜಿಲ್ಲೆಯಲ್ಲಿ ಇಷ್ಟಿಷ್ಟು ಪ್ರದೇಶವನ್ನು ತೆಗೆದುಕೊಂಡು ಕಾಡು ಬೆಳೆಸಬೇಕೆಂಬ ಯೋಜನೆಯಿದೆ. ಬಿದರ್ ಜಿಲ್ಲೆಯಲ್ಲಿಯೂ ಹಾಗೆಯೇ ಮಾಡಬೇಕೆಂದಿದೆ. ಆದರೆ ನಮಗೆ ಹಣಬೇಕು. ಈಗ ಕೇಳುತ್ತಿರುವ ಹಣದಲ್ಲಿ ಸಿಬ್ಬಂದಿಗೆ ಕೇವಲ 16 ಪರ್‌ಸೆಂಟ್ ಖರ್ಚು ಮಾಡುತ್ತಿದ್ದೇವೆ. ಉಳಿದುದನ್ನು ಕಾಡುಗಳನ್ನು ಬೆಳೆಸುವುದಕ್ಕೆ ಉಪಯೋಗಿಸುತ್ತೇವೆ. ಊರುಗಳಲ್ಲಿರುವವರು ಅರಣ್ಯ ಪ್ರದೇಶಕ್ಕೆ ಹೋಗುವುದಿಲ್ಲ. ತಮ್ಮ ಮಕ್ಕಳಿಗೆ ಶಾಲೆಗಳುಬೇಕು, ಆಸ್ಪತ್ರೆ ಬೇಕು, ಇತರ ಅನುಕೂಲಬೇಕೆಂದು ಹೇಳಿ ಕಾಡಿಗೆ ಹೋಗಲು ಹಿಂಜರಿಯುತ್ತಾರೆ. ದಾಂಡೇಲಿ ಇಂಥ ಪ್ರದೇಶಕ್ಕೆ ಹಾಕಿದರೆ special allowance ಬೇಕೆಂದು ಕೇಳುತ್ತಾರೆ ಫಾರೆಸ್ಟ್ ಇಲಾಖೆಯವರು. ಅಂಥ ಪ್ರದೇಶದಲ್ಲಿ ಮೂರು ಮತ್ತು ನಾಲ್ಕನೆಯ ತರಗತಿಯ ನೌಕರರಿಗೆ ಮನೆಗಳಿರುವುದಿಲ್ಲ, ಅಂಥವರಿಗಾಗಿ ಮನೆಗಳನ್ನು ಕಟ್ಟಿಸಲು ಹೆಚ್ಚು ಹಣವನ್ನು ಕೇಳುತ್ತಿದ್ದೇವೆ. ಅವರಿಗೆ ಸರಿಯಾದ ಸೌಲಭ್ಯಗಳನ್ನು ಕೊಟ್ಟು, ಕಾಡುಗಳನ್ನು ಸರಿಯಾಗಿ ನೋಡಿಕೊಳ್ಳಿ ಎಂದು ಕೇಳುವುದು ಧರ್ಮವಲ್ಲವೆ ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಅವರಿಗೆ ಮನೆ ಕಟ್ಟಿಸುವುದು ತಪ್ಪೆಂದು ನಾವು ಹೇಳಲಿಲ್ಲ, Afforestationಗೆ ಹೆಚ್ಚು ಹಣವನ್ನು ವಿನಿಯೋಗಿಸಿ ಕೆಲಸಮಾಡಿ ಎಂದು ನಾವು ಹೇಳುವುದು.

ಶ್ರೀ ಬಿ. ರಾಚಯ್ಯ.—Afforestationಗೆ ಇಂಡಿಯಾ ಸರ್ಕಾರದಿಂದ ಅರ್ಧ ಹಣಬರುತ್ತದೆ. ಅಲ್ಲಿನ ಹಣವನ್ನು ಅದಕ್ಕೆ ಉಪಯೋಗಿಸಿಕೊಂಡು ಇಲ್ಲಿನ ಹಣದಲ್ಲಿ ಮನೆಗಳನ್ನು ಕಟ್ಟಿಸಲು ಉಪಯೋಗ ಮಾಡುತ್ತಿದ್ದೇವೆ. Afforesstationಗೆ ಎಕರೆಗೆ 100–125 ರೂಪಾಯಿ ಖರ್ಚಾಗುತ್ತದೆ. ತೇಗದ ಮರ ಹತ್ತು ವರ್ಷವಾದ ಮೇಲೆ pruning ಮಾಡುವುದರಲ್ಲಿ ಉತ್ಪತ್ತಿ ಬರುತ್ತದೆ. ಅರಣ್ಯ ಇಲಾಖೆಯಲ್ಲಿ ಏನು ಖರ್ಚು ಮಾಡುತ್ತಿದ್ದೇವೋ ಅದರ ಫಲ ಬೇಗ ಕಾಣುವುದಿಲ್ಲ. ಅದೇ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಖರ್ಚು ಮಾಡಿದರೆ ಕಟ್ಟಡ ಕಣ್ಣಿಗೆ ಬೇಗ ಕಾಣುತ್ತದೆ. ಅರಣ್ಯ ಇಲಾಖೆಯಲ್ಲಿ ಯೂಕಲಿಪ್ಟಸ್, ಕ್ಯಾಸುರೀನಾ ಗಿಡಗಳನ್ನು ಹಾಕಿದರೆ ಅವು ಬೆಳೆಯಲು ಹತ್ತು ವರ್ಷ ಹಿಡಿಯುತ್ತದೆ. ಹಾಗೆಯೇ ತೇಗ ದೊಡ್ಡ ಮರವಾಗಲು 50 ವರ್ಷ ಹಿಡಿಯುತ್ತದೆ. ಆದುದರಿಂದ ಅರಣ್ಯ ಇಲಾಖೆಯಲ್ಲಿ ಈ ಹೊತ್ತು ಖರ್ಚು ಮಾಡುವುದು ಹೆಚ್ಚೆಂದು ಹೇಳುವ ಹಾಗಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಮುಖ್ಯವಾಗಿ ಉತ್ಪತ್ತಿ ಬರುವುದು ಗಂಧದ ಮರದಿಂದ ; ಅದನ್ನು ಎಷ್ಟು ಬೆಳೆಸಿದ್ದೀರಿ ? ಗಂಧದ ಎಣ್ಣೆ ಕಾರ್ಖಾನೆಗೆ ಗಂಧದ ಮರಬೇಕು...

ಶ್ರೀ ಬಿ. ರಾಚಯ್ಯ.—ಕೆಲವು ಕಡೆ ನರ್ಸರಿಗಳನ್ನಿಟ್ಟುಕೊಂಡು ಗಂಧದ ಮರ ಬೆಳೆಸುವ ಆವಶ್ಯಕತೆ ಕಂಡು ಬಂದಿದೆ. ಈ ಮರಕ್ಕೆ 'ಸ್ಪೈಕ್‌ಡಿಸೀಸ್' ಬಂದು ಒಣಗುತ್ತಿರುತ್ತದೆ. ಅದ ಕಾರಣ ಇಂಡಿಯಾ ಸರ್ಕಾರದವರು ಸಂಶೋಧನೆ ಮಾಡುತ್ತಿದ್ದಾರೆ. ಆದರೂ ಇದರ ಕಾರಣ ಮತ್ತು ನಿವಾರಣೆ ಕಂಡು ಹಿಡಿಯುವುದು ಸಾಧ್ಯವಾಗಿಲ್ಲ. ಅಲ್ಲದೆ ಇದು ತಾನಾಗಿಯೇ ಸ್ವತಂತ್ರವಾಗಿ ಬೆಳೆಯುವ ಗಿಡವಲ್ಲ. ಇದಕ್ಕೆ ಇನ್ನೊಂದು ಗಿಡದ ಆಶ್ರಯಬೇಕು. Parasite ಎಂದರೆ, ಇನ್ನೊಂದು ಗಿಡದ ಆಶ್ರಯದಲ್ಲಿ ಬೆಳೆಯುವುದು. ಆದುದರಿಂದ ಬೇರೆ ಗಿಡಗಳಿರುವ ಕಡೆ ಇದರ ಬೀಜಗಳನ್ನು ಚೆಲ್ಲಬೇಕಾಗಿದೆ.

5-30 P.M.

ಗಂಧದ ಮರದ ಎಕ್ಸ್‌ಪ್ಲಾಯಿಟೇಷನ್ ವಿಚಾರ ಹುಚ್ಚೇಗೌಡರು ಪ್ರಸ್ತಾಪ ಮಾಡಿದರು. ಆ ವಿಷಯದಲ್ಲಿ ಒಂದೆರಡು ಅಂಶಗಳನ್ನು ತಿಳಿಸುತ್ತೇನೆ. ಈಗ ಎರಡು ಗಂಧದ ಎಣ್ಣೆಯ ಕಾರ್ಖಾನೆಗಳಿವೆ. ಅವಕ್ಕೆ ವರ್ಷವೊಂದಕ್ಕೆ ಸರಬರಾಯಿ ಮಾಡುತ್ತಿರುವ ಗಂಧದ ಮರವೆಷ್ಟೆಂಬುದನ್ನು ತಿಳಿಸುತ್ತೇನೆ. 1957-58ರಲ್ಲಿ ಸುಮಾರು 1,882 ಟನ್ 1958-59ರಲ್ಲಿ 1,774ಟನ್, 1959-60ರಲ್ಲಿ 1875 ಟನ್, 1960-61ರಲ್ಲಿ 1,819ಟನ್ ಮತ್ತು 1961-62ರಲ್ಲಿ 2,116ಟನ್ ಸರಬರಾಯಿ ಮಾಡಿದೆ. ಒಂದು ಟನ್ನಿಗೆ 7,100 ರೂಪಾಯಿಗಳದರ ನಿಗದಿಮಾಡಿ 1964ರವರೆಗೆ ಅದು ಜಾರಿಯಲ್ಲಿರುವಂತೆ ಮಾಡಿದೆ. ಇದು ಅರಣ್ಯದಿಂದ ಗಂಧದ ಕೋಠಿಗೆ ಕೊಡುತ್ತಿರುವ ಗಂಧದ ಮರದ ಅಂಕಿಅಂಶ. ದರ ಹೆಚ್ಚಿಸಲು ಅವಕಾಶವಿತ್ತು, ಹೆಚ್ಚಿಸಿದ್ದರೆ ಲಾಭ ಬರುತ್ತಿತ್ತು. ಆದರೆ ಎಲ್ಲವೂ ಸರ್ಕಾರದಿಂದಲೇ ನಡೆಯುತ್ತಿರುವುದರಿಂದ ಎಲ್ಲಿ ಲಾಭ ಬಂದರೂ ಒಂದೇ ಎಂದು ಸುಮ್ಮನಿದ್ದೆವು.

ಹಾಗೆಯೇ ಪ್ರತಿವರ್ಷ ವಿದ್ಯುಚ್ಛಕ್ತಿ ಇಲಾಖೆಗೆ ಎಷ್ಟು ಪೋಲ್ಸ್ ಸರಬರಾಯಿ ಮಾಡಿದೆ, ಉತ್ಪತ್ತಿಯೇನು ಎಂಬುದನ್ನು ಹೇಳುತ್ತೇನೆ 1957-58ರಲ್ಲಿ 10,113 1958-59ರಲ್ಲಿ 11,117, 1959-60ರಲ್ಲಿ 11,384 1960-61ರಲ್ಲಿ 18,919 ಮತ್ತು 1961-62ರಲ್ಲಿ 24,248 ಕಂಬಗಳನ್ನು ಒದಗಿಸಲಾಗಿದೆ. ಬಹುಶಃ ಈ ವರ್ಷ ಸುಮಾರು 40,000 ಕಂಬಗಳನ್ನು ಒದಗಿಸಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಬಲ್ಗಿ ಪೋಲ್ಸ್ ಪ್ಲಾಂಟೇಷನ್ ಎಲ್ಲಿದೆ ?

ಶ್ರೀ ಬಿ. ರಾಚಯ್ಯ.—ನಾರ್ತ್ ಕೆನರಾ ಜಿಲ್ಲೆ ಮತ್ತು ದಕ್ಷಿಣದಲ್ಲಿ ಹೆಚ್ಚಾಗಿದೆ. ಟೀಕ್‌ವುಡ್ಡನ್ನು ಕೂಡ ಕಂಬಗಳಿಗೆ ಉಪಯೋಗಿಸುತ್ತಿದ್ದಾರೆ. ಈ ದಿವಸ ನಮ್ಮಲ್ಲಿರುವ ಕಂಬಗಳನ್ನು ವಿದ್ಯುಚ್ಛಕ್ತಿ ಇಲಾಖೆ ತೆಗೆದುಕೊಂಡಿಲ್ಲ. ಅವರು ಕೇಳುವುದಕ್ಕಿಂತ ಹೆಚ್ಚಾಗಿ ನಾವು ಒದಗಿಸಿದ್ದೇವೆ. ಕೊಡಗು, ಬೆಳಗಾವ, ಶಿವಮೊಗ್ಗ ಸರ್ಕಲ್‌ಗಳಲ್ಲಿ ಎಷ್ಟು ಬೇಕೆಂದು ಕೇಳಿ 5-6 ಸಾವಿರ ಕಂಬಗಳನ್ನು ದಾಸ್ತಾನಿಟ್ಟಿದ್ದೇವೆ. ಎಷ್ಟು ಕೇಳಿದರೂ ಕೊಡಲು ನಾವು ತಯಾರಿದ್ದೇವೆ.

Sri K. LAKKAPPA (Hebbur).—What are the steps taken with respect to biological research and preservation of wild animals ?

Sri B. RACHAIAH.—In which aspect ? Research can be conducted in several aspects. If my friend mentions the particular aspect, I may be able to give him the answer. There are several researches conducted on sandalwood trees and tapioca trees. Research is being conducted at the Research Laboratory at Bangalore. We have not been able to find out the causes of several diseases. Recently when I had been to Dandeli, I found several leaves eaten away by flies and that disease has not been diagnosed. We require a helicopter to spray all the trees.

Sri C. J. MUCKANNAPPA.—You have not said anything about the smuggling of sandal at Sandur.

ಶ್ರೀ ಬಿ. ರಾಚಯ್ಯ.—ಕಾಡಿನಲ್ಲಿ ಕಳ್ಳತನವಾಗುವ ಮರಗಳ ವಿಷಯದಲ್ಲಿ ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ. ಪಟ್ಟಣಗಳಲ್ಲಿ ಬೇಕಾದಷ್ಟು ಪೋಲೀಸಿನವರಿರುವಾಗಲೇ ಕಳ್ಳತನವಾಗುತ್ತಿದೆ. ಹಾಗಿರುವಾಗ ನಾಲ್ಕಾರು ಗಾರ್ಡುಗಳು, ಇಬ್ಬರು ಆಫೀಸರುಗಳು ಇರುವ ಕಾಡಿನಲ್ಲಿ ಕಳುವಾಗುವುದು ಅಷ್ಟೇನೂ ದೊಡ್ಡದಲ್ಲ. ಒಂದು ಮಾತ್ರ ಹೇಳುತ್ತೇನೆ. ಆಸೆಯೆಂಬುದು ಒಂದು ಮಿತಿಯಲ್ಲಿದ್ದರೆ ಸತ್ಯವಂತರನ್ನು ದೊಡ್ಡವರು, ಸಣ್ಣವರು ಮುಂತಾಗಿ ಎಲ್ಲ ನೌಕರರಲ್ಲೂ ಕಾಣಬಹುದು ನಿಷ್ಠೆಯಿಂದ ಕೆಲಸ ಮಾಡಬೇಕೆಂಬುದು ಬಡವರಲ್ಲೂ, ಐಶ್ವರ್ಯವಂತರಲ್ಲೂ ಇರಬೇಕು. ಸತ್ಯವಂತರು ಎಲ್ಲ ವರ್ಗಗಳಲ್ಲೂ ಕೆಲವರಿದ್ದಾರೆ. ಇಲಾಖೆಯಲ್ಲಿರುವ ಜನರಿಗೆ ತೃಪ್ತಿಕರವಾಗಿ ಸಂಬಳ ಸಾರಿಗೆ ನೀಡಿ, ಸೆಕ್ಯೂರಿಟಿ ಆಫ್ ಸರ್ವಿಸ್ ದೊರಕಿಸಿಕೊಟ್ಟರೆ ಆಗ ಎಲ್ಲವೂ ಸರಿಹೋಗಬಹುದು, ಹೆಚ್ಚು ಅವರ ಕೆಲಸದಲ್ಲಿ ಕೈಹಾಕದೆ, ಸೇಫ್ಟಿ ಸೆಕ್ಯೂರಿಟಿ ಕೊಡಬೇಕು, ಅದು ನಮ್ಮ ಕರ್ತವ್ಯ ಎಂದು ಆಲೋಚಿಸುತ್ತಿದ್ದೇವೆ. ಇದಾದ ಮೇಲೆ ಪೂರ್ಣ ಜವಾಬ್ದಾರಿಯಿಂದ ಅಧಿಕಾರಗಳು ಅಧಿಕಾರ ಚಲಾಯಿಸಬಹುದು, ಹಾಗೆ ಮಾಡದಿದ್ದರೆ

ಆಗ ಏಕೆ ಮಾಡಲಿಲ್ಲವೆಂದು ಕೇಳಬಹುದು. ಈಗಿರುವ ಹಾಗೆ ನ್ಯಾಯಬದ್ಧವಾಗಿ ಕಾನೂನುಬದ್ಧವಾಗಿ ಅಧಿಕಾರ ಚಲಾಯಿಸಿದರೆ ಮಂತ್ರಿಗಳಿಗೆ ದೂರು ಹೇಳಬಹುದು, ಅದರಿಂದ ತಮಗೆ ತೊಂದರೆಯಾಗಬಹುದು ಎಂಬ ಶಂಕೆ ಸಣ್ಣಪುಟ್ಟ ನೌಕರರಲ್ಲುಂಟಾಗುತ್ತದೆ. ಇದಕ್ಕೆ ಅವಕಾಶವಿರಬಾರದು. ಕಾನೂನುಬದ್ಧವಾಗಿ ದೇವರು ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಿದರೆ ಏನೂ ತೊಂದರೆಯಾಗುವುದಿಲ್ಲ, ಪ್ರೋತ್ಸಾಹ ದೊರೆಯುವುದು ಎಂಬ ಆಶ್ವಾಸನೆ ಸರ್ಕಾರದ ಮಟ್ಟದಲ್ಲಿ ಸಿಕ್ಕಬೇಕು. ಇದಕ್ಕೆ ಅವಕಾಶ ಮಾಡಲು ಪ್ರಯತ್ನ ನಡೆದಿದೆ. ಇಷ್ಟೆಲ್ಲಾ ಸೌಲಭ್ಯ ಕೊಟ್ಟಮೇಲೆ ವಹಿಸಿರುವ ಕೆಲಸವನ್ನು ಸರಿಯಾಗಿ ಮಾಡಲೇಬೇಕು. ಆಮೇಲೆ ಪ್ರಭಾವ ಬೀರಿ ವರ್ಗ ಮಾಡಿಸಿಕೊಳ್ಳುವುದು ಮುಂತಾದಕ್ಕೆ ಅವಕಾಶವಿರುವುದಿಲ್ಲ. ಯಾರು ಚೆನ್ನಾಗಿ ಕೆಲಸ ಮಾಡುವರೋ, ಆ ಫಾರೆಸ್ಟ್ ಸ್ಟೇಷನ್ ಮುಂತಾದ ಕೆಲಸವನ್ನು ಗಾರ್ಡ್ ಆಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಲಿ ಯಾರು ಚೆನ್ನಾಗಿ ನಿರ್ವಹಿಸುವರೋ ಅವರ ಸರ್ವಿಸ್ ರೆಕಗ್ನೈಜ್ ಮಾಡಬೇಕು, ಒಳ್ಳೆಯ ಕೆಲಸ ಮಾಡುವವರಿಗೆ ಇಲಾಖೆಯಿಂದ ಏನಾದರೂ ಸಹಾಯ ಮಾಡಬೇಕು ಎಂಬ ಯೋಚನೆಯಿದೆ. ಕೆಲಸ ಮಾಡುವವರಿಗೆ ಪುರಸ್ಕಾರ ಯಾವ ದಿವಸ ದೊರೆಯುವುದೋ ಆಗ ಅವರ ಮನಸ್ಸಿಗೆ ಶಾಂತಿಯಾಗಿ ಅವರು ತಮ್ಮ ಕೆಲಸವನ್ನು ಸರಿಯಾಗಿ ಮಾಡುವ ಸನ್ನಿವೇಶವುಂಟಾಗುತ್ತದೆ. ನಿಮಗೆಲ್ಲಾ ಇದು ಗೊತ್ತಿರತಕ್ಕ ವಿಷಯ. ಈ ಕೆಲಸವನ್ನು ಮಾಡುವುದಕ್ಕೆ ತಮ್ಮೆಲ್ಲರ ಸಹಕಾರ ಬೇಕು. ಈಗ ಕಳೆದ ಎರಡು ತಿಂಗಳ ಹಿಂದೆ ನಾನು ಈ ಬಗ್ಗೆ ವಿಷಯಗಳ ಸಂಗ್ರಹಣೆ ನಡೆಸಿದ್ದೇನೆ. ಐದು ಕಡೆ Running squad ಇಟ್ಟಿದ್ದೇವೆ. ಯಾವ ಹೊತ್ತು ಬೇಕೋ ಆಗ ಪೋಲೀಸರ ಸಹಕಾರ ಪಡೆದು ಈ ಕಳ್ಳತನಗಳನ್ನು ಕಂಡುಹಿಡಿಯುವುದಕ್ಕೆ ಏರ್ಪಾಡು ಮಾಡಿದ್ದೇವೆ. ಇದರಿಂದಾಗಿ 3-3½ ಲಕ್ಷ ರೂಪಾಯಿಗಳ ಮರಗಳು ಕಳ್ಳತನವಾಗುತ್ತಿರುವುದನ್ನು ಹಿಡಿದಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗಂಧದ ಮರದ ಕಳ್ಳತನದ ವಿಚಾರವನ್ನು ಹೇಳಿ.

ಶ್ರೀ ಬಿ. ರಾಚಯ್ಯ.—ಈಗ ನೀವು ಸ್ಪೆಷಲ್ ಸ್ಕ್ವಾಡ್ ಮಾಡುವುದಕ್ಕೆ ಕಾರಣವೇನಿತ್ತು ? ಇರುವವರಿಂದಲೇ ಏಕೆ ಮಾಡಿಸಕೂಡದಾಗಿತ್ತೆಂದು ಕೇಳಬಹುದು. ಈ ಏರ್ಪಾಡಿನಿಂದಾಗಿ ಕಳ್ಳತನ ಮಾಡಿದವರು ಹೇಗಾದರೂ ಸಿಕ್ಕಿಹಾಕುಕೊಳ್ಳುತ್ತಾರೆ ಎಂಬ ಭೀತಿ ಹುಟ್ಟಿಸಲು ಸಾಧ್ಯವಾಗಿದೆ. Surprise visits ಕೊಡೋಣದರಿಂದಾಗಿ ಈ ಸ್ಕ್ವಾಡು ಹೆಚ್ಚು ಪರಿಣಾಮಕಾರಿಯಾಗಿದೆಯೆಂದು ಹೇಳಬಯಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಂಡೂರಿನಲ್ಲಿ ತಾವು ಮುಟ್ಟುಗೋಲು ಹಾಕಿಕೊಂಡ ಗಂಧದ ಕಟ್ಟಿಗೆ ಏನಾಯಿತು ?

ಶ್ರೀ ಬಿ. ರಾಚಯ್ಯ.—ಅದರ ವಿಷಯದಲ್ಲಿ ಕೇಸ್ ದಾಖಲು ಮಾಡಿರುವುದರಿಂದ ನಾನು ಹೇಳಿದರೆ sub-judice ಆಗುತ್ತದೆಂದು ತಿಳಿದು ಏನೂ ಹೇಳಿಲ್ಲ ಅಷ್ಟೆ. ತಾವು ಯಾರು ಯಾರ ಹೆಸರನ್ನು ಹೇಳಿದರೋ ಅವರಿಗೇ ಒಂದು ಕಾನೂನು, ಮಿಕ್ಕವರಿಗೇ ಒಂದು ಕಾನೂನು ಎಂದು ಮಾಡಿಲ್ಲ. ಎಲ್ಲರ ವಿಷಯದಲ್ಲಿಯೂ ಒಂದೇ ರೀತಿ ವರ್ತಿಸಬೇಕೆಂದು ಈ ಸರ್ಕಾರ ಧೈರ್ಯದಿಂದ ನಡೆಯುತ್ತದೆಂದು ನಾನು ನಿಮಗೆ ಭರವಸೆ ಕೊಡಬಲ್ಲೆ. ನೀವು ಹೇಳಿದವರ ವಿಷಯದಲ್ಲಿ ಕೇಸುಗಳನ್ನು ನಡೆಸುತ್ತಿದ್ದೇವೆ. ಅದರ ಬಗ್ಗೆ ದಾಖಲೆಗಳನ್ನು ಮಾತ್ರ ಈಗ ಕೊಡಲಾಗಿದೆ. ವಿಚಾರಣೆಗಳು ನಾನಾ ಹಂತಗಳಲ್ಲಿವೆ. ಯಾರನ್ನೂ freeಯಾಗಿ ಬಿಟ್ಟಿಲ್ಲ. ಮಿಕ್ಕಭಾಗದಲ್ಲಿ, ಯಾವ ಯಾವ ಭಾಗ ಸರ್ಕಾರಕ್ಕೆ ಸೇರಿದೆಯೋ ಅಲ್ಲಿರತಕ್ಕ ಮರಗಳನ್ನೆಲ್ಲಾ—ಗಂಧದ ಮರವೇ ಆಗಲಿ ಬೇರೆ ಮರವೇ ಆಗಲಿ ಅದನ್ನು ಸರ್ಕಾರ ಕಾಪಾಡುತ್ತದೆ. ಅದನ್ನು ಕಾಪಾಡುವವರಿಗೆ ಬೇಕಾದ ರಕ್ಷಣೆಯನ್ನು ಕೂಡ ಕೊಟ್ಟಿದೆ. ಯಾವ ಯಾವುದಕ್ಕೆ ನೇರವಾಗಿ ಸರ್ಕಾರ ಪ್ರವೇಶ ಮಾಡುವುದಕ್ಕೆ ಸಾಧ್ಯವಿಲ್ಲವೋ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದೊಡ್ಡಣ್ಣನವರ ವಿಚಾರ ಏನಾಯಿತು ? ಅವರ ವಿಚಾರದಲ್ಲಿ ಈ ಸಭೆಯಲ್ಲಿ ವಿಪುಲವಾದ ಚರ್ಚೆಯಾಗಿದೆ.

ಶ್ರೀ ಬಿ. ರಾಚಯ್ಯ.—ಆ ಕಂಟ್ರಾಕ್ಟು ಮುಗಿದಿದೆ. ಇನ್ನು ಹೊಸದಾಗಿ ಬೇರೆ ಕಂಟ್ರಾಕ್ಟ್ ಅವರಿಗೆ ಕೊಡುತ್ತಿಲ್ಲ. ಇದಲ್ಲದೆ, ಆವರಿನ್ನೀಗ ಇನ್ನೇನು ಮಾಡಲು ಸಾಧ್ಯ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸರ್ಕಾರದವರು ಇಷ್ಟು ನಿಸ್ಸಹಾಯಕತೆ ತೋರಿಸಿದರೆ ಏನು ಹೇಳುವುದು ?

Sri C. J. MUCKANNAPPA.—There was a Special Officer appointed at the instance of the Government of India. We want to know what has happened to that enquiry ? What is the security we can expect at the hands of Government at this rate ? The matter is fishy. This is one of the matters on which the Jatti Ministry was asked to resign.

Sri B. D. JATTI.—Absolutely false. The Hon'ble Member should withdraw those words. At every point he intervenes in the debate.

Mr. DEPUTY SPEAKER.—I request the Hon'ble Member Sri Muckannappa not to interfere too often.

Sri C. J. MUCKANNAPPA.—The Prime Minister of India wanted that matter to be enquired into. So, I want to know what has happened to that enquiry. I do not want to insult anyone or insinuate......

Mr. DEPUTY SPEAKER.—When I am on my legs the Hon'ble Member should not address the House. Stray interference may be allowed.

Sri C. J. MUCKANNAPPA.—I have raised three points and I wanted information on them.

Mr. DEPUTY SPEAKER.—The Hon'ble Member should not rise up too often and interfere with the business of the House.

ಶ್ರೀ ಬಿ. ರಾಚಯ್ಯ.—ಮಾನ್ಯ ಮುಕ್ಕಣ್ಣಪ್ಪನವರಿಗೆ ಈ ವಿಷಯದಲ್ಲಿ ಆಗಲೇ ಹೇಳಿದ್ದೇನೆ. ಹಿಂದೆ ಇದ್ದ ಕಂಟ್ರಾಕ್ಟ್ ಮುಗಿದುಹೋಗಿದೆ. ಮತ್ತೆ ಅವರಿಗೆ ಕೊಟ್ಟಿಲ್ಲ. ಇಷ್ಟಕ್ಕೆ ತೃಪ್ತಿಪಟ್ಟುಕೊಳ್ಳುತ್ತಾರೆ, ಉದ್ರೇಕಗೊಳ್ಳುವುದಿಲ್ಲವೆಂದು ನಂಬಿದ್ದೇನೆ.

ಕಾಗದದ ವಿಚಾರ ಮಾನ್ಯ ಸದಸ್ಯರು ಕೇಳಿದರು. ಒಂದು ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲು, ಇನ್ನೊಂದು ಮೈಸೂರು ಪೇಪರ್ ಮಿಲ್ಲು—ಇವೆರಡರ ವಿಷಯವಾಗಿ ಪ್ರಸ್ತಾಪ ಮಾಡಿದ್ದಾರೆ. ಯಾವ ದರದಲ್ಲ ಅವರಿಗೆ ಮರ ಕೊಟ್ಟಿದೆ, ಎಷ್ಟು ಹಣ ಬರುತ್ತಿದೆಯೆಂದು ಕೇಳಿದ್ದಾರೆ. ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲಿಗೆ 97,720 ಟನ್‌ಗಳಷ್ಟು ಬೊಂಬನ್ನು ಕೊಡಬೇಕೆಂದು ಆಗಿದ್ದು ಬೊಂಬಾಯಿ ಸರ್ಕಾರದವರು ಒಂದು ಒಪ್ಪಂದ ಮಾಡಿಕೊಂಡಿರುವುದರಿಂದ ಅದರಂತೆ ನಡೆಯುತ್ತಿದೆ. ಮೈಸೂರು ಪೇಪರ್ ಮಿಲ್ಲಿಗೆ 18,113 ಟನ್ ಕೊಡಬೇಕೆಂದಿದೆ. ಅಗ್ರಿಮೆಂಟಿನ ಪ್ರಕಾರ ಮೈಸೂರು ಪೇಪರ್‌ಮಿಲ್ಲಿಗೆ ಏಳು ರೂಪಾಯಿ 93 ನಯೆಪೈ.ಯಂತೆ ಕೊಡಬೇಕೆಂದಿದೆ. ಈಚೆಗೆ 23ನೇ ಫೆಬ್ರುವರಿ 1963ರಲ್ಲಿ ಇದು ರಿವೈಸ್ ಆಗಿ ಹತ್ತು ರೂಪಾಯಿಗಳಂತೆ ಕೊಡುತ್ತಿದ್ದೇವೆ. ಬೊಂಬಾಯಿ ಕರ್ನಾಟಕದವರು ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲಿಗೆ ಕೊಟ್ಟಿರುವುದು ಮೂರು ರೂಪಾಯಿ ಹನ್ನೆರಡು ನಯೆಪೈಸೆಯಂತೆ. ಒಪ್ಪಂದದ ಕಾಲ ಇನ್ನೂ ನಡೆಯುತ್ತಿದೆ. ಈಗ ಇನ್ನೂ ಹೆಚ್ಚಿಗೆ ಬೊಂಬು ಬೇಕೆಂದು ಅವರು ನಮ್ಮನ್ನು ಕೇಳುತ್ತಿದ್ದಾರೆ. ಇದಕ್ಕೆ ನಾವು ಒಂದು ಷರತ್ತು ಹಾಕಿದ್ದೇವೆ. ಹಿಂದೆ ಮಾಡಿಕೊಂಡಿರುವ ಅಂಗ್ರಿಮೆಂಟಿನಲ್ಲಿ ಕೊಟ್ಟಿರುವ ರೇಟನ್ನು ಬದಲಾಯಿಸಿಕೊಳ್ಳುವುದಕ್ಕೆ ಅವರು ತಯಾರಾಗಿರುವರಾದರೆ, ಹೆಚ್ಚಿಗೆ ಬೊಂಬನ್ನು ಸರಬರಾಯಿ ಮಾಡುವುದಕ್ಕೆ ನಾವು ಒಪ್ಪುತ್ತೇವೆಂದು ತಿಳಿಸಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಹಿಂದಿನ ಅಗ್ರಿಮೆಂಟ್ ಎಷ್ಟು ವರ್ಷವಿದೆ.

ಶ್ರೀ ಬಿ. ರಾಚಯ್ಯ.—ಮೂವತ್ತು ವರ್ಷ.

ಒಬ್ಬ ಸದಸ್ಯರು.—ಯಾವ ತಾರೀಖಿನಿಂದ ?

ಶ್ರೀ ಬಿ. ರಾಚಯ್ಯ.—1956ರಿಂದ ಮೂವತ್ತು ವರ್ಷಗಳಿಗೆ ಕೊಟ್ಟಿದೆ. ಈ ಬಗ್ಗೆ Negotiations ನಡೆಯುತ್ತಿವೆ.

ಇಂಟಿಗ್ರೇಷನ್ ಕಮಿಟಿಯು ಬಂದನಂತರ ಬೇರೆ ಬೇರೆ ಪ್ರಾಂತ್ಯಗಳವರು ಈ ರೀತಿ ಕೆಲವು lease ಗಳನ್ನು ಕೊಟ್ಟಿದ್ದಾರೆ.

ಶ್ರೀ ಗಂಗಾಧರ ನಾಮೋಶಿ.—ಗುಲ್ಬರ್ಗದಲ್ಲಿಯೂ ಇದೇ ರೀತಿ ಒಂದು ರೈಲ್ವೆ ಲೈನ್ ಮಾಡಬೇಕೆಂದು ಹೇಳಿ ಒಬ್ಬ ಸಣ್ಣ ಕಂಟ್ರಾಕ್ಟರಿಗೆ ಕೊಟ್ಟಿದ್ದಾರೆ. ಇಂಟಿಗ್ರೇಷನ್ ಆದಮೇಲೆ ಈ ರೀತಿ ಮಾಡಿದ್ದಾರೆ ಅದನ್ನೆಲ್ಲಾ ರಿವೈಸ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ರಾಚಯ್ಯ.—States Reorganisation Act ಪ್ರಕಾರ ಬಹುಶಃ ಅದು ಸಾಧ್ಯವಿಲ್ಲವೆಂದು ನನ್ನ ಅಭಿಪ್ರಾಯ.

Prior to 1956, ಈ ಬಗ್ಗೆ ಏನೇನು ರಿಯಾಯತಿಗಳನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದರೋ ಅವನ್ನೆಲ್ಲಾ ಈ ಸರ್ಕಾರ ಗೌರವಿಸಬೇಕೆಂಬುದೇ ಉದ್ದೇಶ. ರಾಜ್ಯಗಳ ಪುನರ್ವಿಂಗಡಣೆಯ ಆಕ್ಟಿನ ಉದ್ದೇಶವೂ ಅದೇ. They want more.

ಶ್ರೀ ಬಿ. ಹುಚ್ಚೇಗೌಡ.—ಒಂದು ಲಕ್ಷ ಟನ್ ಮೇಲೆ ಅವರಿಗೆ ಎಷ್ಟು ಬೇಕು ಹೆಚ್ಚಿಗೆ ?

ಶ್ರೀ ಬಿ. ರಾಚಯ್ಯ.—ಅವರು ಸುಮಾರು 30 ಸಾವಿರ ಕೇಳುತ್ತಾರೆ. ಬಹುಶಃ ಹೆಚ್ಚಿಗೆ ಕೊಟ್ಟರೆ ತೆಗೆದುಕೊಳ್ಳುತ್ತಾರೆ. ಈಗ ಮೈಸೂರಿನ ಎಲ್ಲಾ ಭಾಗದಲ್ಲೂ ಬೊಂಬು ಸಹ ಹೂ ಬಿಟ್ಟು ಕೆಲವೇ ತಿಂಗಳಲ್ಲಿ ಒಣಗಿ ಹೋಗಿ ಸತ್ತುಹೋಗುತ್ತವೆ. ಅದನ್ನು ಹಾಗೆಯೇ ಬಿಟ್ಟರೆ ಬೆಂಕಿ ಹತ್ತಿಕೊಂಡು ಬರೀ ಆ ಗಿಡವೆಲ್ಲಾ ಕೆಟ್ಟು ಹೋಗುತ್ತದೆ. ಇದು ಆ ರೀತಿ ಸುಟ್ಟು ಹೋಗುವುದರಿಂದ ದೇಶಕ್ಕೆ ಬಹಳ ನಷ್ಟವಾಗುತ್ತದೆ ಇದೂ ಅಲ್ಲದೆ ಈಗ Greater Mysore ಎನ್ನುವುದಕ್ಕೆ 300 ಎಕರೆ ಜಮೀನನ್ನು ಬಿಡುಗಡೆಮಾಡಿದೆ. ಅದಕ್ಕೆ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಅಂತ ಮಿಲ್ಲನ್ನು ಹಾಕುತ್ತಾರೆ. ಅವರಿಗೆ ಲೈಸೆನ್ಸ್ ದೊರತ್ತಿದೆ. ನ್ಯಾಷನಲ್ ರೇಯಾನ್ಸಿಗೆ ನಂಜನಗೂಡಿನಿಂದ ಕೆಲವು ಭಾಗ ಕೊಟ್ಟಿದ್ದಾರೆ. ಅಕ್ಟೋಬರ್ ಮತ್ತು ನವಂಬರ್‌ಗಳಲ್ಲಿ ಇರತಕ್ಕ ಬೊಂಬನ್ನು ಕಲೆಕ್ಟ್ ಮಾಡಿದರೆ ಸ್ವಲ್ಪ ಸೇಫ್ಟಿ ಇದೆ. ಆ ದೃಷ್ಟಿಯಿಂದ ನಾನು ಈ ರೀತಿ ಹೇಳುತ್ತಿದ್ದೇನೆ. ಇನ್ನು ಭದ್ರಾವತಿ ಐರನ್ ವರ್ಕ್ಸ್ ಮತ್ತು ಚಾರ್ ಕೋಲ್ ಉತ್ಪತ್ತಿ ಫೇಲ್ ಆದ ವಿಷಯದಲ್ಲ ರೇಟುಗಳನ್ನು ರಿವೈಜ್ ಮಾಡಿದ್ದಾರೆ. 1961ನೇ ಇಸವಿಯಿಂದ 1962ನೇ ಇಸವಿಯವರೆಗೆ ಬರಬೇಕಾಗಿದೆ. ಈ ಬಗ್ಗೆ ಭದ್ರಾವತಿ ಐರನ್ ಅಂಡ್ ಸ್ಟೀಲ್ ವರ್ಕ್ಸ್ ಅವರು ಒಂದು ತಕರಾರು ಅಹವಾಲನ್ನು ಕೊಟ್ಟಿದ್ದಾರೆ. 1961ನೇ ಇಸವಿಯ ರೂಲ್ಸನ್ನು ಯಾವ ರೀತಿ ಜಾರಿಗೆ ತರಬೇಕು ಎಂದು ಯೋಚನೆ ಮಾಡುತ್ತಿದ್ದೇವೆ. ಬಹುಶಃ ರಿವೈಜ್ಡ್‌ರೇಟ್ ಪ್ರಕಾರ ಅವರು ಬಾಕಿ ಕೊಡಬೇಕಾಗುತ್ತದೆ. ಇನ್ನು ಅರಣ್ಯ ಉತ್ಪನ್ನಗಳೇನಿವೆ ಅವುಗಳಿಂದ ಸರ್ಕಾರಕ್ಕೆ ಎಷ್ಟರ ಮಟ್ಟಿಗೆ ದುಡ್ಡು ಬರಬೇಕಾಗಿದೆ, ಎಷ್ಟು ಬಿಗಿಯಾದ ಕಾಯಿದೆಗಳು ಆ ಬಗ್ಗೆ ಇರಬೇಕಾಗಿದೆ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ವ್ಯಾಪಾರಸ್ಥರಿಗೂ ಬಹಳ ಬಿಗಿಯಾದ ಕಾನೂನುಗಳನ್ನು ಮಾಡುತ್ತಿದ್ದೇವೆ. ಖಂಡಿತವಾಗಿ ನಷ್ಟಮಾಡಿಕೊಳ್ಳುವುದಕ್ಕೆ ಎಂದಿಗೂ ಪ್ರಯತ್ನ ಮಾಡುವುದಿಲ್ಲ. ಅದಕ್ಕಾಗಿ ತಮ್ಮ ಸಹಕಾರ ಬೇಕು. ಕಾಡುಗಳನ್ನು ಇನ್ನೂ ಹೆಚ್ಚಿಗೆ ಬೆಳೆಸುವುದಕ್ಕೋಸ್ಕರ ಇನ್ನೂ ಸ್ವಲ್ಪ ಹೆಚ್ಚಿನ ಬೇಡಿಕೆ ಬರುವ ಕಾಲ ಇದೆ. ಯಾವ ರೀತಿಯಲ್ಲೂ ಈ ಬಾಬಿಗೆ ಖೋತಾ ಮಾಡದೆ ಅರಣ್ಯ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ನಾನು ಕೇಳುತ್ತೇನೆ.

Sri D. VENKATARAMIAH (Robertsonpet).—Sandalwood trees in private lands in old Mysore are the monopoly of the Government. But in the New Mysore State sandalwood trees in private Hidvali lands are not the monopoly of Government. Will the Government take necessary steps to have uniformity of law in this matter?

Sri B. RACHAIAH.—In the course of the next few weeks, I am bringing in a legislation and with the co-operation of Hon'ble Members, I will be able to push through the Bill. ಇದಕ್ಕೆ ಸಂಬಂಧಪಟ್ಟಹಾಗೆ ಗಂಧದಮರ ಇವೊತ್ತೂ ಖಾಸಗಿ ಜಮೀನುಗಳ ಮೇಲೆ ಬೆಳೆಯುತ್ತಾ ಇದ್ದರೂ ಅದಕ್ಕೆ ಅಷ್ಟಾಗಿ ಉತ್ಸಾಹವಿಲ್ಲ. ಕೆಲವು ಸಂದರ್ಭಗಳಲ್ಲಿ

ಬೇರೆಯವರು ಬಂದು ಕದ್ದುಕೊಂಡು ಹೋಗಿ ಹಾಳು ಮಾಡುತ್ತಿದ್ದಾರೆ. ಶ್ರೀಮಾನ್ ಹುಚ್ಚೇಗೌಡರು ಒಂದು ವಿಷಯವನ್ನು ಪ್ರಸ್ತಾಪಮಾಡಿದರು. ರೈತರು ಅದನ್ನೇನು ಬೆಳೆಯುತ್ತಿದ್ದಾರೆ ಆದರೆ ಕನಿಷ್ಠ ಪಕ್ಷ ಶೇ. 50 ಭಾಗದಷ್ಟಾದರೂ ಅವನ ಒಂದು ಉತ್ಪತ್ತಿಮೇಲೆ ಲಾಭ ಸಿಕ್ಕುತ್ತಿಲ್ಲ. ಆ ರೀತಿ ಮಾಡದೆ ಅದನ್ನು ಚೆನ್ನಾಗಿ ರಕ್ಷಣೆ ಮಾಡಿದರೆ ಇನ್ನೂ ಹೆಚ್ಚಿಗೆ ಆ ಬೆಳೆಯನ್ನು ಬೆಳೆಸುವುದಕ್ಕೆ ಅವಕಾಶವಾಗುತ್ತದೆ. ಇಡೀ ಸಂಸ್ಥಾನದಲ್ಲೆಲ್ಲಾ ಇದನ್ನು ಮನಾಪಲಿ ಮಾಡಬೇಕೆಂಬ ಬಗ್ಗೆ ಒಂದು ಮಸೂದೆಯನ್ನು ತರುವ ಪ್ರಯತ್ನ ಮಾಡುತ್ತಿದ್ದೇನೆ.

Sri D. VENKATARAMIAH. Have any remedies been found out to fight the disease for sandalwood trees ?

Sri B. RACHAIAH.—We have not been able to find out any remedy for that. We are at a loss to know it.

Sri D. VENKATARAMIAH.—Are experiments conducted on that?

Sri B. RACHAIAH.—Experiments are being conducted but scientists have not been able to find out the remedy.

Sri M. C. BASAPPA (Chamarajnagar).—Why not an ordinance be issued immediately ?

Sri B. RACHAIAH.—While the session is going on, we cannot come forward with an ordinance.

Sri M. C. BASAPPA.—If the Government feels that the Assembly is in session, then they can bring a Bill now alone.

ಶ್ರೀ ಬಿ. ರಾಚಯ್ಯ.—ಆ ರೀತಿ ಮಸೂದೆಯನ್ನು ತರುವುದಕ್ಕೆ ತಮ್ಮೆಲ್ಲರ ಅನುಮತಿಬೇಕು ಎಂಬುದಾಗಿ ನಾನು ಕೇಳುತ್ತಿದ್ದೇನೆ. ಅನಂತರ ಅದೇನೂ ತಡವಾಗುವುದಿಲ್ಲ.

ಶ್ರೀ ವಿ. ಎಂ. ದೇವ್.—ಫಾರೆಸ್ಟ್ ಪ್ರೊಡ್ಯೂಸ್ ಜಾಸ್ತಿ ಬರುವುದಕ್ಕೆ ನಾವು ಹೇಳಿರುವ ಸಲಹೆಗಳನ್ನು ಪರ್ಯಾಲೋಚಿಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಖಾಸಗೀ ಸಂಸ್ಥೆಗಳಿಗೆ ಮತ್ತು ಕೆಲವು ಕಾರ್ಖಾನೆಗಳಿಗೆ ಇದನ್ನು ಕೊಡಲಿಕ್ಕೆ ಅದು ಫಲದಾಯಕವಾಗಿಲ್ಲ. ಅದನ್ನು ಬಹುಶಃ ಭದ್ರಾವತಿಯವರಿಗೆ ಸ್ವಲ್ಪ ಭಾಗವನ್ನು ಕೊಡಬೇಕೆಂದು ಯೋಚನೆಮಾಡಿದ್ದೇವೆ. ಹಾಗೆಯೇ ಇನ್ನೂ ಕೆಲವು ಪ್ರೈವೇಟ್ ಕಂಪೆನಿಗಳವರು ಈಗ ಕೇಳುತ್ತಿದ್ದಾರೆ. ಅವು ಸ್ವಲ್ಪ ಲಾಭದಾಯಕವಾಗಿ ಚೆನ್ನಾಗಿ ಬೆಳೆಯುವ ಹಾಗಿದ್ದ ಪಕ್ಷದಲ್ಲಿ ಎಕ್ಸ್‌ಪೆರಿಮೆಂಟ್ ಮಾಡೋಣವೆಂದು ಇದ್ದೇವೆ. ಅಲ್ಲದೆ ತಮ್ಮ ಸಲಹೆಗಳನ್ನೂ ಸಹ ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಸೂಳ್ಯ).—ಅರಣ್ಯ ಪ್ರದೇಶದಲ್ಲಿ ವಾಸವಾಗಿರುವ ರೈತರಿಗೆ ಗುಡ್ಡಗಾಡು ಪ್ರದೇಶವೆಲ್ಲಾ ಸೇರಿಹೋದ ಮೇಲೆ ಗೇಣಿ ಕೊಡುವ ಪದ್ಧತಿ ಈಗ ಮದ್ರಾಸ್‌ನಲ್ಲಿರುವುದರಿಂದ ಆ ರೀತಿ ಇಲ್ಲಿಯೂ ಹುಲ್ಲನ್ನಾದರೂ ಲೀಜಿಗೆ ಅವರಿಗೆ ಕೊಡುವ ವಿಚಾರದಲ್ಲಿ ಏನು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಈಗಾಗಲೇ ಕೆಲವು ಭಾಗಗಳಲ್ಲಿ ಆ ರೀತಿ ಟಾಂಗಾ ಸಿಸ್ಟಂ ಇದೆ. ಕೆಲವು ವರ್ಷಗಳಾದ ಮೇಲೆ ಮಧ್ಯೇ ಕಾಡುಗಳನ್ನು ಬೆಳೆಸುತ್ತಾರೆ. ಅದನ್ನು ಕತ್ತರಿಸಿಹಾಕುವುದರಿಂದ ಕೆಲವು ಸಂದರ್ಭಗಳಲ್ಲಿ ಅವರನ್ನು ಎವಿಕ್ಟ್ ಮಾಡುವ ಆವಶ್ಯಕತೆ ಬಂದಿದೆ. ಒಟ್ಟಿನಲ್ಲಿ ಇಲ್ಲಿ ಭೂಮಿಯನ್ನು ಸಾಗುವಾಡುವುದಕ್ಕೆ ಇಲ್ಲ ಬೇಚರಾಕು ಹಳ್ಳಿಗಳು ಇವೆಯೆಂದು ಶ್ರೀಮಾನ್ ವೆಂಕಟೇಗೌಡರು ಹೇಳಿ ಆ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇನ್ನು ಕೆಲವು ರೆವಿನ್ಯೂ ಲ್ಯಾಂಡುಗಳಲ್ಲಿ ಸ್ಟೇಟ್ ಫಾರೆಸ್ಟ್ ಲ್ಯಾಂಡ್‌ಗಿಂತಲೂ ಬೆಳೆ ಚೆನ್ನಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ 1,875 ರೂಪಾಯಿಗಳಿಗೆ ಮಾಲ್ಕಿ ನಿಗದಿಮಾಡಬೇಕೆಂದು ಹೇಳುತ್ತಿದ್ದರು. ಈಗ ಅದನ್ನೇ ಹದಿನಾರು ಸಾವಿರ ಎಂದು ಮಾಡಿಕೊಂಡಿದ್ದಾರೆ. ರೆವಿನ್ಯೂ ಲ್ಯಾಂಡ್ ಸ್ಟೇಟ್ ಮೈನರ್ ಫಾರೆಸ್ಟ್ ಲ್ಯಾಂಡಿಗಿಂತಲೂ ಚೆನ್ನಾಗಿರುತ್ತದೆ. ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ರೆವಿನ್ಯೂ ಲ್ಯಾಂಡ್ಸ್‌ನಲ್ಲಿ ಹೆಚ್ಚಿನ ಕಾಡು ಇದೆ. ಅದನ್ನು ರೆವಿನ್ಯೂ ಇಲಾಖೆಯೇ ತೆಗೆದುಕೊಂಡು ಮ್ಯಾನೇಜ್ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ. ಆದರೆ ಫಾರೆಸ್ಟ್ ಇಲಾಖೆಯಲ್ಲಿ ಒಳ್ಳೆಯ ಕಾಡುಗಳಿಲ್ಲ, ಅರಣ್ಯ ಪ್ರದೇಶ ಸಾಕಷ್ಟು ಇಲ್ಲವೇ ಇಲ್ಲ. ಸಾಗು ಮಾಡುವುದಕ್ಕೆ ಮಟ್ಟವಾಗಿರತಕ್ಕ ಭೂಮಿಯನ್ನು ಕೂಡ ಕೆಲವು ಸಂದರ್ಭಗಳಲ್ಲಿ ರಿ-ಹ್ಯಾಬಿಲಿಟೇಷನ್ ಮಾಡುವುದಕ್ಕೋಸ್ಕರ ಕೊಡಬೇಕಾಗಿದೆ. ಅಂತಹ ಅನಿವಾರ್ಯ ಸಂದರ್ಭಗಳು ವಿಶೇಷವಾಗಿ ಬರುತ್ತವೆ. ಸರ್ಕಾರ ಅದನ್ನೆಲ್ಲಾ ಯೋಚನೆಮಾಡುತ್ತದೆ. ಒಟ್ಟಿನಲ್ಲಿ ಬಹುಶಃ ಮಾನ್ಯ ಸದಸ್ಯರು ಕೇಳಿದ್ದಕ್ಕೆಲ್ಲಾ ನಾನು ಉತ್ತರ ಕೊಟ್ಟಿದ್ದೇನೆಂದು ನಾನು ತಿಳಿಯುತ್ತೇನೆ.

Sri B. D. JATTI.—Mr. Speaker, Sir, there was a cut motion on Sales tax and Agricultural Income Tax. The main points which were raised by some of the Hon'ble Speakers who participated in the debate were harassment, tax evasion and filling up of vacancies. While making reference to harassment, many of the Hon'ble Members suggested that there was scope for Government to collect more revenue from sales-tax. To show how the Department is working I am giving figures for three years, 1959-60, 1960-61 and 1961-62. Sir, the Sales-tax collected in the year 1959-60 was Rs. 536 lakhs ; in the year 1960-61, it was Rs. 599 lakhs ; in the year 1961-62, it is Rs. 710 lakhs. For the year 1962-63, the receipts are expected to be over Rupees ten crores. So, from the figures which I have given just now, every Hon'ble Member will be convinced that there is regular increase in the collection of sales-tax from year to year. Sir, the figures which I have given just now include arrears. Now, I will give the Demand

(SRI B. D. JATTI)

for the four years and also the collections made so that the Hon'ble Members will know how the Department is working efficiently.

6 P.M.

Sri V. M. DEO.—Is it in relation to the actual expenditure incurred in that connection ?

Sri B. D. JATTI.—

Year	Demand	Collection.	Balance	Percentage
	lakhs	lakhs	lakhs	
1958-59	560.12	448.48	111.7	80
1959-60	572.81	476.29	96.51	83
1960-61	598.04	534.13	63.91	89
1961-62	742.19	663.37	78.82	90

Sir, from these figures the Hon'ble Members will be satisfied that the percentage of recovery is very good. The balance of Rs. 156.25 lakhs at the end of March 1962 includes the amount not yet due, i.e., Rs. 46.84 lakhs amount held up in civil courts Rs. 4.64 lakhs, amounts covered by stay orders Rs. 41.94 lakhs, amounts covered revenue recovery act 35.3 lakhs, amount written off Rs. 8 lakhs, pending in Civil Courts Rs. 14.53 lakhs, amount due from Government Departments 4.91 lakhs. (Total 156.25 lakhs).

Many of the Hon'ble Members have suggested that in order to avoid evasion, proper arrangements should be made by the department concerned. The department has created an intelligence section to detect and prevent evasion of sales-tax and it has been possible for us to recover more sales-tax. There is improvement in the turnover declared by the individual dealers. Steps are taken by the Government to establish check posts. This method was suggested by the Hon'ble Member Sri K. P. Gadag and some other Hon'ble Members. This suggestion has been accepted and Government have taken action. I hope it will be possible to avoid evasion and also recover more money. After 1-11-1956 it was difficult to recover more money because we had no uniform law. There were different Acts in different areas. Now it has been possible for us to have a uniform Act. This Act was passed in 1957 and it has been brought into force from 1-10-1957. This is the overall picture of the Sales-Tax.

Sri C. J. MUCKANNAPPA.—What are the powers of the Inspectors ?

Sri. B. D. JATTI.—They have got powers. They are supervising the work done by the Inferior Officers and they will try to collect more money.

I will try to reply to some of the points raised by some Hon'ble Members who have taken part in the debate.

The Hon'ble Member Sri B. Hutche Gowda said that better assessments must be made and correct incomes must be ascertained. Instructions are issued to the Agriculture Income Tax Officers that the incomes determined by them must be based on proper data.

Sri Madiah Gowda said that there seemed to be heavy leakage of revenue on account of faulty and under-estimates made by tax officers. Assessments made by the Assessing officers have been checked and scrutinised by the inspecting staff. Sri C. J. Mukkannappa wanted to know the duties and functions of the Inspectors. Wherever under-assessments are made action is being taken to revise the assessments for which sufficient provision is available under the Sales Tax Act. The Hon'ble Member Sri G. Venkatai Gowda has spoken about the sugar cane cesses and the levy of purchase tax on sugar cane. These figures are included in the current year's recovery. He also suggested that this tax amounted to over Rs. 50 to 60 lakhs. Sugar Cane purchase tax came into force 1-10-1961. So excluding this amount we can still say that the recovery is more and the income has also increased. There is no doubt about it. He said that a time limit of six months should be fixed for making final assessments. There is no considerable improvement in the matter of completing the final assessment. So it is not necessary for us to make any other arrangement.

He also suggested that betting tax should be raised to the maximum of 25 per cent. This matter is under the consideration of the Government and if there is support for this, Government will consider and take necessary action. Sri Madaiah Gowda suggested that the Agriculture Income Tax Act should be abolished to give relief. Agriculture income tax is levied on the income derived from commercial crops. The poorer sections are not taxed if their income is less than Rs. 3,500. Only persons getting more than Rs. 3,500 are required to pay. In the case of joint Hindu families they are required to pay if the income exceeds Rs. 7.000.

The Hon'ble Member Sri K. P. Gadag has made some suggestions to plug the loopholes. Secondly he said that it was possible to increase the revenue substantially. As I have already stated an intelligence section has been now introduced, and check posts have been set up. The suggestion that loopholes should be avoided, has been attended to. He also suggested that evasions were taking place by means of keeping double sets of accounts. By the establishment of intelligence section, in Bangalore it is hoped that all these defects could be avoided. There is now an intelligence section in Bangalore and after taking some trial if we find that section will work well and by that there will be considerable improvement in the collection of taxes, we want to introduce it in other parts of the Mysore State.

Sri M. R. PATIL (Hubli).—May I know from which department personnel to this intelligence section is drawn ?

Sri B. D. JATTI.—Some of the officers of the Sales Tax Department are drawn from the Revenue Department. Most of them are trained for this special work.

The Hon'ble Member Sri Muckannappa said that 120 C. T. Inspectors are there, but they are not properly working. According to my information they are doing very useful work.

Then it was said that respectable merchants were being humiliated by being dragged to courts. This is not correct. Proper notices are given to the merchants or dealers and sufficient time is given. If they do not give money in time, then as last resort Government will have to send their cases to court, but it is not the intention of Government to humiliate anybody who is respectable.

Sri K. P. GADAG.—Humiliation is there. I also cited one instance of humiliation by the tax collector.

Sri B. D. JATTI.—If there are such cases and if such cases are brought to the notice of Government, then we will issue intructions to the officers that they should behave well and treat all the dealers honourably. Sri Muckannappa Suggested that betting tax should be enhanced to 25 per cent. He also said that the entertainment tax also should be enhanced. These are valuable suggestions which Government will take note of and try to get more money.

I may mention that there is an Advisory Committee to give proper advice in commercial tax matters. If there are any anomalies the members of that Committee can bring such cases to the notice of the Commissioner and if there is any injustice done to anybody Government will try to see that full justice is meted out to them.

Then I may point out for the information of the House that the percentage of expenditure on the department in relation to receipts works out to 3.11 which is comparatively very low. The percentage of expenditure on General Administration as against the total revenue of the State works out to 9.31. The percentage of expenditure on the Sales Tax Department compared to the total revenue of the State works out to. 33.

After giving this information, I think the House will be satisfied. I oppose all the cut motions.

Sri V. M. DEO.—What is the total amount of revenue collected as agricultural income tax from cash crops ?

Sri B. D JATTI.—I do not have the figures readily available.

Mr. DEPUTY SPEAKER.—The question is:

"That the respective sums not exceeding the amounts shown in the list of demands circulated to

(Mr. DEPUTY SPEAKER)

Members be granted to defray the charges which will come in course of payment during the period ending 31st March 1963 in respect of Demands Nos. 1, 5, 38 and 51."

The motion was adopted.

[*As directed by the Speaker, the motions for Demands for Grants which were adopted by the House are reproduced below*:—]

Demand No. 1.—Taxes on Income Other than Corporation Tax.

4. *Taxes on Income other than Corporation Tax.*

"That a sum not exceeding Rs. 2,48,000 be granted to the Government to defray the charges which will come in course of payment during the financial year for the period ending 31st day of March 1963, in respect of 'Taxes on Income other than Corporation Tax."

Demand No. 5.—Sales Tax—Administration.

12. *Sales Tax.*

"That a sum not exceeding Rs. 33,28,000 be granted to the Government to defray the charges which will come in course of payment during the financil year for the period ending 31st day of March, 1963, in respect of 'Sales Tax'."

Demand No. 38.—Forest.

70. *Forest.*

"That a sum not exceeding Rs. 3,97,70,000 be granted to the Government to defray the charges which will come in course of payment during the financial year for the period ending 31st day of March 1963, in respect of 'Forest'."

Demand No. 51.—Miscellaneous Capital Account outside the Revenue Account.

119. *Capital Outlay on Forests.*

"That a sum not exceeding Rs. 7,50,000 be granted to the Government to defray the charges which will come in course of payment during the financial year for the period ending 31st day of March 1963, in respect of 'Capital Outlay on Forests'."

Mr. DEPUTY SPEAKER.—The House will now rise and meet on Monday at 1-00 P. M.

The House adjourned at Fifteen Minutes past Six of the Clock to meet again at One of the Clock, on Monday the 16th July 1962.

WD 8222—GPB—900—25-1-63